ಕಲ್ಯಾಣ ಕಿರಣ

ಏಪ್ರಿಲ್ ೨೦೦೦

ಬೆಲೆ : ೫ ರೂ.



Digitalized by e-Sahithya Documentation Forum
Sponsored by Sarayu Foundation Trust

★ ಕಲ್ಯಾಣ ಕಿರಣ ★

ಸಂಪುಟ ೩೧ | ಬಸವ ಶಕೆ ೮೬೬ | ಆಜೀವ ಸದಸ್ಯತ್ವ ೫೦೦ ರೂ

ಸಂಚಿಕೆ ೪ | ಏಪ್ರಿಲ್-೨೦೦೦ | ವಾರ್ಷಿಕ ಚಂದಾ ೫೦ ರೂ

ಕಿರಣಗನ್ನಡಿ

ಬರಲಿರುವ ಶರಣರ ಜಯಂತಿಗಳು

ಅಲ್ಲಮ ಪ್ರಭು ಜಯಂತಿ	ಏಪ್ರಿಲ್ ೫
ಅಕ್ಕ ಮಹಾದೇವಿ ಜಯಂತಿ	ಏಪ್ರಿಲ್ ೧೮
ಬಸವ ಜಯಂತಿ	ಮೇ ೬

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

★ ಕಲ್ಯಾಣ ಕಿರಣ ★

ಸಂಪುಟ ೩೧ | ಬಸವ ಶಕೆ ೮೬೬ | ಆಜೀವ ಸದಸ್ಯತ್ವ ೫೦೦ ರೂ

ಸಂಚಿಕೆ ೪ | ಏಪ್ರಿಲ್-೨೦೦೦ | ವಾರ್ಷಿಕ ಚಂದಾ ೫೦/- ರೂ

ದೇವ ಚರಣಕೆ ನುಡಿ ನೈವೇದ್ಯ

ಹೇ ಪರಮಾತ್ಮಾ ಲೋಕದ ಮಿತ್ರ
ನೀನೆ ಸರ್ವಕು ಕಾರಣ ಕರ್ತ ॥ ಪಲ್ಲವಿ॥

ವಿಘ್ನ ನಿವಾರಕ ಶಕ್ತಿಯು ನೀನೆ
ಬುದ್ಧಿ ಪ್ರದಾಯಕ ದೇವನು ನೀನೆ
ವಿದ್ಯಾ ಸಂಪದ ಶಾಂತಿ ಸೌಖ್ಯಗಳ
ಮಹಾದಾತನು ನೀನೇ ॥೧॥

ಜಗವನು ರಚಿಸಿದ ತಂದೆಯು ನೀನು
ಸೊಗದಿಂ ಪಾಲಿಪ ತಾಯಿಯು ನೀನು
ದುರಿತ ಸಂಕುಲ ಮುಸುಗುತ ಬರಲು
ಪಾರು ಮಾಡುವ ಕರುಣೆಯು ನೀನು ॥೨॥

ವೇದಾಂತಿಗಳು ಪರಬ್ರಹ್ಮನೆಂಬರು
ಆಗಮಿಕರು ಪರಶಿವನೆಂಬರು
ಅಲ್ಲಹ ಯಹೋವ ಸುಪ್ರೀಂ ಗಾಡ್
ಲಿಂಗದೇವಾ, ನಿನ್ನಯ ಹೆಸರು ॥೩॥

ಮರೆವಿನ ತಿಮಿರದಿ ಮನವು ಮುಲುಗುತ
ಮುಂದಡಿ ಇಡದೆಯೆ ಬಳಲುತಿರೆ
ಅರಿವಿನ ಬೆಳಕನು ಪಥದಲಿ ಚೆಲ್ಲುತ
ಮುಂದಡಿ ಇಡಿಸುವ ಗುರು ನೀನು ॥೪॥

ಅಂದಿನ ಅನ್ನವ ನೀಡುವ ನೀನು
ಬಂಧನ ಹರಿಸುವ ಭವಹರ ಭಾನು
ಬಾಳಲಿ ನಡೆಯಲು ಆತ್ಮಬಲವ
ನೀಡುವ ಮಂಗಲ ಶಕ್ತಿಯು ನೀನು ॥೫॥

ನಿನ್ನನ್ನಲ್ಲದೆ ಯಾರನು ಬೇಡೆನು
ಬನ್ನವ ಕಳೆಯುವ ಚಿನ್ಮಯನೆ
ಎನ್ನಯ ಜೀವನ ಸರ್ವ ಸಂಪದದಿ
ಬೆಳಗಲು ಕರುಣಿಸು ಸಚ್ಚಿದಾನಂದ ॥೬॥

-ಮಾತಾಜಿ

(ಶರಣ ಬಂಧುಗಳೇ, ಶರಣ ಮೇಳದ ನಂತರ ಧಾರವಾಡದಲ್ಲಿ ಒಂದು ದಿನ ಪ್ರಾರ್ಥನೆ ಮಾಡುವಾಗ ೩ನೆಯ ಪದ್ಯವು ಮನಸ್ಸಿನಲ್ಲಿ ಮೂಡಿ ಬಂದಿತು. ಈ ನಾಲ್ಕು ವಾಕ್ಯಗಳ ಪದ್ಯವನ್ನು ಸೇರಿಸುವುದು ಒಳ್ಳೆಯದೋ ಅಲ್ಲವೋ ? ಈ ಬಗ್ಗೆ ನಿಮ್ಮಿಂದ ಅಭಿಪ್ರಾಯವನ್ನು ನಿರೀಕ್ಷಿಸುತ್ತೇನೆ. ಪತ್ರ ಬರೆದು ತಿಳಿಸಿರಿ. **-ಮಾತಾಜಿ**)

Digitalized by e-Sahithya Documentation Forum
Sponsored by Sarayu Foundation Trust

ಮರುಕಳಿಸಿದ ಕಲ್ಯಾಣಕ್ರಾಂತಿ

(ಧರ್ಮಕ್ರಾಂತಿಯ ಧೀರಯೋಗಿಣಿ ಪೂಜ್ಯಶ್ರೀ ಜಗದ್ಗುರು ಮಾತೆ ಗಂಗಾದೇವಿ)

ಇಂದಿಗೆ ೮೦೦ ವರ್ಷ ಪೂರ್ವದಲ್ಲಿ ; ಫಾಲ್ಗುಣ ಮಾಸದಲ್ಲಿ ಬರುವ ಹೋಳಿ ಹುಣ್ಣಿಮೆಯ ಹಿಂದಿನ-ಮುಂದಿನ ದಿನಗಳು ಲಿಂಗಾಯತ ಧರ್ಮದ ಇತಿಹಾಸದಲ್ಲಿ ಬಹಳ ಮಹತ್ವಪೂರ್ಣವಾದ ದಿನಗಳು. ಅಸ್ಪೃಶ್ಯನಾಗಿ ಹುಟ್ಟಿ ಶರಣನಾದ ಮಹಾನುಭಾವಿ ಹರಳಯ್ಯ, ಬ್ರಾಹ್ಮಣ ಕುಲದಲ್ಲಿ ಹುಟ್ಟಿ ಶರಣನಾದ ಮಧುವರಸ-ಉಭಯತರ ಮಧ್ಯೆ ಬೀಗತನವಾಗುವಂತೆ ಹರಳಯ್ಯನ ಮಗ ಶೀಲವಂತನಿಗೆ ಮಧುವರಸರ ಮಗಳು ಲಾವಣ್ಯವತಿಯನ್ನು ಕೊಟ್ಟು ವಿವಾಹವನ್ನು ಅನುಭವ ಮಂಟಪದಲ್ಲಿ ವಿಶ್ವಗುರು ಬಸವಣ್ಣನವರು ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರ ನೇತೃತ್ವದಲ್ಲಿ ಎಲ್ಲ ಶರಣರ ಸಮ್ಮುಖದಲ್ಲಿ ನೆರವೇರಿಸಿದುದು ಫಾಲ್ಗುಣ ಮಾಸದ ಏಕಾದಶಿಯಂದು. ಈ ಕ್ರಾಂತಿಕಾರಿ ವಿವಾಹವು ಸಂಪ್ರದಾಯ ಜಡರನ್ನು ಸಿಡಿದೆಬ್ಬಿಸಿತು. ಭಾರತ ದೇಶದಲ್ಲಿ ನಡೆದ ಪ್ರಪ್ರಥಮ, ವರ್ಣಾಂತರ ವಿವಾಹವಿದು. ಅದೂ ಅನುಲೋಮ ವಿವಾಹ (ಕೆಳಗಿನ ಜಾತಿಯ ಹೆಣ್ಣು ಮೇಲಿನ ಜಾತಿಯ ಗಂಡನಮನೆ ಮನೆಗೆ ಹೋಗುವ)ವಾಗದೆ ಪ್ರತಿಲೋಮ ವಿವಾಹವಾಗಿ ಬ್ರಾಹ್ಮಣ ವರ್ಣದ ಹುಡುಗಿ ಅಸ್ಪೃಶ್ಯನ ಮನೆಗೆ ಹೋದುದು ವರ್ಣವಾದಿಗಳನ್ನು ಕೆರಳಿಸಿತು. ಪ್ರತಿಫಲವಾಗಿ ವಿಶ್ವಗುರು ಬಸವಣ್ಣನವರ ಗಡಿಪಾರು ನಡೆಯಿತು. ರಾಕ್ಷಸನಾಮ ಸಂವತ್ಸರ (೧೧೯೬)ದ ದ್ವಾದಶಿಯಂದು ಬಸವಣ್ಣನವರ ಗಡಿಪಾರು, ತ್ರಯೋದಶಿಯಂದು ಹರಳಯ್ಯ-ಮಧುವರಸ-ಶೀಲವಂತರ ಬಂಧನ, ಚತುರ್ದಶಿಯಂದು ಶರಣರಿಗೆ ಎಳೆಹೂಟೆ ಶಿಕ್ಷೆ, ಹೋಳೀ ಹುಣ್ಣಿಮೆಯಂದು ಬಿಜ್ಜಳನ ವಧೆ, ವಚನ ಸಾಹಿತ್ಯದ ಸಂರಕ್ಷಣೆಗಾಗಿ ಕಲ್ಯಾಣದಿಂದ ಶರಣರ ನಿರ್ಗಮನ. ಚನ್ನಬಸವಣ್ಣನವರ ನೇತೃತ್ವದಲ್ಲಿ ಶರಣರು ಉಳವಿಯತ್ತ ಸಾಗಿದರು. ಶರಣ ಧರ್ಮದ ಇತಿಹಾಸದಲ್ಲಿ ಇದು ರೋಚಕ ಪ್ರಸಂಗ ; ತ್ಯಾಗ-ಬಲಿದಾನಗಳ ವೀರಗಾಥೆ.

ಇದು ನಮಗೆ ಹೆಮ್ಮೆಯ ಪ್ರಸಂಗ ; ಏಕೆಂದರೆ ೨೦ನೆಯ ಶತಮಾನದ ಕೊನೆಯ ವರ್ಷ, ೨೧ನೆಯ ಶತಮಾನಕ್ಕೆ ಕೇವಲ ಒಂಭತ್ತು ತಿಂಗಳು ಮಾತ್ರ ಬಾಕಿ ಇರುವಾಗ, ದಲಿತ ಹುಡುಗನೋರ್ವ ರೆಡ್ಡಿ ಹುಡುಗಿಯನ್ನು ಪ್ರೀತಿಸಿದ ಎಂದು ಕಂಬಾಲಪಲ್ಲಿ (ಕೋಲಾರ ಜಿಲ್ಲೆ)ಯಲ್ಲಿ ದಲಿತರ ಸಜೀವ ದಹನ ಮಾಡಿರುವಾಗ ; ದಾವಣಗೆರೆಯಲ್ಲಿ ಶಾಸಕ ಡಾ॥ ವೈ. ನಾಗಪ್ಪನವರ ಮಗ ಕಿರಣ ಮತ್ತು ಹನಗವಾಡಿ ವಿರುಪಾಕ್ಷಪ್ಪನವರ ಮಗಳು ಜ್ಯೋತಿ ಅವರು ಪ್ರೇಮಿಸಿ, ವಿವಾಹವಾದುದಕ್ಕೆ ಹುಯಿಲೆಬ್ಬಿಸಿರುವ ಜನರು ಇರುವಾಗ ನಮ್ಮ ಶರಣರು ಯಾವ ಭಿನ್ನಾಭಿಪ್ರಾಯ ತಳೆಯದೆ ಕ್ರಾಂತಿಕಾರಿಯಾದ ವಿವಾಹವನ್ನು ಒಮ್ಮತದಿಂದ ಬೆಂಬಲಿಸಿದರು ಎಂಬುದೇ ನಮಗೆ ಅಭಿಮಾನದ ಸಂಗತಿ.

ಆದರೆ, ಅಂದು ವೈದಿಕ ಪುರೋಹಿತ ಶಾಹಿಯ ಪ್ರಚೋದನೆಯಿಂದ, ದೌರ್ಜನ್ಯದಿಂದ ನಮ್ಮ ಶರಣರು ಬಹಳ ಬಹಳ ಕಷ್ಟಪಟ್ಟರು, ನೊಂದು ನಲುಗಿದರು, ಕಾಡು ಮೇಡಿನಲ್ಲಿ ಅಲೆದರು.

೮೦೦ ವರ್ಷಗಳ ಬಳಿಕ ಇಂಥದೊಂದು ಘಟನೆ ಪುನಃ ಮರುಕಳಿಸಿರುವುದು ಮತ್ತು ಅದೇ ದಿನ ಸಂಭವಿಸಿರುವುದು ಸೋಜಿಗಪೂರ್ಣ, ವಿಷಾದನೀಯ, ಬಸವ ಧರ್ಮೀಯರಿಗೆ ಒಂದು ಎಚ್ಚರಿಕೆಯ ಗಂಟೆ. ಆ ಘಟನೆಗೂ ಈಗ ನಡೆದುದಕ್ಕೂ ಕೇವಲ ತುಲನೆಯನ್ನು ಮಾತ್ರ ಇಲ್ಲಿ ಮಾಡಲಾಗಿದೆ.

ಹೋಳಿ ಹುಣ್ಣಿಮೆ ದಿ.೨೦-೩-೨೦೦೦ದಂದು ; ಹಿಂದಿನ ದಿನ ಸಂಜೆ ಪ್ರವಚನದ ವೇದಿಕೆಯ ಮೇಲೆ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಕಣ್ಣು ಮುಚ್ಚಿ ಪ್ರಾರ್ಥನೆ ಮಾಡಿಸುತ್ತಿರುವಾಗ ಮೈಕ್ ನಿಂತಿದೆ. ಸೋಜಿಗವಾಗಿ ಕಣ್ಣು ತೆರೆದಾಗ ಎದುರಿಗೆ ಪಿ.ಎಸ್.ಐ ಪ್ರಹ್ಲಾದ ಅವರ ಆದೇಶ. ''ನೀವು ಪ್ರವಚನ ಮಾಡಕೂಡದು'' ಎಂದು. ಪೂಜ್ಯ ಗಂಗಾಮಾತಾಜಿಯವರಿಗೆ ಆಶ್ಚರ್ಯ. ''ಜನರು ಸಹಸ್ರಾರು ಸಂಖ್ಯೆಯಲ್ಲಿ ಶಾಂತವಾಗಿ ಕುಳಿತು ಪ್ರವಚನ ಕೇಳುವಾಗ ಈ ರೀತಿ ಹೇಳಲು ಪಿ.ಎಸ್.ಐ ಗೆ ಏನು ಅಧಿಕಾರ ?'' ಆಗ ನೋಡಿದರೆ ಪಿ.ಎಸ್.ಐ ಹಿಂದೆ ೫-೬ ಜನ ಬಸವ ಕೇಂದ್ರ ಮತ್ತು ಬಸವ ಬಳಗದವರು. ಈ ಎರಡೂ ಸಂಸ್ಥೆಗಳು ಬರೀ ಕುಕೃತ್ಯ-ಗೂಂಡಾಗಿರಿಗಳಲ್ಲೇ ನಿರತವಾಗಿರುವುದರಿಂದ **ಸತ್ಯ-ಶಾಂತಿ-ಅಹಿಂಸೆ-ತ್ಯಾಗದ ಪ್ರತಿರೂಪವಾದ ''ಬಸವ'' ಎಂಬ ನಮ್ಮ ಪವಿತ್ರ ಮಂತ್ರ ಅಪವಿತ್ರವಾಗುವುದು ಬೇಡ** ಎಂದು ''ಬಸವಾ'' ಎಂಬ ಪವಿತ್ರನಾಮವನ್ನು ಕೆಳಕಂಡ ಹೆಸರುಗಳಿಂದ ತೆಗೆದು ಬಳಸುತ್ತಿದ್ದೇವೆ.

ಬಸವ ಕೇಂದ್ರ (ತರಲೆ ಕೇಂದ್ರ)

ಬಸವ ಬಳಗ (ಜಗಳದ ಬಳಗ)

ಬಸವರಾಜನ್ (ರಾಜನ್) ಚಿತ್ರದುರ್ಗ ಮಠದ ಆಡಳಿತಾಧಿಕಾರಿ

ಇತ್ತೀಚೆಗೆ ಪ್ರವಚನದ ಪ್ರಭಾವಕ್ಕೆ ಒಳಗಾಗಿ, ದಿನ ನಿತ್ಯ ತಪ್ಪದೆ ಪ್ರವಚನ ಕೇಳುತ್ತಿದ್ದ ಓರ್ವ ಅವಿದ್ಯಾವಂತ ಗೃಹಿಣಿ ನಿರ್ಮಲಾ ಎಂಬುವವರು ಆ ತರಲೆ ಕೇಂದ್ರ, ಜಗಳದ ಬಳಗದವರನ್ನು ಕುರಿತು ಹೇಳಿದರಂತೆ, ''ನೀವು ಎಂಥಾ ಜನ ! ನಮಗೆ ನಮ್ಮ ತಾಯಿ ತಂದೆ ಯಾರೂ ಇಂಥ ಜ್ಞಾನವನ್ನು ಜೀವಮಾನದಲ್ಲೇ ಕೊಟ್ಟಿರಲಿಲ್ಲ ಎಂಥಾ ತಿಳುವಳಿಕೆ, ಜ್ಞಾನವನ್ನು ಪೂಜ್ಯ ಗಂಗಾ ಮಾತಾಜಿ ನೀಡುತ್ತಿದ್ದಾರೆ- ನಿಮಗೆ ಸಹಿಸಿಕೊಳ್ಳಲು ಆಗುವುದಿಲ್ಲವೆ ? ಪ್ರವಚನ ನಿಲ್ಲಿಸಿ ಎಂದು ಹೇಳಲು ಬಂದಿದ್ದೀರಿ, ನಾಚಿಕೆಯಾಗುವುದಿಲ್ಲವೆ ? ಯಾರು ಇಂಥಾ ಮೈದಾನದಲ್ಲಿ ಬಂದು ಪ್ರವಚನ ಮಾಡಿದ್ದಾರೆ ? (೧೯೬೫ರಲ್ಲಿ ಪೂಜ್ಯ ಲಿಂಗಾನಂದ ಅಪ್ಪಾಜಿ, ೧೯೭೦ರಲ್ಲಿ ನಾನು ಬಿಟ್ಟರೆ ನಂತರ ಇಂಥ ದೊಡ್ಡ ಮೈದಾನದಲ್ಲಿ ಬಹಿರಂಗ ಪ್ರವಚನ ಮಾಡಿರುವುದು ನಮ್ಮ ಶಿಷ್ಯೆಯಾದ ಗಂಗಾ ಮಾತಾಜಿಯವರೇ !) ಹಸಿದು ಊಟ ಮಾಡುತ್ತಿರುವ ಜನರ ಊಟದ ತಟ್ಟೆ ಕಸಿದುಕೊಳ್ಳಲು ಬಂದ ಪಾಪಿಗಳು ನೀವು''.

ನಿರ್ಮಲಾ, ಅವಿದ್ಯಾವಂತರಾದರೂ ತಮ್ಮ ಆಡುಭಾಷೆಯಲ್ಲೇ ಕಟುವಾಗಿ ಪ್ರತಿಭಟಿಸಿದರಂತೆ. ಪೋಲೀಸರು ಮೈಕ್ ಅನ್ನು ತೆಗೆದು, ವಿದ್ಯುತ್ ಸಂಪರ್ಕ ತೆಗೆದಾಗ (ಎಂಥಾ ಅಜ್ಞಾನಿಗಳು, ಅವಿವೇಕಿಗಳು ! ಜನ ಸಂದಣಿಯಿದ್ದಾಗ ವಿದ್ಯುತ್ ತೆಗೆಯಬಾರದು ಎಂಬ ತಿಳುವಳಿಕೆ ಸಹ ಇಲ್ಲದ ಇಂಥ ಪೋಲೀಸರು ಜನ ರಕ್ಷಕರೆ ?) ಪ್ರವಚನ ಸಿಬ್ಬಂದಿ ನಮ್ಮ ಜನರೇಟರನ್ನು ಪ್ರಾರಂಭಿಸಿದ್ದಾರೆ. ಆದರಿಂದ ೩. ದೀಪಗಳು ಹೊತ್ತಿವೆ. ''ಮೈಕ್ ಇಲ್ಲದಿದ್ದರಷ್ಟೆ ಹಾಗೆಯೇ ಪ್ರವಚನ ಮಾಡಿ ಮಾತಾಜಿ'' ಎಂದು ಜನರು ಕೂಗಿದಾಗ ಗಂಗಾ ಮಾತಾಜಿ ಮತ್ತು

Digitalized by e-Sahithya Documentation Forum
Sponsored by Sarayu Foundation Trust

ಇನ್ನಿತರ ಕೆಲವರು ಮೈಕಿಲ್ಲದೆ ಮಾತನಾಡಿದ್ದಾರೆ.

ಆಗ ಕೆಲವು ಜನ ಅಂದರಂತೆ, ''ಪ್ರವಚನ ಕೇಳುತ್ತಿರುವವರು ಸಾವಿರಾರು ಮಂದಿ, ವಿರೋಧಿಸಲು ಬಂದವರು ನಾಲ್ಕು ಜನರು. ನಿಮಗೆ ಪ್ರವಚನ ಬೇಡವಾದರೆ ಮನೆಯಲ್ಲಿ ಕುಳಿತುಕೊಳ್ಳಿರಿ ನಿಮ್ಮ ಸಲುವಾಗಿ ಬೇರೆಯವರಿಗೆ ಏಕೆ ತೊಂದರೆ ಕೊಡುತ್ತೀರಿ ?''

ಈ ಮಾತು ಕೇಳುತ್ತಲೇ ಬೃಹನ್ಮಠದ ರಾಜನ್ ಅವರಿಗೆ ಸುದ್ದಿ ಮುಟ್ಟಿ ಮರು ದಿವಸಕ್ಕೆ ಬಾಡಿಗೆ ಗೂಂಡಾ ಜನರನ್ನು ಸಾರಾಯಿ ಕುಡಿಸಿಕೊಟ್ಟೇ ಕಳಿಸಿಕೊಡುವ ಮಹತ್ತರ ಕಾರ್ಯವನ್ನು ಕೈಗೊಂಡರು. ರಾಕ್ಷಸ ನಾಮ ಸಂವತ್ಸರದ ಕಲ್ಯಾಣ ಕ್ರಾಂತಿಗೂ ಈ ಸಂವತ್ಸರದ ದಿ. ೨೦-೩-೨೦೦೦ರಂದು ನಡೆದ ಕ್ರಾಂತಿಗೂ ಬಹಳ ಸಾಮ್ಯವಿದೆ.

೧. ಎರಡೂ ನಡೆದುದು ಹೋಳಿ ಹುಣ್ಣಿಮೆಯಂದು

೨. ಅಂದು ಶರಣರನ್ನು ಹಿಂಸಿಸಿದವರು ವೈದಿಕ ಪುರೋಹಿತಶಾಹಿ ಜನ. ಇಂದು ತೊಂದರೆಕೊಟ್ಟು ದೌರ್ಜನ್ಯವೆಸಗಿದವರು ವೀರಶೈವ ಪುರೋಹಿತಶಾಹಿಗಳು.

ನಾರಾಯಣ ಕ್ರಮಿತ -ಹೆಚ್. ಎಂ. ಸ್ವಾಮಿ

ಬದರಿನಾಥ ಶಾಸ್ತ್ರಿ - ಸಿ.ಎನ್.ಹಿರೇಮಠ

ಕೊಂಡೆಯ ಮಂಚಣ್ಣ -ಅಂದನೂರು ಕೊಟ್ರಬಸಪ್ಪ

ಸೇನಾಧಿಪತಿ ಮಾಧವರಾಯ - ಪೋಲಿಸ್ ಇಲಾಖೆಯ ಶ್ರೀ ನಾರಾಯಣ ನಡುಮನಿ ಮತ್ತು ಪಿ.ಎಸ್.ಐ. ಪ್ರಹ್ಲಾದ

ಅಂದು ಸೈನ್ಯದ ನೆರವಿನಿಂದ ಜಾತಿವಾದಿಗಳು ವಚನ ಸಾಹಿತ್ಯವನ್ನು ನಾಶಪಡಿಸಲು ಕಂಕಣ ಬದ್ಧರಾದರು. ಇಂದೂ ಬೃಹನ್ಮಠದ ಸ್ವಾಮಿಗಳು, ಅವರ ಮೇನೇಜರ್ ರಾಜನ್, ಸಿ.ಎನ್.ಹಿರೇಮಠ, ಹೆಚ್.ಎಂ.ಸ್ವಾಮಿ ಮುಂತಾದ ಜಾತಿವಾದಿಗಳು ಪೋಲೀಸರ ರಕ್ಷಣೆಯಲ್ಲಿ ವಚನ ಸಾಹಿತ್ಯವನ್ನು ನಾಶಮಾಡಲೆಳಸಿದರು. ವಚನ ವಾಙ್ಮಯವನ್ನು ರಕ್ಷಿಸಲು ಆದಿ ಶರಣರು ವಚನ ಸಾಹಿತ್ಯವನ್ನು ಗಂಟುಕಟ್ಟಿ ಹೊತ್ತೊಯ್ದರು ಉಳಿವೆಯ ದಿಕ್ಕಿನಲ್ಲಿ. ಈಗಲೂ ಸಹಿತ ನಮ್ಮ ಸಾಧಕಿಯರು ವಚನ ವಾಙ್ಮಯವನ್ನು ರಾತ್ರೋರಾತ್ರಿ ಗಂಟುಕಟ್ಟಿ ಧಾರವಾಡದತ್ತ ಕಳಿಸಿದರು.

''ನೀವು ಮಾಡಿದ ವರ್ಣಾಂತರ ವಿವಾಹ ತಪ್ಪು'' ಎಂದು ಒತ್ತಾಯಿಸಿದರೂ ಧರ್ಮಪಿತರು ಒಪ್ಪಿಕೊಳ್ಳಲಿಲ್ಲ; ಮದುವೆಯಲ್ಲಿ ಭಾಗಿಯಾದುದಕ್ಕೆ ನೀವು ತಪ್ಪಿತಸ್ಥರು ಎಂದು ಒಪ್ಪಿಕೊಳ್ಳಿರಿ , ವಿವಾಹವನ್ನು ರದ್ದು ಮಾಡಿರಿ. ನಾವು ಮಧುವರಸ ಲಾವಣ್ಯವತಿಯರನ್ನು ಶುದ್ಧೀಕರಿಸುತ್ತೇವೆ '' ಎಂದು ವೈದಿಕ ಪುರೋಹಿತರು ಒತ್ತಾಯಿಸಿದರೂ ಶರಣರು ಈಡಾಗಲಿಲ್ಲ. ಏಕೆಂದರೆ ''ಜಾತಿಗಳು ದೇವ ನಿರ್ಮಿತವಲ್ಲ, ಮಾನವ ಕಲ್ಪಿತ, ಮಾನವರೆಲ್ಲರೂ ಹುಟ್ಟಿನಿಂದ ಸಮಾನರು, ಸಾಧನೆಯಿಂದ ಶ್ರೇಷ್ಠ-ಕನಿಷ್ಠ ಎನಿಸಿಕೊಂಬುವರು ಎಂಬುವ ಸಮತಾವಾದವನ್ನು ಪ್ರತಿಬಿಂಬಿಸಬೇಕಾಗಿತ್ತು. ಅದೇ ರೀತಿ, ಇಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಮತ್ತು ನಿಜ ಬಸವ ತತ್ತ್ವಾನುಯಾಯಿಗಳು, ಏಕದೇವೋಪಾಸನೆ ಸಾರಿದ ಬಸವಣ್ಣನವರ ಮಹಾನ್ ಸಂದೇಶವನ್ನು ಇಂದು ಜಗತ್ತಿನ ತುಂಬ

ಪ್ರಚುರಪಡಿಸಬೇಕಾಗಿದೆ ಎಂಬುದನ್ನು ದೃಢವಾಗಿ ಪ್ರತಿಪಾದಿಸಿದ್ದಾರೆ. ಲಿಂಗಾಯತ ಧರ್ಮದ ದೇವರ ಹೆಸರು ಲಿಂಗದೇವರು ಎಂಬುದನ್ನು ಪ್ರತಿಷ್ಠಾಪಿಸಲು ಜಾತಿವಾದಿಗಳ ವಿರೋಧವನ್ನು ಶಾಂತಿ-ಸಮಾಧಾನದಿಂದಲೇ ಎದುರಿಸಿದ್ದಾರೆ.

ದಾವಣಗೆರೆಯಲ್ಲಿ ಪ್ರದರ್ಶಿಸಿದ ಕೆಳಮಟ್ಟದ, ಕ್ರೂರ, ದೌರ್ಜನ್ಯದಿಂದಾಗಿ ಆ ಸಂಘಟನೆಗಳವರು ಬಸವಣ್ಣನವರ ಹೆಸರು ಹೇಳಲು ಸಹ ಅರ್ಹರಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಊಟದ ಆಮಿಷ ತೋರಿಸಿ ತಿಂಗಳಿಗೊಮ್ಮೆ ಕಾರ್ಯಕ್ರಮ ನಡೆಸಿ ನೂರಾರು ಜನರನ್ನೂ ಆಕರ್ಷಿಸಲಾರದ ಮಠಾಧೀಶರು, ಓರ್ವ ಮಹಿಳಾ ಜಗದ್ಗುರುವು ೫೫ ದಿವಸಗಳ ಕಾಲ ಜ್ಞಾನಗಂಗೆಯನ್ನು ನಿರರ್ಗಳವಾಗಿ ಹರಿಸಿ, ಜಾತಿಮತಪಂಥಭೇದವಿಲ್ಲದೆ ಅಸಂಖ್ಯಾತ ಜನರನ್ನು ಆಕರ್ಷಿಸಿ, ಜ್ಞಾನ ಬೋಧೆ ಮಾಡಿ ಜನಪ್ರಿಯರಾಗುತ್ತಿರುವುದನ್ನು ಕಂಡು ಮತ್ಸರಗೊಂಡು ಪ್ರವಚನವನ್ನು ಗೂಂಡಾಗಳ ಮೂಲಕ ಕೆಡಿಸಿದ್ದಾರೆ ಎಂಬ ಮಾತು ಜನಜನಿತವಾಗಿ, ಈ ಘಟನೆಯು ಚಿತ್ರದುರ್ಗದ ಬೃಹನ್ಮಠ ಮತ್ತು ಅವರ ಕೃಪಾಪೋಷಣೆಯಲ್ಲಿರುವ ಸಂಘಟನೆಗಳಿಗೆ ಕಲಂಕ ಹಚ್ಚಿದೆ. ಈ ಕಲಂಕವನ್ನು ಸಪ್ತ ಸಮುದ್ರಗಳ ನೀರಿನಿಂದಲೂ ಅವರು ತೊಳೆದುಕೊಳ್ಳಲಾರರು. ಬಸವ ಪರಂಪರೆಯ ಮಠವೆಂದು ಹೇಳಿಕೊಳ್ಳುವ ಬೃಹನ್ಮಠದಲ್ಲಿ ಕೆಲವು ವರ್ಷಗಳ ಹಿಂದೆ ಅಪ್ಪ ಬಸವಣ್ಣನವರ ಒಂದು ಭಾವಚಿತ್ರ ಇರಲಿಲ್ಲ. ಶ್ರೀ ಮುರುಘೇಶಾಯ ನಮಃ ಎಂಬ ಮಂತ್ರವೊಂದೇ ಕರಪತ್ರಗಳಲ್ಲಿ. ಯಾವಾಗ ಬಸವ ಗುರುವಿನ ಮಹತ್ವವನ್ನರಿತು ಜನರು ಬಸವಣ್ಣನನ್ನು ಮರೆತವರನ್ನು ತಾವು ಕೈ ಬಿಡತೊಡಗಿದರೋ ಆಗ ಚಿತ್ರದುರ್ಗದ ಬೃಹನ್ಮಠದವರಿಗೆ ಬಸವಣ್ಣನ ಹೆಸರು ನೆನಪಾಯಿತು. ಅದೂ ಸಹ, ''ಕೈಯಲ್ಲಿ ಶರಣಾರ್ಥಿ, ಕೊಂಕುಳಲ್ಲಿ ದೊಣ್ಣೆ'' ಎಂಬ ಢೋಂಗಿತನದ ಬಸವಭಕ್ತಿ ಎಂಬುದು ದಾವಣಗೆರೆಯ ಆಕ್ರಮಣಕಾರಿ ಘಟನೆ, ಮಹಿಳಾ ಗುರುಗಳ ಮೇಲಿನ ಹಲ್ಲೆಯಿಂದ ಸ್ಪಷ್ಟವಾಗಿದೆ.

''**ಶಿವಭಕ್ತಿಯು-ಕರ್ಮವು ಎಂದೂ ಒಂದಾಗಿರದು**'' ಎಂದು ಹರಿಹರ ಕವಿಯು ಹೇಳುವಂತೆ ಬಸವ ತತ್ತ್ವವು-ಗೂಂಡಾಗಿರಿಯು ಒಟ್ಟಾಗಿರಲು ಸಾಧ್ಯವೇ ಇಲ್ಲ.

ದಾವಣಗೆರೆಯಲ್ಲಿ ಮಹಿಳಾ ಜಗದ್ಗುರು ಪೂಜ್ಯ ಗಂಗಾ ಮಾತಾಜಿಯವರ ಪ್ರವಚನಕ್ಕೆ ತೊಂದರೆ ನೀಡಿದ ಸಂಸ್ಥೆಗಳ ಹೆಸರನ್ನು ಆ ಜನರು ಸ್ಪಷ್ಟವಾಗಿಯೇ ಘೋಷಿಸಿಕೊಂಡಿದ್ದಾರೆ. ಅಖಿಲ ಭಾರತ ವೀರಶೈವ ಮಹಾಸಭೆಯ ದಾವಣಗೆರೆ ಘಟಕ, ಅಕ್ಕನ ಬಳಗ, ಶಿವಯೋಗಾಶ್ರಮ ಟ್ರಸ್ಟ್, ಬಸವ ಕೇಂದ್ರ, ಬಸವ ಬಳಗ ಮುಂತಾಗಿ ತಿಳಿಸಿದ್ದಾರೆ.

ವೀರಶೈವ ಮಹಾಸಭೆಯವರು ಇನ್ನು ಬಸವ ತತ್ತ್ವದ ಬಗ್ಗೆ ವಚನ ಸಾಹಿತ್ಯದ ಬಗ್ಗೆ ತಲೆ ಕೆಡಿಸಿಕೊಳ್ಳುವುದು ಅಗತ್ಯವೇ ಇಲ್ಲ. ಲಿಂಗಾಯತವು ಸ್ವತಂತ್ರ ಧರ್ಮ, ಇದರ ಸಂಸ್ಥಾಪಕರು ಧರ್ಮಗುರು ಬಸವಣ್ಣನವರು, ಇದರ ಸಂವಿಧಾನ ವಚನ ಸಾಹಿತ್ಯ ; ಲಿಂಗಾಯತವು ಪೂಜಿಸಹೇಳುವುದು ಸೃಷ್ಟಿಕರ್ತ ಲಿಂಗದೇವನನ್ನು, ಇಷ್ಟಲಿಂಗದ ರೂಪದಲ್ಲಿ. ವೀರಶೈವವು ಪೂರ್ತಿ ಭಿನ್ನವಾದ ಒಂದು ಶೈವದ ಶಾಖೆ, ಅವರು ತಮಗೆ ಬೇಕಾದವರನ್ನು ಗುರು ಎಂದುಕೊಳ್ಳಲಿ ; ಬಸವ ತತ್ತ್ವಾನುಯಾಯಿ ಲಿಂಗಾಯತರದ್ದು ಏನೂ ತಕರಾರೇ ಇಲ್ಲ. ಆದರೆ

Digitalized by e-Sahithya Documentation Forum
Sponsored by Sarayu Foundation Trust

ಬಸವೋಕ್ತ ಲಿಂಗಾಯತ ಧರ್ಮದ ವಿಷಯದಲ್ಲಿ ಹಸ್ತಕ್ಷೇಪವನ್ನು ಅವರು ಮಾಡುವುದೇಕೆ ?

ಬಸವ ಕೇಂದ್ರ ಎಂಬ ರೋಗಗ್ರಸ್ತ ಮಗು ಹುಟ್ಟಿದ್ದೇ ವಿಧಾಯಕ ಯೋಜನೆ, ಕಾರ್ಯೋದ್ದೇಶ ಏನೂ ಇಲ್ಲದೆ ರಾಷ್ಟ್ರೀಯ ಬಸವ ದಳವನ್ನು ವಿರೋಧಿಸಲು ಮತ್ತು ರಾಷ್ಟ್ರೀಯ ಬಸವ ದಳ ಒಡೆಯಲು. ಹಣ, ಪ್ರಶಸ್ತಿ, ಶಾಲು, ಬಿರುದುಗಳ ಆಸೆಗಾಗಿ ರಾಷ್ಟ್ರೀಯ ಬಸವ ದಳ ಬಿಟ್ಟು ಹೋಗಿ ಈಗ ಅಂತರಂಗದಲ್ಲಿ ಮರಮರ ಮರುಗುತ್ತಿರುವ ೩-೪ ಜನರನ್ನು ಬಿಟ್ಟರೆ ರಾಷ್ಟ್ರೀಯ ಬಸವ ದಳಗಳನ್ನು ಒಡೆಯಲಾಗದೆ ತರಲೆ ಕೇಂದ್ರದವರು ಹತಾಶರಾಗಿದ್ದಾರೆ. ಬಸವ ಗುರುವಿನ ಹೆಸರನ್ನು ಜೋಡಿಸಿಕೊಂಡರೂ ತರಲೇ ಕೇಂದ್ರದ ಅನುಯಾಯಿಗಳ ಪಾಪದ ಗುಂಡು ಜಗ್ಗುತ್ತಿರುವುದರಿಂದ ನಿಜ ಭಕ್ತರನ್ನು ಆಕರ್ಷಿಸಲು ಆ ಕೇಂದ್ರಗಳು ಅಸಮರ್ಥವಾಗಿವೆ. ಕೆಲವು ಮುಗ್ಧರು, ಗೊತ್ತಿಲ್ಲದೆಯೇ ಅವುಗಳಿಗೆ ಸೇರಿ ಜಹಿರಾಬಾದಿನ ಒಂದು ಧಾರ್ಮಿಕ ಸಮಾವೇಶಕ್ಕಾಗಿ ಮಾಡಿಟ್ಟ ಅಡಿಗೆಯಲ್ಲಿ ಕೇಂದ್ರದವರು ಸಗಣಿಯನ್ನು ಕಲಸಿದ್ದು ಮುಂತಾಗಿ ನೋಡಿ ಅಸಹ್ಯಪಟ್ಟು ದೂರಸರಿದಿದ್ದಾರೆ.

ಬಸವ ಬಳಗ, ಬಸವ ಕೇಂದ್ರ ಎಂದು ಹೆಸರಿಟ್ಟುಕೊಂಡು ಬಸವಣ್ಣನ ಹೆಸರನ್ನು ಕೆಡಿಸುತ್ತಿರುವ ಇವುಗಳ ದಾವಣಗೆರೆ ಮುಖ್ಯಸ್ಥರ ಬಾಯಲ್ಲಿ ಬಂದ ಅಶ್ಲೀಲ ಪದಗಳು, ಕೊಳಕು ವರ್ತನೆ ಸಭ್ಯರನ್ನು ನಾಚಿ ನೀರಾಗಿಸಿವೆ. ಹಣೆಯ ಮೇಲೆ ವಿಭೂತಿ ಧರಿಸಿದ ಓರ್ವ ಮುದುಕ ಮುಖ್ಯಸ್ಥ ಹೆಣ್ಣು ಮಕ್ಕಳನ್ನು ಏನ್ರೇ ಎಂದುದಲ್ಲದೆ, ಪೂಜ್ಯ ಗಂಗಾಮಾತಾಜಿಯವರ ಸುತ್ತ ರಕ್ಷಣೆಗೆ ನಿಂತ, ಆತನ ಮೊಮ್ಮಗಳ ವಯಸ್ಸಿನ ಒಂದು ಹುಡುಗಿಗೆ, "ನಿಮ್ಮ ಶೀಲ ಕೆಡಿಸಿದರೆ ಬುದ್ದಿ ಬರುತ್ತೆ" ಎಂದನಂತೆ. ಕುಡಿದು ತೂರಾಡುತ್ತಿದ್ದ ಈ ಕೇಂದ್ರ, ಬಳಗಗಳ ವ್ಯಕ್ತಿಗಳ ಹಣೆಯ ಮೇಲಿನ ವಿಭೂತಿ, ಕೃತಕವಾಗಿ ಗೂಂಡಾಗಳಿಗೆ ವಿಭೂತಿ ಹಚ್ಚಿ ಕರೆತಂದುದು ಅವರ ನಾಲಿಗೆಯ ಮೇಲೆ ಬರುತ್ತಿದ್ದ ಮಾತುಗಳು ಪರಸ್ಪರ ವಿರೋಧಾಭಾಸವಾಗಿದ್ದುವಂತೆ. ಪಾಪ-ಪುಣ್ಯಗಳ ಭಯವೇ ಇಲ್ಲದ ಈ ಜನರಿಗೆ ಧರ್ಮಪಿತ ಬಸವಣ್ಣನವರ ಗೊಡವೆ ಏಕೆ ? ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ಪರಮಾತ್ಮ ಲಿಂಗದೇವನ ಸುದ್ದಿ ಏಕೆ ?

ತರಲೆ ಕೇಂದ್ರ ಮತ್ತು ಜಗಳದ ಬಳಗದವರ ಸಂಸ್ಕೃತಿ

ಗೂಂಡಾ ಜನರನ್ನು ಕರೆತಂದ ಮೇಲ್ಕಂಡ ಎರಡೂ ಸಂಘಟನೆಗಳ ಪ್ರಮುಖರು, ಇವರೇನು ಅನಾಮಿಕರಲ್ಲ ದೊಡ್ಡ ಮನುಷ್ಯರೆಂದು ಆಡ್ಡಾಡುವವರು, ಇವರುಗಳ ಬಾಯಿಯಲ್ಲಿ ಬಂದ ಪದಗಳನ್ನು ಕುರಿತು ದಾವಣಗೆರೆ ನಾಗರಿಕರು ಪ್ರತ್ಯಕ್ಷ ಸಾಕ್ಷಿಗಳಾಗಿ ನೋಡಿದ್ದು, ಮಾತನಾಡುತ್ತಿದ್ದಾರೆ. ಕೊಳಚೆ ಪ್ರದೇಶದ ಅನಾಗರಿಕರು ಸಹ ಮಾತನಾಡದಷ್ಟು ಕೀಳುಭಾಷೆಯನ್ನು ಬಳಸಿದರಂತೆ. ತ್ಯಾಗಜೀವಿಗಳು, ಸಾತ್ವಿಕರೂ ಆದ ಹೆಣ್ಣುಮಕ್ಕಳು ಇಂದು ತ್ಯಾಗ ಮಾಡಿ ಹಗಲಿರುಳು ಧರ್ಮಪ್ರಚಾರಕ್ಕಾಗಿ ದುಡಿಯುತ್ತಿದ್ದಾರೆ. ಅಂಥ ಸಾತ್ವಿಕ ಸಾಧಕಿಯರಿಗೆ ಕೀಳಾಗಿ ಬೈದಿದ್ದಲ್ಲದೆ, "ನಿಮ್ಮ ಶೀಲ ಕೆಡಿಸಿದರೆ ನಿಮಗೆ ಬುದ್ಧಿ ಬರುತ್ತದೆ" ಎಂದು ಓರ್ವ ಮುದುಕ ವಿಭೂತಿಧಾರಿ ಹೇಳಿದನಂತೆ. ಅಕ್ಕನ ಬಳಗದ ಮಹಿಳೆಯರು ಅಂದರಂತೆ, "ಆರತಿ ತಟ್ಟೆ ಹಿಡಿದುಕೊಂಡು ಭಿಕ್ಷಕ್ಕೆ ಬರುತ್ತೀರಲ್ರೇ ; ಬರ್ರಿ, ನಮ್ಮನೇಲಿ ಕೆಲಸ

ಮಾಡ್ರಿ, ಕೂಲಿ ಕೊಡುತ್ತೀವಿ." ಅಂದರೆ ಈ ಜನಕ್ಕೆ, ಪೂಜೆ, ಆರತಿ ಎಂದರೆ ಯಾವ ಗೌರವ-ಭಕ್ತಿ ಇಲ್ಲ ಎಂದಾಯಿತಲ್ಲವೆ ? ದೆಹಲಿ, ಮುಂಬಯಿ ಮುಂತಾದಲ್ಲೆಲ್ಲ ನೋಡಿದ್ದೇವೆ. ಭಾರತೀಯ ಸಂಸ್ಕೃತಿಯಲ್ಲಿ 'ಆರತಿ' ಬಗ್ಗೆ ಎಂಥ ಪೂಜ್ಯತೆ ಇದೆ ಎಂಬುದನ್ನು. ವೀರಶೈವರು ಎಷ್ಟು ಅನಾಗರಿಕರಾಗುತ್ತಿದ್ದಾರೆ ಎನ್ನಿಸಿ ಅಸಹ್ಯವೆನಿಸುತ್ತಿದೆ. ಸಾಧಕ ಜೀವಿಗಳನ್ನು ತ್ಯಾಗಿಗಳನ್ನು ತಿರುಪೆಯವರು, ಕೂಲಿಯವರು ಎಂಬ ತಿರಸ್ಕಾರ ತಾಳಿರುವ ಇಂಥವರು ದಿಗಂಬರದ ದಿವ್ಯಾಂಬರೆ ಅಕ್ಕಮಹಾದೇವಿಯ ಮೂರ್ತಿಯನ್ನೇಕೆ ಪ್ರತಿಷ್ಠಾಪಿಸಬೇಕು ; ಅಕ್ಕನ ಬಳಗಗಳನ್ನು ಏಕೆ ಕಟ್ಟಬೇಕು ? ಇಂಥ ಕೊಳಕು ಜನ ವಚನ ಸಾಹಿತ್ಯದ ಬಗ್ಗೆ ಮಾತನಾಡಲು ಸಹ ನೈತಿಕ ಅರ್ಹತೆ ಉಳ್ಳವರಲ್ಲ ; ಇನ್ನು ಲಿಂಗದೇವನ ಬಗ್ಗೆ ಚರ್ಚಿಸಲು ಅರ್ಹರೆ ? ಇಂಥವರನ್ನು ಕಂಡೇ ಅಪ್ಪ ಬಸವಣ್ಣನವರು ಹೀಗೆ ಹೇಳಿರಬೇಕು ;

ತಿರುಕರೆನ್ನದಿರಿ ಭೋ ಎನ್ನ ತಂದೆಗಳನು
ತಿರುಕರೆನ್ನದಿರಿ ಭೋ ಎನ್ನ ಬಂಧುಗಳನು
ತಿರುಕರೆನ್ನದಿರಿ ಭೋ ಎನ್ನ ದೇವರನು
ತಿರುಕರೆನ್ನದಿರಿ ಭೋ ಎನ್ನ ಒಡೆಯರನು
ದೇಹಿ ಎಂದಡೆ ನಾಸ್ತಿ ಎಂಬವರ ಬೇಹು
ನೋಡಬಂದ ಕಾಣಾ, ಲಿಂಗದೇವ (ಬ.ವ.ದೀ ೧೧೩೭)

ಧನದಾಹಿ ಶ್ರೀಮಂತ ಮಠಾಧಿಪತಿಗಳ ಹಿಂಬಾಲಕರಾಗಿ ಮಾಡಬಾರದ ಕುಕೃತ್ಯಗಳನ್ನು ಮಾಡುತ್ತ ಇವನ್ನೆಲ್ಲ ಮುಚ್ಚಲು ಭಸ್ಮಧಾರಣೆ ಮಾಡಿ 'ಬಸವ' ಎಂಬ ಪವಿತ್ರ ನಾಮವನ್ನು ಸೇರಿಸಿ ಸಂಘಟನೆಗಳನ್ನು ರೂಪಿಸಿದ ಮಾತ್ರಕ್ಕೆ ಇಂಥವರಿಗೆ ತ್ಯಾಗಿಗಳ ಯೋಗಿಗಳ ಬೆಲೆ ತಿಳಿಯುವುದುಂಟೆ ? ನಮ್ಮನ್ನು ವೈಯಕ್ತಿಕವಾಗಿ ಅಸೂಯೆಯಿಂದ ದ್ವೇಷಿಸುವ ಈ ತರಲೆ ಕೇಂದ್ರದವರು ಎಷ್ಟು ಅನಾಗರಿಕರೆಂದರೆ ಅನ್ಯ ಜನರ ಮನೆಯ ಮದುವೆಯಂತಹ ಮಂಗಲ ಸಮಾರಂಭಗಳಿಗೂ ಬಂದು ತೊಂದರೆ ಕೊಡುವವರು. ಹೀಗಾಗಿಯೇ ಬಸವ ಭಕ್ತರೂ ಈಗ ಜಾಗೃತರಾಗಿ, ದೃಢ ಮನಸ್ಕರಾಗಿ ಬಸವ ನಾಮದ ಮುಸುಕನ್ನು ಹೊದ್ದು ಅಡ್ಡಾಡುವ ಈ ಗೋಮುಖ ವ್ಯಾಘ್ರಗಳನ್ನು ಸಾತ್ವಿಕವಾಗಿಯೇ ಎದುರಿಸಲು ಸಜ್ಜಾಗುತ್ತಿದ್ದಾರೆ.

ಈ ಘಟನೆಯ ಮೂಲಕ ಧರ್ಮಪಿತ ಬಸವಣ್ಣನವರು ಎಚ್ಚರಿಕೆಯ ಗಂಟೆಯನ್ನು ಬಾರಿಸಿದ್ದಾರೆ "ನೋಡಿ, ನನ್ನ ಶರಣರೇ ; ೧೨ನೆಯ ಶತಮಾನದಲ್ಲಿ ವೈದಿಕ ಪುರೋಹಿತಶಾಹಿಯಿಂದ ವಿಪತ್ತು ಇದ್ದರೆ ಇಂದು ವೀರಶೈವ ಪುರೋಹಿತಶಾಹಿಯಿಂದ ವಿಪತ್ತಿದೆ. ಇಂಥ ದುರ್ಧರ ಪ್ರಸಂಗದಲ್ಲೂ ನಿಮ್ಮ ಭಕ್ತಿ-ಶ್ರದ್ಧೆ-ನಿಷ್ಠೆ-ತ್ಯಾಗಗಳು ಮಾತ್ರ ವಚನ ವಾಙ್ಮಯವನ್ನು ಶರಣರ ದಿವ್ಯ ಸಂದೇಶಗಳನ್ನು ರಕ್ಷಿಸಿ, ಉತ್ತಿ ಬಿತ್ತಿ ಬೆಳೆಸಬಲ್ಲವು. ನನ್ನ ಹೆಸರನ್ನೇ ಮುಂದಿಟ್ಟುಕೊಂಡು ನಮ್ಮ ತತ್ತ್ವಗಳಿಗೆ ಆದರ್ಶಗಳಿಗೆ ಹೊರತಾಗಿ ನಡೆಯುವವರ ಕೈಯಿಂದ ನಮ್ಮ ಸಂದೇಶಗಳನ್ನು ರಕ್ಷಿಸಿರಿ." ಅಪ್ಪ ಬಸವಣ್ಣನವರ ಈ ಕರುಳಿನ ಕರೆಯನ್ನು ಅರಿತು ನಾವು -ನೀವು ಅದರಂತೆ ದುಡಿಯೋಣ.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

Digitalized by e-Sahithya Documentation Forum
Sponsored by Sarayu Foundation Trust



ವೀರವಿರಾಗಿಣಿ ಅಕ್ಕ

ಓ ಮಹಿಳಾ ಚೇತನವೇ
ಆದೆ ಜಗದ ಮಹಿಳೆಯರಿಗೆಲ್ಲ ಸ್ಫೂರ್ತಿ
ನೀನಿಟ್ಟ ಹೆಜ್ಜೆ ಕಲ್ಲು ಮುಳ್ಳಿನದು
ತುಳಿದ ದಾರಿ ಕಾಡಿನ ಮಧ್ಯದ್ದು
ಅಂದು ನೀ ನಡೆದು ಹೋದೆ
ಎಂಟು ಶತಮಾನಗಳ ಹಿಂದೆ
ಹೆಣ್ಣು ಅಬಲೆಯೆಂದು ಸಾರುತ್ತಿದ್ದ ಜಗದಲ್ಲಿ
ಈ ನುಡಿಯ ಪೊರೆ ಕಿತ್ತು ಅಂದೆ ನೀ ಹೋದೆ
ಭೋಗದ ವಸ್ತುವೆಂದರಿದ ಹೆಣ್ಣಿನಲಿ
ದೈವೀ ಚೆಲುಮೆಯ ಉಕ್ಕಿಸಿ ಜಗಕಾದರ್ಶವಾದೆ ;
ತೋರಲು ಹೆಣ್ಣಾಗಿದ್ದರೂ ಗಂಡುತನದ
ದಿಟ್ಟತನವ ತೋರಿ, ಏಕಾಂಗಿಯಾಗಿ
ಹೊರಟೆ ನಿನ್ನ ಗುರಿಯಡೆಗೆ
ಮಾಯೆಯಾಗಿ ಬಂದ ಕೌಶಿಕನ ಜರಿದು
ಹೆಣ್ಣು ಅಷ್ಟೇ ಮಾಯೆಯಲ್ಲ
ದುರ್ಬಲ ಮನಸ್ಸಿನ ಸ್ತ್ರೀಗೆ ಪುರುಷನೂ ಮಾಯೆಯೆ !
ಎಂಬ ಕಟು ಸತ್ಯವ ಜಗಕೆ ತೋರಿದೆ
ದಿಟ್ಟ ಹೆಜ್ಜೆಯನಿಟ್ಟು ದೃಢ ಸಂಕಲ್ಪವ ತೊಟ್ಟು
ಮಾತಾ ಪ್ರಿಯ ಸಚ್ಚಿದಾನಂದನೊಡಗೂಡಿದೆ
ನಿನ್ನಯ ದಾರಿಯಲಿ ಮುನ್ನಡೆವ ನಮ್ಮನು
ಕೈಹಿಡಿದು ನಡೆಸು ತಾಯೆ
ನಿನ್ನಡಿಗೆ ನಮನ ನೂರುನೂರು.

— — —

ದೇವನು ಮಹಾದಾತ

ಎಲ್ಲ ಕೊಡುವವ ನೀನು
ಇಲ್ಲವಾಗಿಸುವವ ನೀನು
ಸರ್ವದಾತನು ನೀನೇಯಾಗಿರುವಾಗ ಏನು ಬೇಡಲಿ ?
ಸರ್ವವನೂ ನಿನಗರ್ಪಿಸುತ ಶರಣಾಗತಳಾಗುವೆ
ಮಾತಾ ಪ್ರಿಯ ಸಚ್ಚಿದಾನಂದ ನಿನಗೆ

-ರಚನೆ : ಮಾತೆ ಅಕ್ಕಮಹಾದೇವಿ

ವೈಚಾರಿಕ ಪತ್ರಿಕೆಯಾದ ಕಲ್ಯಾಣ ಕಿರಣವನ್ನು ಓದಲು ಪ್ರೇರೇಪಿಸಿ,
ನಿಮ್ಮ ಬಂಧು-ಮಿತ್ರರಿಗೆ ಉಡುಗೊರೆಯಾಗಿ ಕಳಿಸಿರಿ

ಮಾತಾಜಿ ಯಾರು ?

ಸಾವಿರ ಸಾವಿರ ಮಠಗಳುಂಟು
ಅವಕ್ಕೆ ಅನೇಕ ಗುರುಗಳುಂಟು
ಯಾವ ಗುರುವೂ ಅರಿತಿಲ್ಲ
ಧರ್ಮ ಗುರು ಯಾರೆಂದು
''ಧರ್ಮಗುರು ಬಸವಣ್ಣ'' ಎಂದು
ಹೇಳಿದವರು ಯಾರೋ ಅವರೇ - ಮಾತಾಜಿ
ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ
ಸಿಖ್ ಧರ್ಮೀಯರಿಗೆ ಅಮೃತಸರ
ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ
ಲಿಂಗಾಯತ ಧರ್ಮೀಯರಿಗೆ ''ಕೂಡಲಸಂಗಮ ಧರ್ಮಕ್ಷೇತ್ರ''
ಎಂದು ತೋರಿಸಿದವರಾರೋ ಅವರೇ- ಮಾತಾಜಿ
ಧರ್ಮಗುರುವು ಎಮಗೆ ಉಂಟು
ಧರ್ಮಕ್ಷೇತ್ರ ನಮಗೆ ಗೊತ್ತು
ಶರಣ-ಶರಣೆಯರಿಗೆಲ್ಲ ಎಲ್ಲಿ ನಂಟು ?
ಅದುವೆ ಶರಣಮೇಳದಲ್ಲಿ ಉಂಟು
ಇದಕ್ಕೆ ಕಾರಣ ಕರ್ತೃ ಯಾರೋ ಅವರೇ -ಮಾತಾಜಿ
ವಿಶ್ವದ ಮೊದಲ ಮಹಿಳಾ ಜಗದ್ಗುರುವಾಗಿ
ಲಿಂಗವಂತರ ಕಣ್ಣು ತೆರೆಸಿ
'ಲಿಂಗದೇವ'ನ ಲೀಲೆ ಮೆರೆಸಿ
ಜಾತಿವಾದಿಗಳ ಸೊಲ್ಲು ಅಡಗಿಸಿದ
ಧೀರ ಮಾತೆ ಯಾರೋ ಅವರೇ-ಮಾತಾಜಿ
ಬಸವ ತಾಯಿ ತಂದೆ ಎಂದು
ಬಸವ ಬಂಧು ಬಳಗವೆಂದು
ಬಸವ ಜೀವದ ಜೀವವೆಂದು
ಅವನ ಕೀರ್ತಿಯನ್ನು ವಿಶ್ವದಲ್ಲಿ
ಹರಡುತ್ತಿರುವವರಾರೋ ಅವರೇ -ಮಾತಾಜಿ !

ರಚನೆ : ಗೀತಾ ಜಗನ್ನಾಥ. ಎಸ್.ಟಿ.
ಶಿಕ್ಷಕರು, ನಾಗರಾಳು. ತಾ॥ ಕಡೂರು

ಮುಂಬರುವ ೨೦೦೧ನೆಯ ಇಸವಿಯ ಜನಗಣತಿಯಲ್ಲಿ ೮ನೆಯ ಕಾಲಂ,
ಧರ್ಮ ಎಂದಿದ್ದಲ್ಲಿ 'ಲಿಂಗಾಯತ' ಎಂದು ಬರೆಸಿರಿ

Digitalized by e-Sahithya Documentation Forum
Sponsored by Sarayu Foundation Trust

ಸ್ತ್ರೀ ಕುಲದ ಕಣ್ಮಣಿ ಜಗನ್ಮಾತಾ ಅಕ್ಕಮಹಾದೇವಿ

(ಏಪ್ರಿಲ್ ೧೯-೪-೨೦೦೦ದಂದು ಅಕ್ಕಮಹಾದೇವಿ ಜಯಂತಿಯ ನಿಮಿತ್ತ ವಿಶೇಷ ಲೇಖನ)

ಹೆಣ್ಣು ಹೆಣ್ಣಲ್ಲ ಹೆಣ್ಣು ರಕ್ಕಸಿಯಲ್ಲ
ಹೆಣ್ಣು ಸಾಕ್ಷಾತ್ ಕಪಿಲಸಿದ್ಧಮಲ್ಲಿಕಾರ್ಜುನಾ

ಎಂಬ ಸಿದ್ಧರಾಮೇಶ್ವರರ ವಚನ ಹೆಣ್ಣಿನಲ್ಲಿರುವ ಸುಪ್ತ ಶಕ್ತಿಯ ಮಹತ್ವವನ್ನು ಪ್ರತಿಪಾದಿಸುತ್ತದೆ.

'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮನುವಾಣಿಯನ್ನು ಸುಳ್ಳಾಗಿಸಿ ಶರಣರ ಈ ವಾಣಿ ಜಗಕ್ಕೆ ಸ್ತ್ರೀ ಶಕ್ತಿಯ ಅರಿವು ಮಾಡಿಕೊಡುತ್ತಿದೆ ಎಂದರೆ ಉತ್ಪ್ರೇಕ್ಷೆಯಲ್ಲ.

''ಯತ್ರ ನಾರ್ಯಂತು ಪೂಜ್ಯತೆ ತತ್ರ ರಮಂತೆ ದೇವತಾಃ'' ಎಂದು, 'ಮಾತೃ ದೇವೋಭವ' ಎಂದು ಶ್ಲೋಕಗಳನ್ನು ಪಠಿಸುತ್ತ ಹೆಣ್ಣನ್ನು ಕಸಕ್ಕಿಂತ ಕೀಳಾಗಿ ಭಾವಿಸಿ ತುಚ್ಛವಾಗಿ ಕಾಣುತ್ತಿದ್ದ ಸಮಯದಲ್ಲಿ

ಮೊಲೆ ಮೂಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ
ಕಾಣಾ ರಾಮನಾಥ '' ಎಂದರು ಜೇಡರ ದಾಸಿಮಯ್ಯನವರು.

''ಶರೀರದ ಆಕಾರದ ರಚನೆಯಿಂದ ಹೆಣ್ಣು ಗಂಡೆಂದು ಗುರುತಿಸಬಹುದು ಆತ್ಮಕ್ಕೆ ರೂಪಿಲ್ಲ ; ಅಂತಹ ಆತ್ಮ ಪರಮಾತ್ಮನನ್ನು ಸಾಧನೆಯಿಂದ ಬೆರೆಯಬಲ್ಲುದು'' ಎಂಬುದನ್ನು ಮನಗಾಣಿಸಿ ಸ್ತ್ರೀಗೆ ಧಾರ್ಮಿಕ ಸಮಾನತೆ ದೊರಕಿಸಿ ಅನರ್ಘ್ಯ ಸ್ತ್ರೀ ರತ್ನ ಜಗನ್ಮಾತಾ ಅಕ್ಕ ಮಹಾದೇವಿಯನ್ನು ಆಧ್ಯಾತ್ಮದ ಉತ್ತುಂಗ ಶಿಖರಕ್ಕೇರಿಸಿ ಸ್ತ್ರೀ ಶಕ್ತಿಯನ್ನು ಜಗಕ್ಕೆ ಪರಿಚಯಿಸಿ ಕೊಟ್ಟರು ಗುರು ಬಸವಣ್ಣನವರು.

ರಾಜಕಾರಣ, ಶಿಕ್ಷಣ, ವೈದ್ಯಕೀಯ ಹೀಗೆ ಎಲ್ಲಾ ರಂಗಗಳಲ್ಲಿಯೂ ಸ್ತ್ರೀ ಮುಂದುವರೆದಂತಹ ಇಂತಹ ಕಾಲದಲ್ಲಿಯೂ ಧಾರ್ಮಿಕ ಸಮಾನತೆಯಿಂದ ಆಕೆ ವಂಚಿತಳಾಗಿದ್ದಳು. ಆದರೆ ೮೦೦ ವರ್ಷಗಳ ಹಿಂದೆ ಗುರು ಬಸವಣ್ಣನವರು ಸರ್ವ ಕ್ಷೇತ್ರಗಳಲ್ಲಿಯೂ ಆಕೆ ಉನ್ನತಿ ಸಾಧಿಸಬಲ್ಲಳಷ್ಟೇ ಅಲ್ಲ ಧಾರ್ಮಿಕ, ಅಧ್ಯಾತ್ಮಿಕ ಕ್ಷೇತ್ರದಲ್ಲಿಯೂ ಪುರುಷನಿಗಿಂತ ಮುಂದೆ ಹೋಗಿ ಭಕ್ತಳು, ಶಿಷ್ಯಳು, ಗುರುವು ಆಗುವುದಲ್ಲದೆ ದೇವರೊಡನೆ ಒಂದಾಗಬಲ್ಲಳೆಂಬ ಬಸವಣ್ಣನವರ ತತ್ವದ ಕಾರ್ಯ ಸಿದ್ಧಿಗೆ ಸಾಕ್ಷಿ ಜಗನ್ಮಾತಾ ಅಕ್ಕಮಹಾದೇವಿ.

ಧರ್ಮಪಿತ ಬಸವಣ್ಣನವರ ಸತ್ಸಂಗದಲ್ಲಿ ಕೆಲಕಾಲವಿದ್ದು ಅವರ ಪ್ರಸಾದವಾಣಿಯಂತೆ ತಮ್ಮ ನಾಡಿನಲ್ಲಿ ಸ್ತ್ರೀ ರತ್ನವೊಂದು ಜನಿಸುವುದು ಎಂಬ ಕುತೂಹಲದಿಂದಿದ್ದ ಗುರುಲಿಂಗದೇವರಿಗೆ ಓಂಕಾರಶೆಟ್ಟಿ ಲಿಂಗಮ್ಮರು ಮಕ್ಕಳ ಹಂಬಲ ಮುಂದಿಟ್ಟಾಗಲೇ ತಿಳಿದಿದ್ದು ಅದು ತಮ್ಮ ಸಂಕಲ್ಪ ಶಕ್ತಿಯಿಂದ ಸಾಧ್ಯವೆಂದು. ದೈವೀಕೃಪೆ ಗಳಿಸಿಕೊಂಡ ಗುರುಗಳು

ಮನತುಂಬಿ ಹರಸಿ ಪ್ರಸಾದ ಕರುಣಿಸಿದರು. ಆ ಪ್ರಸಾದದ ಫಲವಾಗಿ ದಂಪತಿಗಳ ಗರ್ಭದಲ್ಲಿ ಪಿಂಡವೊಂದು ಬೆಳೆಯತೊಡಗಿ ಸಂಸ್ಕಾರವೇ ಮೈವೆತ್ತು ಬಂದಂತೆ ಜನಿಸಿದಳು ಮಹಾದೇವಿ. ಬಸವಣ್ಣನವರು ಕರುಣಿಸಿದ ಇಷ್ಟಲಿಂಗವನ್ನು ಧಾರಣೆ ಮಾಡಿ ಮಹಾದೇವಿ ಎಂದು ನಾಮಕರಣಗೊಳಿಸಿದ ಗುರುಗಳು ಅಧ್ಯಾತ್ಮಿಕ ಸಂಸ್ಕಾರಗಳನ್ನು ನೀಡತೊಡಗಿದಾಗ ಶಾಲೆ ಕಾಲೇಜು ವಿಶ್ವವಿದ್ಯಾಲಯಗಳಿಲ್ಲದ ಅಂದಿನ ಕಾಲದಲ್ಲಿ ಮಹಾದೇವಿಗೆ ಜಗವೇ ವಿಶ್ವವಿದ್ಯಾಲಯವಾಗಿ ಗುರುಗಳೇ ಶಿಕ್ಷಕರಾಗಿ ಶರಣರ ವಚನಗಳೇ ಪಠ್ಯಪುಸ್ತಕಗಳಾಗಿ ಅನುಭಾವ ಬುಗ್ಗೆಯು ಚಿಮ್ಮತೊಡಗಿತು.

ಹೆಣ್ಣು ಹುಟ್ಟಿದ ಮನೆಯಿಂದ ಕೊಟ್ಟ ಮನೆಗೆ ಕಾಲಿಟ್ಟು ಆಕೆ ಹೊರಗೆ ಬರುವುದು ಶವವಾದಾಗಲೇ ! ಅಂತಹ ಕಠಿಣ ವಾತಾವರಣವಿದ್ದಂತಹ ಕಾಲದಲ್ಲಿ ಅಕ್ಕಮಹಾದೇವಿ ಸಾಧಿಸಿದ ಪ್ರಗತಿ-ಸಾಧನೆ ಅತ್ಯದ್ಭುತ.

ಹೆಣ್ಣು ರಜಸ್ವಲೆ ಆಗುವ ಪೂರ್ವದಲ್ಲಿಯೇ ಮದುವೆ ಆಗದಿದ್ದರೆ ಆಕೆಯ ಮುಖ ನೋಡುವುದೇ ಪಾಪವೆಂದು ಕಣ್ಣು ಕಟ್ಟಿ ಅರಣ್ಯದಲ್ಲಿ ಬಿಟ್ಟು ಬರಬೇಕೆಂಬ ದುರ್ಧರ ಕಾಲವೊಂದಿತ್ತು. ಆದರೆ ಅಕ್ಕಮಹಾದೇವಿ ವಿರಕ್ತಳಾಗಿ ಉಳಿದು ಮದುವೆಯಿಲ್ಲದೆ ಹೆಣ್ಣು ತನ್ನ ಜೀವನವನ್ನು ಸಾರ್ಥಕ ಮಾಡಿಕೊಳ್ಳಬಲ್ಲಳೆಂಬುದಕ್ಕೆ ಜ್ವಲಂತ ಉದಾಹರಣೆಯಾಗಿ ನಿಂತಳು.

ಅತ್ತೆ, ಮಾವ ಗಂಡನ ಸೇವೆಯಿಂದಲೇ ಸ್ತ್ರೀಯ ಜನ್ಮ ಸಾರ್ಥಕವೆಂಬ ಭಾವನೆಯಿದ್ದವರಿಗೆ ಆಕೆ ಲೌಕಿಕ ಆಶೆಗಳಿಂದ ಮುಕ್ತಳಾಗಿ ವೈರಾಗ್ಯ ಮೂರ್ತಿಯಾಗಿ ಅಪೂರ್ವ ಸಾಹಿತ್ಯವನ್ನು ಜಗತ್ತಿಗೆ ಕೊಟ್ಟು ಮಾರ್ಗದರ್ಶಕಳಾಗಬಲ್ಲಳೆಂಬುದಕ್ಕೆ ಆ ಮಾತೆಯ ವಚನಗಳು ಕೈಗನ್ನಡಿಗಳಾಗಿವೆ.

ಸ್ತ್ರೀ ಅಬಲೆ ; ಆಕೆ ಪುರುಷನ ದಾಸಿಯಾಗಿಯೇ ಇರಬೇಕೆಂಬ ತಿಳುವಳಿಕೆಯು ಮನದಾಳದಲ್ಲಿ ಬೇರು ಬಿಟ್ಟಿದ್ದಾಗ ಅಕ್ಕಮಹಾದೇವಿ ಅಂದು ಕಲ್ಯಾಣಕ್ಕೆ ಹೊರಟಾಗ ಶೀಲರಕ್ಷಣೆಗಾಗಿ ಭಯಂಕರ ಬೈರಾಗಿಯನ್ನೆದುರಿಸಲು ಜಾಗೃತವಾದಂತಹ ಆಕೆಯ ಮನೋಬಲ-ಸ್ತ್ರೀಯು ಎಂತಹ ಸಬಲೆ ಎಂಬರಿವು ಮೂಡಿಸುತ್ತದೆ.

ವಿಷಯಾಸಕ್ತಿಗಳಿಂದ ಮುಕ್ತಳಾಗಿ ಸುಖಭೋಗಗಳನ್ನು ತಿರಸ್ಕರಿಸಿ ದೃಢ ಸಂಕಲ್ಪದಿಂದ ಲೌಕಿಕದಿಂದ ದೂರವಾಗಿ ಅಧ್ಯಾತ್ಮಿಕ ಗುರಿಯಡೆಗೆ ಸಾಗಬಲ್ಲಳೆಂಬುದನ್ನು ಕೌಶಿಕನ ತಿರಸ್ಕರಿಸಿ

ಎಮ್ಮೆಗೊಂದು ಚಿಂತೆ ಸಮಗಾರಗೊಂದು ಚಿಂತೆ
ಧರ್ಮಿಗೊಂದು ಚಿಂತೆ ಕರ್ಮಿಗೊಂದು ಚಿಂತೆ
ಎನಗೆ ಎನ್ನ ಚಿಂತೆ ತನಗೆ ತನ್ನ ಕಾಮದ ಚಿಂತೆ
ಒಲ್ಲೆ ಹೋಗು ಸೆರಗು ಬಿಡು ಮರುಳೆ !

ಎಂದು ಉಟ್ಟ ಸೀರೆಯನ್ನು ಕಿತ್ತು ಬಿಸುಟು

ಅಮೇಧ್ಯದ ಹಡಿಕೆ ಮೂತ್ರದ ಕುಡಿಕೆ
ಎಲುವಿನ ತಡಿಕೆ ಕೀವಿನ ಹಡಿಕೆ
ಒಡಲುವಿಡಿದು ಕೆಡದಿರು ಚನ್ನಮಲ್ಲಿಕಾರ್ಜುನನರಿ ಮರುಳೆ !

Digitalized by e-Sahithya Documentation Forum
Sponsored by Sarayu Foundation Trust

ಎಂದು ನಶ್ವರ ಶರೀರದ ಕ್ಷಣಿಕತೆಯನ್ನರಿತು ಲೌಕಿಕ ಸುಖಗಳ ಹಗುರವಾಗಿ ಎಣಿಸಿ ದಿಟ್ಟತನದಿಂದ ಹೊರಟ ಆ ಘಟನೆ ಸ್ತ್ರೀಯು ಅಧ್ಯಾತ್ಮಿಕ ಮುನ್ನಡೆ ಸಾಧಿಸುವಲ್ಲಿ ಸ್ಫೂರ್ತಿದಾಯಕವಾಗಿದೆ.

ಕಾಮುಕರು, ವಿಷಯಾಂಧರು, ನಿಂದಕರು ಎಲ್ಲ ಕಾಲದಲ್ಲಿಯೂ ಇರುವುದು ಸರ್ವೆ ಸಾಮಾನ್ಯ. ಸಂಖ್ಯೆಯಲ್ಲಿ ವ್ಯತ್ಯಾಸವಿದ್ದರೂ ಸಜ್ಜನರು ದುರ್ಜನರೂ ಸರ್ವಕಾಲದಲ್ಲಿಯೂ ಇರುವುದು ಸೃಷ್ಟಿಯ ನೇಮವೆ ಆಗಿದೆ. ಇಂದಿನ ಶತಮಾನದಲ್ಲಿ ವಾಹನ ಸೌಕರ್ಯ, ಪೋಲೀಸ್ ರಕ್ಷಣೆ, ದೂರವಾಣಿ ಅನೇಕ ಸೌಲಭ್ಯಗಳ ಮಧ್ಯೆ ಸ್ತ್ರೀ ದೂರದ ಪ್ರವಾಸ ಕೈಗೊಳ್ಳುವಲ್ಲಿ ಹಲವಾರು ಸಮಸ್ಯೆಗಳನ್ನೆದುರಿಸುತ್ತಿದ್ದರೆ, ಅಂದು ಯಾವ ಸವಲತ್ತುಗಳು ಇಲ್ಲದೆ ಕಾಲ್ನಡಿಗೆಯಿಂದ ಕಲ್ಲು ಮುಳ್ಳು ತುಳಿದು ಕಾಮುಕರ ಕೀಟಲೆ, ನಿಂದಕರ ಚುಚ್ಚುಮಾತು ದುರ್ಜನರ ತೊಂದರೆಗಳನ್ನೆದುರಿಸುತ್ತ ಬಹಳ ದೂರದ ದಾರಿಯಲ್ಲಿ ನಡೆಯುತ್ತ ಸಾಗಿದ್ದುದು ಸ್ತ್ರೀಯು ದಿಟ್ಟತನ, ಸಹನೆಯ ಸಾಕಾರ ಮೂರ್ತಿಯೆಂಬುದನ್ನು ಮನವರಿಕೆ ಮಾಡಿ ಕೊಡುತ್ತದೆ.

ಕಲ್ಯಾಣ ಪ್ರವೇಶ ಮಾಡುವಾಗ ಪ್ರಭುದೇವರ ಯೋಜನೆಯಂತೆ ಬಂದು ಕಿನ್ನರಿ ಬೊಮ್ಮಯ್ಯ ಒಡ್ಡಿದ ಕಠಿಣ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಆತನನ್ನೇ ಬೆರಗುಗೊಳಿಸುವಂತೆ ಮಾಡಿ ಅವನೊಡ್ಡಿದ ಆಶೆ ಆಮಿಷಗಳಿಗೆ ಬಲಿಯಾಗದೆ ಆತನ ಪರೀಕ್ಷೆಯ ಪ್ರಶ್ನೆಗಳಿಗೆಲ್ಲಾ ಸಮರ್ಪಕ ಉತ್ತರ ನೀಡುತ್ತ ವಿಷಯದಾಶೆಗಳನ್ನು ಅಲ್ಲಗಳೆದು ಕಿನ್ನರಿ ಬೊಮ್ಮಯ್ಯನನ್ನೇ ದಂಗುಗೊಳಿಸದ ಪ್ರಸಂಗ ಸ್ತ್ರೀ ತನ್ನ ಪಾವಿತ್ರ್ಯತೆಯ ರಕ್ಷಣೆಯಲ್ಲಿ ಪುರುಷನೊಡನೆ ಸೆಣಸಾಡಿ ಗೆಲ್ಲುವುದರಲ್ಲಿ ಆಕೆಯ ಜಾಣ್ಮೆಯನ್ನು, ಪಾವಿತ್ರ್ಯತೆಗೆ ಕೊಡುವ ಮಹತ್ವವನ್ನು, ಅದನ್ನುಳಿಸಿಕೊಳ್ಳಲು ಆಕೆ ತೋರುವ ಜಾಗರೂಕತೆಯನ್ನು ಎತ್ತಿ ತೋರಿಸುತ್ತದೆ.

ಅನುಭವ ಮಂಟಪದ ಪ್ರವೇಶದ ನಂತರ ಪ್ರಭುದೇವರು ಮುಂದಿಟ್ಟ ಕಠಿಣ ಪ್ರಶ್ನೆಗಳಿಗೆಲ್ಲ ಉತ್ತರಿಸಿ ಬಸವಣ್ಣನವರ ಮೋಹದ ಮಗಳಾಗುವದಲ್ಲದೇ ಅಲ್ಲಮ ಪ್ರಭುದೇವರ ಮನಸ್ಸನ್ನು ತನ್ನ ಉತ್ತರಗಳಿಂದ ಕರಗಿಸಿ ನೀರಾಗಿಸಿ, ಹೆತ್ತ ತಾಯಿಗೆ ನಮೋ ನಮಃ ಎನ್ನುವಂತೆ ಮಾಡಿದ ಆಕೆ ವಿನಯಪೂರಿತ ಮೃದು ಉತ್ತರದಿಂದ ಶರಣರ ಮನಸೂರೆಗೊಂಡಿದ್ದು ಹೆಣ್ಣು ಎಂತಹ ಕಠಿಣ ಮನವನ್ನೂ ಕರಗಿಸುವಲ್ಲಿ ಪ್ರವೀಣಳೆಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ.

ಅಗಲಿ ಸಹಿಸಲಾರದಂತಹ ಶರಣರ ಸಂಗವನ್ನೇ ತೊರೆದು ದೇವನಲ್ಲಿ ಒಡವೆರೆದು ಒಂದಾಗಲು ಏಕಾಂಗಿಯಾಗಿ ನಿರ್ಜನ ದಟ್ಟ ಕದಳಿ ವನಕ್ಕೆ ಪರ್ಯಟನೆ ಬೆಳೆಸಿದುದು ಸ್ತ್ರೀ ಎಂತಹ ಮೋಹವನ್ನು ತೊರೆದು ನಿರ್ಲಿಪ್ತತೆ ಸಾಧಿಸುವಲ್ಲಿ ಯಶಸ್ಸು ಸಾಧಿಸಬಲ್ಲಳು ಎಂಬುದು ವ್ಯಕ್ತಗೊಳ್ಳುತ್ತದೆ.

- ಮಾತೆ ಅಕ್ಕಮಹಾದೇವಿ

ವಿಚಾರ ಕಿರಣ : ಲಿಂಗದೇವನ ಶರಣರ ಪವಿತ್ರ ಕರ್ತವ್ಯ

ಯಾರೋ ಒಬ್ಬರು ಭಕ್ತರ ಮನೆಯ ಮದುವೆಯ ಆಹ್ವಾನ ಪತ್ರಿಕೆ ಬಂದಿತು. ಆದರ
ಮೇಲೆ "ಕೂಡಲ ಸಂಗನ ಶರಣರ ಬರುವೆಮಗೆ ಪ್ರಾಣಜೀವಾಳ" ಎಂಬ ವಾಕ್ಯವಿದ್ದಿತು.
ನೋಡಿ ನನಗೆ ಕಸಿವಿಸಿಯಾಯಿತು. ನಮಗೆ ಕೂಡಲ ಸಂಗನ ಶರಣರ ಬರುವು ಅಲ್ಲ,
ಲಿಂಗದೇವನ ಶರಣರ ಬರುವು ಪ್ರಾಣಜೀವಾಳ. ಹೇಗೆಂದರೆ, ಕೂಡಲ ಸಂಗಮ ಎಂದರೆ
ಶಿವನ ಒಂದು ರೂಪ, ಕಾಶಿ, ರಾಮೇಶ್ವರ, ಶ್ರೀಶೈಲ, ಕೂಡಲಸಂಗಮ ಇತ್ಯಾದಿ ಸ್ಥಳಗಳಲ್ಲಿರುವ
ಅಲ್ಲಿಯ ಅಧಿದೇವತೆಗಳಾದ ವಿಶ್ವನಾಥ, ರಾಮೇಶ್ವರ, ಮಲ್ಲಿಕಾರ್ಜುನ, ಕೂಡಲ
ಸಂಗಮೇಶ್ವರ ಮುಂತಾದ ಸ್ಥಾವರಲಿಂಗ ಭಕ್ತರು ಎಲ್ಲರೂ ದೀಕ್ಷಾವಂತರಲ್ಲ,
ಏಕದೇವೋಪಾಸಕರಲ್ಲ, ಏಕದೇವತಾ (ಶಿವ) ಉಪಾಸಕರೂ ಅಲ್ಲ. ಅವರಲ್ಲಿ ಮೂಢ ನಂಬಿಕೆ
ತೊಲಗಿರುವುದಿಲ್ಲ, ಜಾತಿ ಭೇದ ತೊಲಗಿರುವುದಿಲ್ಲ, ಧಾರ್ಮಿಕ ಗಣತ್ವ, ಸಹೋದರತ್ವ
ಇಲ್ಲವೇ ಇಲ್ಲ. ಅಂದಾಗ ಅವರ ಬರುವು ನಮಗೆ ಹೇಗೆ ಪ್ರಾಣಜೀವಾಳವಾದೀತು ?
(ಮಾನವೀಯತೆಯ ದೃಷ್ಟಿಯಿಂದ ಎಲ್ಲ ಮಾನವರೂ ನಮ್ಮ ಸೋದರರು ಆ ಮಾತು ಬೇರೆ)

ಲಿಂಗದೇವನ ಶರಣರು ಇಷ್ಟಲಿಂಗಧಾರಿಗಳು, ಗುರುಕರಕಮಲ ಸಂಜಾತರು,
ಕಾಲಕರ್ಮವಿರಹಿತರು, ಧಾರ್ಮಿಕ ಸಹೋದರತ್ವ ಗಣತ್ವ ಹೊಂದಿರುವವರು,
ಏಕದೇವೋಪಾಸಕರು. ಆದ್ದರಿಂದ ಲಿಂಗದೇವನ ಶರಣರ ಬರುವು ನಮಗೆ ಪ್ರಾಣಜೀವಾಳ.

"ಪೃಥ್ವಿ ಸ್ಥಿರವಾಗಿ ನಿಂತಿದೆ. ಸೂರ್ಯನೇ ಸುತ್ತ ತಿರುಗುತ್ತಾನೆ" ಎಂಬ ಬೈಬಲ್
ನಂಬಿಕೆಯ ಜಿಯೋಸೆಂಟ್ರಿಕ್ ಥಿಯರಿಯನ್ನು ಅಲ್ಲಗಳೆದು ಸೂರ್ಯನೇ ಕೇಂದ್ರ ಪೃಥ್ವಿ
ಹಿಡಿದು ಉಳಿದೆಲ್ಲ ಗ್ರಹಗಳು ಸೂರ್ಯನ ಸುತ್ತಲೂ ತಿರುಗುತ್ತಿವೆ ಎಂದು ಹೀಲಿಯೋ
ಸೆಂಟ್ರಿಕ್ ಥಿಯರಿ ಪ್ರತಿಪಾದಿಸಿದ ಗೆಲಿಲಿಯೋನಿಗೆ ವಿಪರೀತ ಕಿರುಕುಳವನ್ನು
ಕೊಡಲಾಗುತ್ತಿತ್ತು. ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿತ್ತು. ನೀವು ಹೇಳಿದ್ದು ತಪ್ಪು ಎಂದು
ಒಪ್ಪಿಕೋ ಎಂದು ಎಲ್ಲರೂ ಒತ್ತಾಯಿಸುತ್ತಿದ್ದರು. ಆಗ ಗೆಲಿಲಿಯೋ ಕೋರ್ಟ್ ಹೊರಗೆ
ಬಂದು ಆಕಾಶವನ್ನು ಒಮ್ಮೆ ತಲೆ ಎತ್ತಿ ನೋಡಿ, "ಇಲ್ಲ ನಾನು ಹೇಳಿದ್ದೇ ಸರಿ ; ಸೂರ್ಯನ
ಸುತ್ತಲೂ ಪ ಥ್ವಿ ತಿರುಗುತ್ತಿದೆ. ನಾನು ಸುಳ್ಳು ಹೇಳಲಾರೆ" ಎಂದನಂತೆ. ಆರ್ಯ ಸಮಾಜದ
ಪ್ರತಿಪಾದಕರಾದ ಮಹರ್ಷಿ ಪೂಜ್ಯ ದಯಾನಂದ ಸ್ವಾಮಿಗಳು ವೇದಗಳ ಆಧಾರ ಹಿಡಿದೇ
ಏಕದೇವೋಪಾಸನೆ ಪ್ರತಿಪಾದಿಸಿದರು. ಬಹುದೇವತೆಗಳ ಆರಾಧನೆಯ ಮೇಲೆಯೇ ಹೊಟ್ಟೆ
ಪಾಡು ನಡೆಸುವ ಬ್ರಾಹ್ಮಣ ಪುರೋಹಿತರು ಮಹರ್ಷಿ ದಯಾನಂದರಿಗೆ ವಿಪರೀತ ಕಿರುಕುಳ
ಕೊಟ್ಟರು. ಆದರೂ ದಯಾನಂದರು ತತ್ವನಿಷ್ಠೆ ಬಿಡಲಿಲ್ಲ. ೩೬೩ ದೇವತೆಗಳನ್ನು ಪೂಜಿಸುತ್ತಿದ್ದ
ಅರಬ್ ಬುಡಕಟ್ಟಿನ ಜನರಿಗೆ ಅಲ್ಲಹ ಒಬ್ಬನೇ, ಅವನು ಸರ್ವಶ್ರೇಷ್ಠ ಎಂದು
ಪ್ರತಿಪಾದಿಸಿದ್ದಕ್ಕಾಗಿ ಪ್ರವಾದಿ ಮೊಹಮ್ಮದರು ಅನುಭವಿಸಿದ ಕಿರುಕುಳ ಅಷ್ಟಿಷ್ಟಲ್ಲ ; ಆದರೂ
ಅವರು ಹಿಂತೆಗೆಯಲಿಲ್ಲ. ವರ್ಣಾಂತರ ವಿವಾಹ ಅಕ್ಷಮ್ಯ ಅಪರಾಧ ಎಂದು ಧರ್ಮಪಿತ
ಬಸವಣ್ಣನವರಿಗೆ, ಹರಳಯ್ಯ-ಮಧುವರಸ-ಶೀಲವಂತರಿಗೆ ಸಂಪ್ರದಾಯವಾದಿಗಳು

Digitalized by e-Sahithya Documentation Forum
Sponsored by Sarayu Foundation Trust

ವಿಪರೀತ ಕಿರುಕುಳ ಕೊಟ್ಟರು. ಅವರು ತಮ್ಮ ಸತ್ಯದ ನಿಲುವಿನಿಂದ ದೂರ ಸರಿಯಲಿಲ್ಲ. ಇಂದು ನಮ್ಮ-ನಿಮ್ಮೆಲ್ಲರ ಕರ್ತವ್ಯವೂ ಇದೇ, ನಾವು-ನೀವು ಲಿಂಗದೇವನ ಶರಣರೇ ವಿನಾ ಕೂಡಲಸಂಗನ ಭಕ್ತರಲ್ಲ.

ಮಾರ್ಚ ತಿಂಗಳಿನಲ್ಲಿ ಅಮೋಘ ಕಾರ್ಯಕ್ರಮಗಳ ಸುಗ್ಗಿ

ಗುಲಬರ್ಗಾ : ಗುಲಬರ್ಗಾ ನಗರದ ಶ್ರೀ ಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ಮಾರ್ಚ ೧ ರಂದು ವಿಶೇಷ ಕಾರ್ಯಕ್ರಮ. ಗುಲಬರ್ಗಾ ರಾಷ್ಟ್ರೀಯ ಬಸವ ದಳದ ಶರಣ ನಾಗಶೆಟ್ಟಿ ಕಟಾಳೆಯವರ ಸುಪುತ್ರ, ಸುಪುತ್ರಿಯರ ಮದುವೆ. ಮಗಳು ಸುನೀತಾಳನ್ನು ಭದ್ರಾವತಿ ರಾಷ್ಟ್ರೀಯ ಬಸವ ದಳದ ಶರಣ.ಮಹಾಲಿಂಗಪ್ಪನವರ ಮಗನಿಗೆ ಕೊಟ್ಟರು. ಮೂರು ಮನೆತನಗಳವರೂ ಶರಣ ಸಂಸ್ಕೃತಿಯ, ಸರಳ ಜೀವಿಗಳು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಮಾರ್ಗದರ್ಶನದಲ್ಲೇ ಬಸವ ಧರ್ಮ ಸಂಸ್ಕಾರಗಳು ಪುಸ್ತಕದಲ್ಲಿ ಹೇಳಲ್ಪಟ್ಟಂತೆ, ಮದುವೆ ಅಚ್ಚುಕಟ್ಟಾಗಿ ನೆರವೇರಿತು. ಬಸವೇಶ್ವರ ಪೂಜೆಯಿಂದ ಹಿಡಿದು ಮದುವೆಯ ವಿಧಿವಿಧಾನ ಪೂರ್ತಿಯಾಗುವತನಕ ಎಲ್ಲವೂ ಆನಂದಕರವಾಗಿ ಪೂರ್ಣಗೊಂಡಿತು. ಕಲ್ಯಾಣ ಮಂಟಪದ ಮಾಲಿಕರಾದ ನಿವೃತ್ತ ಪೋಲೀಸ್ ಅಧಿಕಾರಿ ಶರಣ. ಬಸವರಾಜ್ ಅವರು ಅಧ್ಯಕ್ಷತೆ ವಹಿಸಿದ್ದರು. ವಿವಾಹ ಕಾರ್ಯಕ್ರಮದ ಅರ್ಥವತ್ತತೆ ನೋಡಿ ಸಂತೋಷ ವ್ಯಕ್ತಪಡಿಸಿದರು. ತಮ್ಮ ಮನೆಗೂ ಬರಮಾಡಿಕೊಂಡು ಕಾಣಿಕೆ ಸಲ್ಲಿಸಿದರು.

ರಾಷ್ಟ್ರೀಯ ಬಸವ ದಳದ ಶರಣರು ಇಪ್ಪತ್ತೈದು ಕಾರುಗಳಲ್ಲಿ ಭವ್ಯವಾದ ರೀತಿಯಲ್ಲಿ ಜಯಘೋಷ ಮಾಡುತ್ತಾ ಸಿದ್ಧೇಶ್ವರ ಕಲ್ಯಾಣ ಮಂಟಪದಿಂದ ಮುಖ್ಯ ರಸ್ತೆಗಳಲ್ಲಿ ಹಾಯ್ದು ಬಸವ ವನಕ್ಕೆ ಪೂಜ್ಯ ಮಾತಾಜಿಯವರನ್ನು ಕರೆದೊಯ್ದರು. ವಿಶ್ವಗುರು ಬಸವಣ್ಣನವರ ಅಮೃತ ಶಿಲಾ ಪುತ್ಥಳಿಯ ವಿಧ್ಯುಕ್ತ ಪೂಜೆಯ ನಂತರ ಸಂಜೆ ೫ ರಿಂದ ೭ ರವರೆಗೆ ಪ್ರವಚನವು ನೆರವೇರಿತು. ಏಳರಿಂದ ಏಳೂವರೆಯವರೆಗೆ ''ನೆನಹು'' ಮಾಡಿದ ನಂತರ ಮಂಗಲವಾಗಿ ಕಾರ್ಯಕ್ರಮ ಮುಕ್ತಾಯವಾಯಿತು.

ಪೂಜ್ಯ ಶ್ರೀ ಮಾತಾಜಿಯವರ ಕೀರ್ತಿಯನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ವಿವಾಹ ಕಾರ್ಯಕ್ರಮಕ್ಕೆ ಬಂಧುಬಳಗ ಸಂಬಂಧಿಗಳು ರಾಷ್ಟ್ರೀಯ ಬಸವ ದಳದವರು ಸೇರುವುದು ಸಹಜ. ಆದರೆ ಮಾತಾಜಿ ಬಂದಿದ್ದಾರೆ ಎಂದು ತಿಳಿಯುತ್ತಲೇ (ವಿರೋಧಿಗಳೂ ಚೆನ್ನಾಗಿ ಪ್ರಚಾರ ಕೊಡುತ್ತಾರೆ) ಜನರು ಮದುವೆಗೆ, ಸಂಜೆಯ ಕಾರ್ಯಕ್ರಮಕ್ಕೆ ಧಾವಿಸಿ ಬರುತ್ತಿದ್ದುದು ನೋಡಿದರೆ ಸೋಜಿಗ ಎನಿಸುತ್ತಿತ್ತು. ಕಲ್ಯಾಣ ಮಂಟಪ ಬಹಳ ದೊಡ್ಡದು, ಸುಂದರವಾಗಿದೆ. ಜನ ಸಂದಣಿಗೆ ಸಾಕಾಗಲೇ ಇಲ್ಲ. ಸಂಜೆ ಕಾರ್ಯಕ್ರಮದಲ್ಲೂ ಅಷ್ಟೇ ಅವರ ಧ್ವನಿಯನ್ನು ಮೈಕಿನಲ್ಲಿ ಕೇಳುತ್ತಲೇ ಜನರು ಮಂತ್ರಮುಗ್ಧರಾಗಿ ಧಾವಿಸುವರು. .ನಂತರ ಪಾದಪೂಜೆಗೆ ಒತ್ತಾಯದ ಆಹ್ವಾನ. ಎಂಟು ಗಂಟೆಯಿಂದ ರಾತ್ರಿ ಒಂದು ಗಂಟೆಯವರೆಗೆ ವಿವಿಧ ಶರಣ ಬಂಧುಗಳ ಆತ್ಮೀಯ ಆಗ್ರಹಕ್ಕೆ ಮಣಿದು ಶರಣರ ಗೃಹಗಳನ್ನು ಸಂದರ್ಶಿಸಿದರು. ಜನರು ಅವರಲ್ಲಿ ಭಕ್ತಿಯ ಜೊತೆಗೆ ಬೆಳೆಸಿಕೊಂಡ ಅಭಿಮಾನ, ಆತ್ಮೀಯತೆ

ನೋಡಿದರೆ ಅಪೂರ್ವ ಆನಂದ ಎನಿಸುತ್ತದೆ.

ಧಾರವಾಡ : ಶಿವರಾತ್ರಿಯಂದು ನಡೆಯುವ ಗಣಮೇಳದಲ್ಲಿ ಪೂಜ್ಯ ಮಾತಾಜಿಯವರು ಧಾರವಾಡದಲ್ಲಿ ಭಾಗಿಗಳಾಗಬೇಕೆಂದು ಧಾರವಾಡ-ಹುಬ್ಬಳ್ಳಿ ರಾಷ್ಟ್ರೀಯ ಬಸವ ದಳದವರ ಆಗ್ರಹವಾಗಿತ್ತು. ಅದರಂತೆಯೇ, ದಿ. ೪-೩-೨೦೦೦ದಂದು ಧಾರವಾಡದ ಕೇಂದ್ರ ಭಾಗವಾದ ಕಡಪಾ ಮೈದಾನದಲ್ಲಿ ಕಲಾಭವನದ ಮುಂದೆ ಹಾಕಲ್ಪಟ್ಟ ವಿಶೇಷ ಪೆಂಡಾಲಿನಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಿತು. ಮೊದಲು ಮೆರವಣಿಗೆ ಮತ್ತು ಪಥ ಸಂಚಲನವು ಜರುಗಿತು. ನಂತರ ಸಾಮೂಹಿಕ ಪ್ರಾರ್ಥನೆ , ಸಂದೇಶ ವಾಚನ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆದ ಶರಣ ಗಣ ಮೇಳದ ಅಧ್ಯಕ್ಷತೆಯನ್ನು ಹಿರಿಯರಾದ ಗಣ್ಯ ಉದ್ಯಮಿಗಳಾದ ಶರಣ ಜಿ.ಜಿ.ದೊಡ್ಡವಾಡ ವಹಿಸಿದ್ದರು. ಪೋಲೀಸ್ ಅಧಿಕಾರಿಗಳಾದ ಶರಣ ಬಸವರಾಜ ಮಾಲಗತ್ತಿಯವರು ಉದ್ಘಾಟಿಸಿದರು. ಧಾರವಾಡ-ಹುಬ್ಬಳ್ಳಿ ಮತ್ತು ಸುತ್ತಲಿನ ಗ್ರಾಮದ ಶರಣ ಬಂಧುಗಳು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದರು. ಧಾರವಾಡದ ಉಳವಿ ರಸ್ತೆಯಲ್ಲಿರುವ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಸಂಜೆ ಸಾಮೂಹಿಕ ಇಷ್ಟಲಿಂಗ ಪೂಜೆ, ದೀಕ್ಷೆ, ಪ್ರಸಾದ ವಿತರಣೆ ನಡೆದವು. ದಿ. ೫ ರಂದು ಕೂಸಪ್ಪನವರು ಎಂಬ ಶರಣರ ನೂತನ ಗೃಹದ ಪ್ರವೇಶವನ್ನು ಪೂಜ್ಯ ಮಾತಾಜಿಯವರು ನೆರವೇರಿಸಿ ನಂತರ ಅನುಭವಗೋಷ್ಠಿಯನ್ನು ನಡೆಸಿದರು.

ಗೋಕಾಕ : ಬೆಳಗಾಂವ ಜಿಲ್ಲೆಯ ಗೋಕಾಕ್ ನಗರದಲ್ಲಿ ಮಾರ್ಚ ೬ ಮತ್ತು ೭ ರಂದು ವಿಶೇಷ ಕಾರ್ಯಕ್ರಮಗಳು ಜರುಗಿದವು. ಗೋಕಾಕ್ ನಗರದ ಗುರುವಾರ ಪೇಟೆಯ ಬಸವ ಮಂಟಪದ ಮೂರನೆಯ ವಾರ್ಷಿಕೋತ್ಸವ, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳವರ ಜಂಗಮದೀಕ್ಷೆಯ ಎರಡನೆಯ ವಾರ್ಷಿಕೋತ್ಸವ ಕಾರ್ಯಕ್ರಮಗಳು ಜರುಗಿದವು. ದಿ. ೬ ರಂದು ಬೆಳಿಗ್ಗೆ ಗುರುವಾರ ಪೇಟೆಯ ಬಸವ ಮಂಟಪದಲ್ಲಿ ಗಣ್ಯರಿಗೆ, ದಾನಿಗಳಿಗೆ ಸನ್ಮಾನಿಸಲಾಯಿತು. ಸಂಜೆ ನಗರದ ಮಧ್ಯಭಾಗದಲ್ಲಿರುವ ಗಾಂಧಿ ಮೈದಾನದಲ್ಲಿ ಪ್ರವಚನ ಕಾರ್ಯಕ್ರಮ. ದಿ.೭ ರಂದು ಹಲವಾರು ಶರಣರ ಮನೆಗಳಲ್ಲಿ ಪಾದಪೂಜೆಯಲ್ಲಿ ಭಾಗವಹಿಸಿದ ಪೂಜ್ಯ ಮಾತಾಜಿಯವರು ಸಂಜೆ ಗಾಂಧಿ ಮೈದಾನದಲ್ಲಿ ವಿಶೇಷ ಪ್ರವಚನ ನೀಡಿದರು. ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳ ಸನ್ನಿಧಿಯಲ್ಲಿ ನಡೆದ ಪ್ರವಚನದ ಅಧ್ಯಕ್ಷತೆಯನ್ನು ಗೋಕಾಕ್ ನಗರದ ಅಧ್ಯಕ್ಷರಾದ ಶರಣ ಸಿದ್ಧಲಿಂಗ ದಳವಾಯಿ ವಹಿಸಿದ್ದರು. ಶರಣ ಮಹಾದೇವ ಗುಡೇರ ಅವರು ಸಭಾ ನಿರ್ವಹಣೆ ಮಾಡಿದರು. ವಿದ್ಯಾನಗರದಲ್ಲಿ ನಿರ್ಮಾಣವಾಗುತ್ತಿರುವ ನೂತನ ಬಸವ ಮಂಟಪದ ಪ್ರಗತಿಯನ್ನು ಕಂಡು ಪೂಜ್ಯ ಮಾತಾಜಿ ಹರ್ಷಿಸಿದರು.

ಉದಗೀರ್ : ಮಹಾರಾಷ್ಟ್ರ ರಾಜ್ಯದ ಲಾತೂರ್ ಜಿಲ್ಲೆಯ ಉದಗೀರ್ ತಾಲ್ಲೋಕು ಸ್ಥಳ ಇಲ್ಲಿಯ ರಾಷ್ಟ್ರೀಯ ಬಸವ ದಳ ಚಿಂತನೆ ಮತ್ತು ಚೈತನ್ಯಗಳ ಚಿಲುಮೆ. ನಾಲ್ಕು ತಿಂಗಳ ಹಿಂದೆಯೇ ಉದಗೀರ್ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಶರಣ. ಅಶೋಕ ಸ್ವಾಮಿ ಅವರಿಂದ ಪೂಜ್ಯ ಮಾತಾಜಿಯವರ ೫೫ನೆಯ ವರ್ಧಂತಿಯನ್ನು ಆಚರಿಸಬೇಕೆಂದು ಆಗ್ರಹದ

Digitalized by e-Sahithya Documentation Forum
Sponsored by Sarayu Foundation Trust

ಆಮಂತ್ರಣ. ಹೀಗಾಗಿ ಮಾರ್ಚ ಹದಿಮೂರರಂದು ಶಿಶಿನೆಯ ಜನ್ಮದಿನೋತ್ಸವ ಆಚರಣೆಗೆ ಉತ್ಸಾಹದ ತಯಾರಿ, ನೂತನ ವಿಸ್ತರಣೆಯಲ್ಲಿ ಹೊಸದಾಗಿ ಕಟ್ಟಿದ ಮನೆಯಲ್ಲಿ ಪೂಜ್ಯ ಮಾತಾಜಿಯವರನ್ನು ಬರಮಾಡಿಕೊಂಡು ಗೃಹಪ್ರವೇಶವನ್ನು ಪೂರೈಸಿದರು. ಅಲ್ಲಿಂದ ಭವ್ಯವಾದ ಮೆರವಣಿಗೆಯಲ್ಲಿ ಉದಗೀರ್ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತಾ ಪೂಜ್ಯ ಮಾತಾಜಿಯವರನ್ನು ವೇದಿಕೆಗೆ ಕರೆತರಲಾಯಿತು. ಬೀದರ್, ಗುಲಬರ್ಗಾ, ಕೊಪ್ಪಳ ಜಿಲ್ಲೆಗಳ ಶರಣರು ಮಾತ್ರವಲ್ಲದೆ ಹೈದರಾಬಾದ್, ಜಹಿರಾಬಾದ್ ಶರಣರೂ ಸಂಗಮಿಸಿದ್ದರು. ಇಡೀ ನಗರದ ತುಂಬ ಸುಮಾರು ೬೦ ಭವ್ಯ ಕಮಾನುಗಳನ್ನು ವಿವಿಧ ಸಂಘ-ಸಂಸ್ಥೆಗಳವರು ಕಟ್ಟಿ, ತಮ್ಮ ತಮ್ಮ ಸಂಸ್ಥೆ, ಅಂಗಡಿಗಳ ಬ್ಯಾನರ್ ಕಟ್ಟಿದುದಲ್ಲದೆ, ಮಾಲಾರ್ಪಣೆ ಮಾಡಿ, ಸ್ವಾಗತಿಸಿ ಪೂಜ್ಯ ಮಾತಾಜಿಯವರನ್ನು ಸನ್ಮಾನಿಸುತ್ತಿದ್ದರು. ಬೆಳಿಗ್ಗೆ ೧೦-೩೦ರಿಂದ ಮಧ್ಯಾಹ್ನ ೨-೩೦ ಗಂಟೆಯವರೆಗೂ ಮೆರವಣಿಗೆ ನಡೆಯಿತು. ಉರಿ ಬಿಸಿಲಿನಲ್ಲಿಯೂ ರಾಷ್ಟ್ರೀಯ ಬಸವ ದಳದ ಶರಣ ಶರಣೆಯರ ಉತ್ಸಾಹ ಮೇರೆ ಮೀರಿತ್ತು. ಜಯಘೋಷ ಮಾಡುತ್ತ ಕೋಲಾಟಗಳ ಮೂಲಕ ಗಣಗೀತೆಗಳನ್ನು ಹಾಡುತ್ತಿದ್ದರು.

ಮೆರವಣಿಗೆ ೨-೩೦ಗಂಟೆಗೆ ವೇದಿಕೆಗೆ ಆಗಮಿಸಿದಾಗ ಧರ್ಮಪಿತ ಬಸವಣ್ಣನವರ ಪೂಜೆ ನೆರವೇರಿಸಿ, ಧ್ವಜಾರೋಹಣವನ್ನು ಮಾಡಲಾಯಿತು. ನಂತರ ಗಣಪ್ರಸಾದಕ್ಕೆ ಜನರನ್ನು ಕಳಿಸಿ ಸಂಜೆ ೫ ಗಂಟೆಗೆ ಕಾರ್ಯಕ್ರಮವನ್ನು ಆರಂಭಿಸಲಾಯಿತು. ನಗರ ಸಭಾಧ್ಯಕ್ಷರು, ಭಾಲ್ಕಿಯ ಶಾಸಕರಾದ ಶರಣ. ಪ್ರಕಾಶ್ ಖಂಡ್ರೆ ಮಾತ್ರವಲ್ಲ ಮಹಾರಾಷ್ಟ್ರದ ವಿವಿಧ ಭಾಗದ ಲಿಂಗಾಯತ ಪ್ರಮುಖರು ಆಗಮಿಸಿದ್ದರು. ಪೂಜ್ಯ ಮಾತಾಜಿಯವರನ್ನು ಪುಷ್ಪ ವೃಷ್ಟಿ ಮಾಡಿ, ನೂರಾರು ಮಾಲೆಗಳನ್ನು ಅರ್ಪಿಸಿ, ಆರತಿ ಮಾಡಿ, ವಸ್ತ್ರ-ಕಾಣಿಕೆಗಳನ್ನಿತ್ತು ಶರಣ ಬಂಧುಗಳು ಗೌರವಿಸಿದರು. ಶಿಶಿನೆಯ ಹುಟ್ಟು ಹಬ್ಬವನ್ನು ಆಚರಿಸುವ ಭಾಗ್ಯ ತಮ್ಮ ಊರಿಗೆ, ತಮ್ಮ ರಾಷ್ಟ್ರೀಯ ಬಸವ ದಳಕ್ಕೆ ಒದಗಿದ್ದಕ್ಕಾಗಿ ಅಲ್ಲಿಯ ಶರಣರ ಉತ್ಸಾಹ ಮೇರೆ ಮೀರಿತ್ತು. ಶರಣೆ ಸರೂಬಾಯಿ ಕಲ್ಯಾಣಪ್ಪ ಸೋರಡೆ, ನೀಲಂಗ, ಶರಣೆ ಗುಣವಂತಿ, ಡಾ|| ಮಿಟಾರೆ, ಉದಗೀರ್, ರಾಷ್ಟ್ರೀಯ ಬಸವದಳದ ಏಳು ಜನ ಶರಣರು ಕೂಡಲಸಂಗಮದ ಸರ್ವಜ್ಞ ಶರಣಧಾಮದಲ್ಲಿ ಕೋಣೆಗಳನ್ನು ಕಟ್ಟಿಸಲು ಕಾಣಿಕೆ ಸಲ್ಲಿಸಿದರು. ಬಸವ ಧರ್ಮ ಪೀಠದ ಪರವಾಗಿ ಈ ದಾನಿಗಳನ್ನು ಸತ್ಕರಿಸಿದರಲ್ಲದೆ ಪೂಜ್ಯ ಮಾತಾಜಿಯವರು ಉದಗೀರ್ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಅಶೋಕ್ ಸ್ವಾಮಿಯವರನ್ನು, ಪ್ರಧಾನ ಸಂಚಾಲಕಿ ಶರಣೆ ಲಕ್ಷ್ಮೀಬಾಯಿ ಪಾಂಡ್ರೆಯವರನ್ನು ಶಾಲುಹೊದಿಸಿ ಸತ್ಕರಿಸಿ ಆಶೀರ್ವದಿಸಿದರು. ಶರಣೆ ಲಕ್ಷ್ಮೀಬಾಯಿ ಪಾಂಡ್ರೆ ಕಾಲೇಜಿನಲ್ಲಿ ಪ್ಯೂನ್ ಆಗಿ ಕೆಲಸ ಮಾಡುತ್ತಿರುವ ಗೃಹಿಣಿ. ಜೀವನದಲ್ಲಿ ಅಪಾರ ಸಂಕಷ್ಟ ಅನುಭವಿಸಿ ಮಕ್ಕಳನ್ನು ಮುಂದೆ ತಂದ ಶರಣೆ. ಆದರೆ ಈ ಮಹಿಳೆಯ ಸಾತ್ವಿಕ ಧೈರ್ಯ, ದಿಟ್ಟತನ ತತ್ವನಿಷ್ಠೆ ಅಭಿನಂದನಾರ್ಹ. ಕಾರ್ಯಕ್ರಮದ ನಂತರ ದರ್ಶನ ಪಡೆಯಲು ಬಂದ ಓರ್ವ ಜೈನ ಪ್ರಾಧ್ಯಾಪಕರು ಶರಣೆ ಲಕ್ಷ್ಮೀಬಾಯಿ ಪಾಂಡ್ರೆಯ ಕರ್ತೃತ್ವ ಶಕ್ತಿಯನ್ನು ಕೊಂಡಾಡಿದರು. ವಿದ್ಯಾಸಂಸ್ಥೆಯು ಇವರ ಬಗ್ಗೆ ಅಭಿಮಾನ ಹೊಂದಿದೆ ಎಂದು ಹೇಳಿದರು.

- ೩೩ನೇ ಪುಟಕ್ಕೆ ಮುಂದುವರೆದಿದೆ.

ಜಗದ ಮಹಾಗುರು ಪೂಜ್ಯ ಮಾತಾಜಿ ಮಂಗಲಂ

ಜ "ಜ" ಮಂಗಲಂ, ಜಕಾರ ಮಂಗಲಂ ಜಂಗಮ ಜ್ಯೋತಿ ಗುರುವೆ
ಮಂಗಲಂ, ಗುರುವೆ ಮಂಗಲಂ (ಮಾತಾಜಿ ಮಹಾಗುರುವೆ ಮಂಗಲಂ
ಮಹಾಗುರುವೆ ಮಂಗಲಂ, ಜಗದ್ಗುರುವೆ ಮಂಗಲಂ) - ಇದು ಪುನರಾವರ್ತನೆಯಾಗುತ್ತದೆ

ಗ "ಗ" ಮಂಗಲಂ, ಗಕಾರ ಮಂಗಲಂ, ಗಂಡರಗಂಡ ಸಚ್ಚಿದಾನಂದಂ
ಗೊಲಿದ ಗುರುವೆ ಮಂಗಲಂ, ಗುರುವೆ ಮಂಗಲಂ ॥ ಮಾ ॥

ದ "ದ" ಮಂಗಲಂ, ದಕಾರಮಂಗಲಂ ಬಸವ ಧರ್ಮ ಬಿತ್ತ ಬಂದ ಗುರುವೆ
ಮಂಗಲಂ ಗುರುವೆ ಮಂಗಲಂ ॥ ಮಾ ॥

ಮ "ಮ" ಮಂಗಲಂ, ಮಕಾರ ಮಂಗಲಂ, ಮಹಾದೇವಿಯಕ್ಕ ಮತ್ತೆ
ಬಂದ ಗುರುವೆ ಮಂಗಲಂ ॥ ಮಾ ॥

ಹಾ "ಹಾ" ಮಂಗಲಂ ಹಕಾರ ಮಂಗಲಂ, ಹಾರೈಸಬಂದಿರಿ ಜಗದ ಜನಕೆ
ಮಂಗಲಂ, ಗುರುವೆ ಮಂಗಲಂ ॥ ಮಾ ॥

ಗು "ಗು" ಮಂಗಲಂ, ಗುಕಾರ ಮಂಗಲಂ, ಗುರುತರ ಹೊಣೆ ಹೊತ್ತ
ಗುರುವೆ ಮಂಗಲಂ, ಗುರುವೆ ಮಂಗಲಂ ॥ ಮಾ ॥

ರು "ರು" ಮಂಗಲಂ, ರುಕಾರ ಮಂಗಲಂ, ರಾಗದ್ವೇಷರಹಿತರಾದ ಗುರುವೆ
ಮಂಗಲಂ, ಗುರುವೆ ಮಂಗಲಂ ॥ ಮಾ ॥

ಪ "ಪ" ಮಂಗಲಂ, ಪಕಾರ ಮಂಗಲಂ ಪ್ರವಚನದ ಪಟುವಾದ
ಗುರುವೆ ಮಂಗಲಂ, ಗುರುವೆ ಮಂಗಲಂ ॥ ಮಾ ॥

ರ "ರ" ಮಂಗಲಂ, ರಕಾರ ಮಂಗಲಂ ಬಸವ ರಕ್ಷೆ ಹೊತ್ತು ಬಂದ
ಗುರುವೆ ಮಂಗಲಂ, ಗುರುವೆ ಮಂಗಲಂ ॥ ಮಾ ॥

ಮ "ಮ" ಮಂಗಲಂ ಮಕಾರ ಮಂಗಲಂ ಬಸವ ಮಂಟಪ ಕರ್ತೃ
ಗುರುವೆ ಮಂಗಲಂ, ಗುರುವೆ ಮಂಗಲಂ ॥ ಮಾ ॥

ಪೂ "ಪೂ" ಮಂಗಲಂ ಪ್ರಕಾರ ಮಂಗಲಂ ಪುಣ್ಯದ ಪುಂಜವಾಗಿ ಧರೆಗೆ
ಬಂದ ಗುರುವೆ ಮಂಗಲಂ, ಗುರುವೆ ಮಂಗಲಂ ॥ ಮಾ ॥

ಜ್ಯ "ಜ್ಯ" ಮಂಗಲಂ ಜ್ಯಕಾರ ಮಂಗಲಂ ಬಸವ ಜ್ಯೋತ್ಸ್ನೆಯಾಗಿ
ಬಂದ ಗುರುವೆ ಮಂಗಲಂ, ಗುರುವೆ ಮಂಗಲಂ ॥ ಮಾ ॥

ಶ್ರೀ ಶ್ರೀ ಮಂಗಲಂ "ಶ್ರೀ" ಕಾರ ಮಂಗಲಂ ಶ್ರೀಕಾರ ರೂಪಾದ ಬಸವಾತ್ಮಜೆ
ಗುರುವೆ ಮಂಗಲಂ, ಗುರುವೆ ಮಂಗಲಂ ॥ ಮಾ ॥

Digitalized by e-Sahithya Documentation Forum
Sponsored by Sarayu Foundation Trust

ಮಾ "ಮಾ" ಮಂಗಲಂ ಮಕಾರ ಮಂಗಲಂ ಮಾನವೀಯ ಮಾತೃರೂಪಿ
ಗುರುವೆ ಮಂಗಲಂ, ಗುರುವೆ ಮಂಗಲಂ
॥ ಮಾ ॥

ತಾ "ತಾ" ಮಂಗಲಂ ತಾಕಾರ ಮಂಗಲಂ, ತಾಯಿ ತಂದೆ ಬಂಧು ಬಳಗ
ಎಲ್ಲಾ ಆದ ಗುರುವೆ ಮಂಗಲಂ, ಗುರುವೆ ಮಂಗಲಂ
॥ ಮಾ ॥

ಜಿ "ಜಿ" ಮಂಗಲಂ, ಜಿಕಾರ ಮಂಗಲಂ ಜೀವನ್ಮುಕ್ತರಾದ ಗುರುವೆ
ಮಂಗಲಂ, ಗುರುವೆ ಮಂಗಲಂ
॥ ಮಾ ॥

ಮಂ "ಮಂ" ಮಂಗಲಂ, ಮಕಾರ ಮಂಗಲಂ, ಬಸವ ಮಂತ್ರ ಪಸರಿಸಿದ
ಗುರುವೆ ಮಂಗಲಂ, ಗುರುವೆ ಮಂಗಲಂ
॥ ಮಾ ॥

ಗ "ಗ" ಮಂಗಲಂ, ಗಕಾರ ಮಂಗಲಂ ಗಮನ ಜನನ ಮರಣಗೆದ್ದ ಗುರುವೆ
ಮಂಗಲಂ, ಗುರುವೆ ಮಂಗಲಂ
॥ ಮಾ ॥

ಲಂ "ಲಂ" ಮಂಗಲಂ ಲಕಾರ ಮಂಗಲಂ, ಲಿಂಗದೇವನೆಂಬ ಹೆಸರು ಪ್ರತಿಷ್ಠಾಪಿಸಿದ
ಗುರುವೆ ಮಂಗಲಂ, ಗುರುವೆ ಮಂಗಲಂ ಮಾತಾಜಿ ಮಹಾಗುರುವೆ ಮಂಗಲಂ
ಮಹಾಗುರುವೆ ಮಂಗಲಂ, ಜಗದ್ಗುರುವೆ ಮಂಗಲಂ

ಬಸವಕಂದ ಸರೋಜಮ್ಮ ನಾಗರಾಜ, ರಾ.ಬ.ದಳ., ಮೈಸೂರು

ಬಸವ ಮಂತ್ರ

ನಿನ್ನ ನಾಮವೇ ಎನಗೆ ಶ್ರೀರಕ್ಷೆ ತಂದೆ
ನಿನ್ನ ನಾಮವೇ ಎನಗೆ ಅರುಣೋದಯ ॥

ನಿನ್ನ ನಾಮವೇ ಎನಗೆ ಮಜ್ಜನ
ನಿನ್ನ ನಾಮವೇ ಎನಗೆ ಪೂಜೆಯೋ ।
ನಿನ್ನ ನಾಮವೇ ಎನಗೆ ಪ್ರಸಾದ
ನಿನ್ನ ನಾಮವೇ ಎನಗೆ ಸರ್ವಸಿದ್ಧಿ ॥

ನಿನ್ನ ನಾಮದಿಂ ಹಸನಾಯ್ತು ಲೋಕ
ನಿನ್ನ ನಾಮದಿಂ ಕಳೆದವು ಕರ್ಮ ಬಂಧನ ॥
ನಿನ್ನ ನಾಮವೇ ಎನಗೆ ಜೀವನದಿ
ನಿನ್ನ ನಾಮಾಮೃತವೇ ಎನಗೆ ಸರ್ವ ಸಂಪದ ॥

ನಿನ್ನ ನಾಮವು ಕಣಕಣದಿ ನೆಲೆಸಲಿ
ಜೀವನವ ಪಾವನ ಗೊಳಿಸಿ ನಿತ್ಯಾನಂದ ಪ್ರಭುವಿನ
ಸೇವೆಗೆ ಅನುಗೊಳಿಸು ಗುರುವೇ, ಬಸವ ಗುರುವೇ
ನಿನ್ನ ನಾಮವೇ ಎನಗೆ ಮುಕ್ತಿಯ ಸಾಧನವೋ

ಕೆ. ಎಂ. ಬಸವ ಪ್ರಭು,
೬/೧೮, ಗಾಂಧಿನಗರ, ೨ನೇ ಅಡ್ಡರಸ್ತೆ, ಬಳ್ಳಾರಿ

ಕರಸ್ಥಲದ ಲಿಂಗದೇವ

ಲಿಂಗದೇವಾ । ಲಿಂಗದೇವಾ । ಲಿಂಗದೇವಾ ।
ಎಷ್ಟೊಂದು ಸುಂದರ ಆ ದೇವನ ಸಾಕಾರ
ಮನಕ್ಕೆ ನಿರಾಕಾರ, ಭಾವಕ್ಕೆ ಭವ್ಯಾಕಾರ
ಪಿಂಡಾಂಡದಲ್ಲಿ ಅವನ ಸ್ವಾಧಿಕಾರ
ಬ್ರಹ್ಮಾಂಡದಲ್ಲೆಲ್ಲಾ ಅವನದೇ ಅಧಿಕಾರ
ಇಂಥ ಪರಮಾತ್ಮನ ಅರಿಯದ ದುರ್ಜೀವಿಗಳ ಹಾಹಾಕಾರ
ಅರಿತರೂ ಮರೆತಂತೆ ಆಡುವ ಒಂಥರದ ದುರಾಚಾರ
ತಿಳಿದೂಕೊಳ್ಳದ ತಿಳುವಳಿಕೆಯೂ ಇಲ್ಲದ
ಮತ್ತೊಂದು ತರದವರ ಅವಿಚಾರ
ಹಮ್ಮು ಬಿಮ್ಮಳಿಯದ ಅಹಂಕಾರಿಗಳು
ಮಾಡುವ ಅಸಹನೆಯ ಅಪಪ್ರಚಾರ
ಇಂಥಲ್ಲಿ 'ಲಿಂಗದೇವನ ಗುರುತಿಸಿ ತೋರಿದ
'ಬಸವಾತ್ಮಜೆ' ಮಾತಾಜೆಯ ಮೇಲೆ ನಿಷ್ಠುರ
ಅರಿವಿನಲ್ಲಿ ಆರಕ್ಕೇರದ ಮರೆವಿನಲ್ಲಿ ಏನೂ
ಅರಿಯದ ಮಂದ ಮತಿಗಳ ಮನೋವಿಕಾರ
ಏನುಭವ್ಯ ! ಏನು ದಿವ್ಯ ! ಅಪ್ಪ ಬಸವಣ್ಣ ಅನುಗ್ರಹಿಸಿದ
ಲಿಂಗದೇವಾ ! ನಿನ್ನ ವಿಚಾರ ನಿರಂತರ ಅಮರ.

ಶರಣ. ಎಸ್. ಜಿ. ಬಸವರಾಜು
ಕಾರ್ಯಾಧ್ಯಕ್ಷರು, ರಾ.ಬ.ದಳ ಚಿಕ್ಕಮಗಳೂರು ಜಿಲ್ಲೆ, ಎಸ್. ಕೊಪ್ಪಲು,
ದೇವನೂರು ಅಂಚೆ, ಕಡೂರು ತಾಲ್ಲೂಕು

೧-೩-೨೦೦೦

ಕಲ್ಯಾಣ ಕಿರಣ ಪ್ರಭೆ

ರಚನೆ : ಶಿವಲೀಲಾ ತೋಟಗಿ
ಬೈಲಹೊಂಗಲ

ಕಲ್ಯಾಣ ಕಿರಣ ಹರಡಿದೆ
ತನ್ನ ದಿವ್ಯ ಪ್ರಭೆಯ ಜನಮನದಲಿ
ಹೊರಸೂಸುತ್ತಿದೆ ತನ್ನ ಜ್ಞಾನಪ್ರಭೆ
ಜನರ ಅಂಧಕಾರ ಅಳಿಸಲು ಸತ್ಯತೆಯ ಮುಮ್ಮಾರ್ಗ ತೋರಲು

ಬೆಳಗಿದೆ ಶರಣರ ಆಶಾಕಿರಣವಾಗಿ
ಪುಟಪುಟದಲ್ಲೂ ಮೆರೆದಿದೆ ಆಧ್ಯಾತ್ಮಿಕತೆ
ಸಾರುತಿದೆ ವಿಶ್ವಧರ್ಮ ವಿಶ್ವಶಾಂತಿಗಾಗಿ
ಶರಣರ ಸಂದೇಶ ಪುನರುಚ್ಚರಿಸುತಲಿ

ಕಾತರಿಸುತ್ತವೆ ಎಮ್ಮಯ ಹೃದಯಗಳು
ಎಂದು ಬರುವುದು ಮತ್ತೆ ಕಲ್ಯಾಣ ಕಿರಣ
ಸತ್ಯ ತತ್ವದೆಡೆಗೆ ಎಮ್ಮ ಸೆಳೆಯಲು
ಎಮ್ಮಗಳ ಬುದ್ಧಿಗೆ ಹೊಸ ಆಹಾರ ನೀಡಲು

Digitalized by e-Sahithya Documentation Forum
Sponsored by Sarayu Foundation Trust



ಸಂಪಾದಕೀಯ

ಮಾನವ ಸಂಬಂಧಗಳು

- ಮಾತಾಜಿ

ಮಾನವನು ಸಮಾಜ ಜೀವಿ (Social animal) ಎನ್ನುವುದು ಸತ್ಯ. ದನ, ಕುರಿ, ಆನೆ, ಜಿಂಕೆ,ಮುಂತಾದವು ಗುಂಪಿನಲ್ಲಿ ಬದುಕಲು ಇಷ್ಟಪಡುತ್ತವೆ. ಅವುಗಳ ಹುಟ್ಟುಗುಣಗಳಲ್ಲಿ ಸಮೂಹ ಜೀವನದ ಅಪೇಕ್ಷೆಯೂ ಒಂದು ಹುಟ್ಟುಗುಣ. ಅದೇ ರೀತಿಯಲ್ಲಿ ಮನುಷ್ಯನಲ್ಲಿಯೂ ಈ ಹುಟ್ಟುಗುಣವಿದೆ. ಸಮೂಹ ಮಧ್ಯದಲ್ಲಿ ಇರುವ, ಒಡನಾಡುವ ವ್ಯಕ್ತಿಯಲ್ಲಿ ಇರುವ ಸದ್ಗುಣಗಳು ಒಂಟಿ ಜೀವಿಯಲ್ಲಿ ಇರುವುದಿಲ್ಲ ; ಮಾತ್ರವಲ್ಲ ಪ್ರಾಮಾಣಿಕ ಸಮಾಜ ಸೇವಕನಲ್ಲಿರುವ ತಾಳ್ಮೆ, ಸದ್ಭಾವ ಏಕಾಂತ ತಪಸ್ವಿಗಳಲ್ಲಿ ಸಹ ಇರುವುದಿಲ್ಲ. ಇದರಿಂದ ನನಗೆ ಅನ್ನಿಸುತ್ತದೆ **''ಏಕಾಂತದಲ್ಲಿ ವ್ಯಕ್ತಿಯು ಪ್ರಗತಿ ಹೊಂದುತ್ತಾನೆ ; ಲೋಕದ ಮಧ್ಯೆ ಇರುವವನ ವ್ಯಕ್ತಿತ್ವವು ವಿಕಸನವಾಗುತ್ತದೆ''** ಎಂದು. ಇದನ್ನೇ ಅಕ್ಕಮಹಾದೇವಿಯ ವಾಣಿಯಲ್ಲಿ ಹೇಳಬೇಕಾದರೆ,

ಉಸಿರ ಪರಿಮಳವಿರಲು ಕುಸುಮದ ಹಂಗೇಕಯ್ಯ ?
ಶಮೆದಮೆ ಶಾಂತಿ ಸೈರಣೆ ಇರಲು ಸಮಾಧಿಯ ನಿಲುವೇಕೆ ?
ಲೋಕವೇ ತಾನಾದ ಬಳಿಕ ಏಕಾಂತದ ಹಂಗೇಕೆ ?

ಕೆಲವೊಂದು ಮಾನಸಿಕ ಸ್ಥಿಮಿತತೆ, ಸದ್ಗುಣಗಳನ್ನು ಅಳವಡಿಸಿಕೊಂಡಾಗ ಏಕಾಂತದಷ್ಟೆ ಲೋಕಾಂತವೂ ಆಧ್ಯಾತ್ಮ ಜೀವಿಗಳಿಗೆ ಸಹ್ಯವಾಗುತ್ತದೆ.

ವ್ಯಕ್ತಿಯೊಳಗಣ ಹುಟ್ಟುಗುಣ (Instinct) ಕೂಡಿ ಬದುಕುವುದರಲ್ಲೇ ಸುಖವಿದೆ, ನೆಮ್ಮದಿ ಇದೆ ಎಂದು ವ್ಯಕ್ತಿಯನ್ನು ಸಮೂಹ ಜೀವನಕ್ಕೆ ಸೆಳೆದರೂ, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಸ್ವಾರ್ಥ ಕೀರ್ತಿಲಾಲಸೆ ಮುಂತಾದವು ವ್ಯಕ್ತಿಯನ್ನು ಆದರ್ಶಗಳಿಂದ ದೂರಕ್ಕೆ ಎಳೆಯುತ್ತವೆ. ತಾನೇ ಬೇರೆಯಾಗಿ ಬದುಕಬೇಕು. ಇತರರ ಮೇಲೆ ತನ್ನ ಪ್ರಭುತ್ವ ಸಾಧಿಸಬೇಕು ಎಂದು ಪ್ರಚೋದಿಸುತ್ತವೆ. ಎಳೆಯ ಮಕ್ಕಳಿಂದ ಹಿಡಿದು ಮುಪ್ಪಿನ ಮುದುಕರವರೆಗೆ ಈ ಬಗೆಯ ಚಟುವಟಿಕೆಗಳನ್ನು ಗಮನಿಸಬಹುದು

ಅವಿಭಕ್ತ ಕುಟುಂಬ

ಭಾರತೀಯ ಸಂಸ್ಕೃತಿಯಲ್ಲಿ ಅವಿಭಕ್ತ ಕುಟುಂಬದ ಒಂದು ಪರಿಕಲ್ಪನೆ ಇತ್ತು. ಮುತ್ತಾತಂದಿರಿಂದ ಹಿಡಿದು ಮರಿ, ಗಿರಿ ಮಕ್ಕಳವರೆಗೆ ನೂರಾರು ಜನ ಒಂದೇ ಸೂರಿನಡಿ ಬದುಕುತ್ತಿದ್ದರು. ಇದು ಬಹಳ ತ್ವರಿತಗತಿಯಲ್ಲಿ ಪತನ ಹೊಂದಿ, ಪಾಶ್ಚಿಮಾತ್ಯ ಸಂಸ್ಕೃತಿಯ

ಪ್ರಭಾವದಿಂದ ಗಂಡ-ಹೆಂಡತಿ-ಅವರ ಮಕ್ಕಳು ಇವರಿಗೆ ಸೀಮಿತವಾದ ಕುಟುಂಬಗಳ ಕಲ್ಪನೆಯನ್ನು ಇಂದು ವಿಫಲವಾಗಿ ಕಾಣಬಹುದು. ಈ ಸ್ವ - ಕೇಂದ್ರೀಕೃತ (Self centred) ಪ್ರೇಮ ಎಷ್ಟರ ಮಟ್ಟಿಗೆ ಆಗಿದೆ ಎಂದರೆ ವಯಸ್ಸಾದ ತಾಯಿ ತಂದೆಗಳೂ ಬೇಡ ಎಂಬಲ್ಲಿಗೆ ಬಂದು ನಿಂತಿದೆ. ಮಕ್ಕಳು ಮದುವೆಯಾಗಿ ಹೆಂಡತಿಯನ್ನು ಮನೆಗೆ ಕರೆತರುತ್ತಲೇ, ಆಗಲೇ ಸ್ವತಂತ್ರರಾಗುವ ಹವಣಿಕೆಯಲ್ಲಿರುತ್ತಾರೆ. ಧರ್ಮ-ಅಧ್ಯಾತ್ಮ-ನೈತಿಕ ಮೌಲ್ಯಗಳಿಂದ ತುಂಬಿದ ಕುಟುಂಬದಲ್ಲಿ ಮಾತ್ರ ಇನ್ನೂ ತಂದೆ-ತಾಯಿಯರೊಡನೆ ಮಗಸೊಸೆಯರು ಕೂಡಿರುವುದನ್ನು ಕಾಣುತ್ತೇವೆ. ಈ ಬೇರ್ಪಡೆ ಮತ್ತು ಸ್ವತಂತ್ರ ಜೀವನದ ಲಾಲಸೆಗೆ ಹಲವಾರು ಕಾರಣಗಳಿರುತ್ತವೆ.

1. **ಸ್ವಚ್ಛಂದ ಪ್ರವೃತ್ತಿ** : ಮನೆಯಲ್ಲಿ ಹಿರಿಯರಿದ್ದರೆ ತಪ್ಪು ಮಾಡಿದಾಗ ತಿದ್ದುತ್ತಾರೆ, ಬುದ್ಧಿ ಹೇಳುತ್ತಾರೆ. ಅದು ಬೇಡ, ಮನಸ್ಸಿಗೆ ಬಂದಂತೆ ನಡೆಯೋಣ ಎಂಬ ಆಕಾಂಕ್ಷೆ.
2. **ಸ್ವಾರ್ಥ** : ತಾವೇ ಪ್ರತ್ಯೇಕವಾಗಿ ಹಣವನ್ನು ಸಂಗ್ರಹಿಸಿಕೊಳ್ಳಬೇಕು. ತಮ್ಮ ಮಕ್ಕಳಿಗೇ ತಮ್ಮ ಗಳಿಕೆ ಮೀಸಲಾಗಬೇಕು ಎಂಬ ಸ್ವಾರ್ಥ.
3. **ಸೇವಾಭಾವದ ಕೊರತೆ** : ವಯಸ್ಸಾದವರಿದ್ದರೆ ಅವರ ಸೇವೆ ಮಾಡಬೇಕು. ಆ ಸೇವೆಯ ಹೊರೆ ಏಕೆ ? ಎಂಬ ಕ್ಷುಲ್ಲಕತನ.
4. **ಹಿರಿಯರ ಕ್ಷುಲ್ಲಕತನ** : ಕೆಲವೊಮ್ಮೆ ವಯಸ್ಸಾದವರಲ್ಲೇ ಕೆಟ್ಟಗುಣವು ಇರುತ್ತದೆ. ಹೆಂಡತಿ ಪಡುವ ಸಂಕಷ್ಟ ಕಂಡು ಗಂಡನು ಸೊಸೆಯರಿಗೆ ವಿಪರೀತ ಕಿರುಕುಳ ಕೊಡುತ್ತಾರೆ. ಕೆಲವೊಮ್ಮೆ ಸಣ್ಣ ಮರಮರ ಮರುಗಿದರೂ ಆರ್ಥಿಕ ಸಮಸ್ಯೆಗಳಿಂದಾಗಿ ಸ್ವತಂತ್ರನಾಗಲಾರ. ಆದರೆ ಅವರು ವಯಸ್ಸಿನ ಮಗ ಸೊಸೆಗೆ ಇರುವ ತಿಳುವಳಿಕೆ ಸಹ ಹಿರಿಯರಿಗೆ ಇರುವುದಿಲ್ಲ; ಕಿರುಕುಳ ಕೊಡುವುದನ್ನು ಬಿಡುವುದಿಲ್ಲ.

ಮನುಷ್ಯ ಜೀವನ ಅತ್ಯಲ್ಪ ಸಮಯದ್ದು; ಯಾವಾಗ ಏನು ಆಗುತ್ತದೋ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಇದು ಗೊತ್ತಿದ್ದೂ ಸಹ ಜನರು ಕೆಟ್ಟತನವನ್ನು ಕಡಿಮೆ ಮಾಡಿಕೊಳ್ಳುವುದಿಲ್ಲ. ದೇವರು, ಮನುಷ್ಯನನ್ನು ಇಷ್ಟು ಕೆಟ್ಟಗುಣಗಳಿಂದ ಏಕೆ ರಚಿಸಿದ್ದಾನೆ ಎಂದು ಅನ್ನಿಸುವುದುಂಟು. ಮಾನವ ಸಂಬಂಧಗಳು ಬಹು ನಾಜೂಕು. ಯಾವ ಕ್ಷಣದಲ್ಲಿ ಹರಿಯುತ್ತವೆಯೋ ಹೇಳಲಾಗುವುದಿಲ್ಲ. ಇಷ್ಟು ಮಾತ್ರವಲ್ಲ ಕೂಡಿ ಬದುಕಲು ಪ್ರಯತ್ನಿಸಬೇಕು ಎಂಬ ಹಂಬಲಕ್ಕಿಂತಲೂ ಸಂಬಂಧ ಹರಿದುಕೊಂಡು ಸ್ವತಂತ್ರರಾಗಬೇಕು ಎಂಬ ಪ್ರವೃತ್ತಿಯೇ ಮನುಷ್ಯನಲ್ಲಿ ಹೆಚ್ಚು ಶಕ್ತಿಶಾಲಿ ಎನ್ನಿಸುತ್ತದೆ. ಸಂಬಂಧವನ್ನು ಹರಿದುಕೊಳ್ಳಲು ಮನುಷ್ಯನು ವಿವಿಧ ನೆಪಗಳನ್ನು ಹುಡುಕುತ್ತಿರುತ್ತಾನೆ ಎಂಬುದೇ ಹೆಚ್ಚಿನ ಸತ್ಯ ಎನ್ನಿಸುತ್ತದೆ.

ಕೌಟುಂಬಿಕ ಜೀವನದಲ್ಲಿಯಂತೆ ಸಮುದಾಯ ಜೀವನದಲ್ಲಿ ಸಹ ಇಂಥ ಶಿಥಿಲತೆಯನ್ನು ಕಾಣಬಹುದು. ಸ್ವಾರ್ಥ, ಅಹಂಕಾರ, ಮಾತ್ಸರ್ಯ ಮುಂತಾದವು ಸಂಘಟನೆಗಳನ್ನು ಒಡೆಯುವುದನ್ನು ಕಾಣುತ್ತೇವೆ. ನಾವು ಒಂದು ಹೊಸ ಪ್ರಯೋಗದಲ್ಲಿ ತೊಡಗಿದ್ದೇವೆ. ಇದನ್ನು ಮುಖ್ಯವಾಗಿ ಎರಡಾಗಿ ವರ್ಗೀಕರಿಸಬಹುದು.

1. ಸಾಮೂಹಿಕ ಸಂಘಟನೆ 2. ಸಾಧಕರ ತರಬೇತಿ

ಹಿಂದು ಸಮಾಜದಲ್ಲಿ ಜಾತಿ ಎಂಬ ಗುಂಪುಗಳ ವರ್ಗೀಕರಣವಿರುವುದರಿಂದ ಆಯಾ ಜಾತಿಯವರು ಒಂದುಗೂಡಲು ಒಂದು ಸಂಘವನ್ನೋ, ಮಠವನ್ನೋ, ಗುಡಿಯನ್ನೋ

Digitalized by e-Sahithya Documentation Forum
Sponsored by Sarayu Foundation Trust

ಕಟ್ಟಿಕೊಳ್ಳುತ್ತಾರೆ. ಆ ಒಗ್ಗೂಡುವಿಕೆ ತತ್ತ್ವದ ತಳಹದಿಯ ಮೇಲಿರದೆ ಜಾತಿಯ ತಳಹದಿಯ ಮೇಲಿರುತ್ತದೆ ಮತ್ತು ಆ ಸಂಘಟನೆಗೆ ಸೇರ್ಪಡೆಯಾಗುವ ವ್ಯಕ್ತಿ ಆ ಜಾತಿಯಲ್ಲಿ ಹುಟ್ಟಿದ್ದಕ್ಕಾಗಿ, ನಿಗದಿತ ಶುಲ್ಕ ಕೊಟ್ಟು ಸದಸ್ಯತ್ವ ಪಡೆಯುತ್ತಾನೆ. ಇವನ ಮನ-ಬುದ್ಧಿ-ಹೃದಯಗಳನ್ನು ಸಂಸ್ಕರಿಸುವ (Process) ಯಾವುದೇ ಕಾರ್ಯಕ್ರಮ ಅಲ್ಲಿ ಸಿಗುವ ಸಾಧ್ಯತೆ ಇರದು. ಹೀಗಾಗಿ ಅನೇಕ ಬಾರಿ ಅಲ್ಲಿ ರೋಷ-ದ್ವೇಷ, ಕೀರ್ತಿಲಾಲಸೆ, ಸ್ವಾರ್ಥ ಇತ್ಯಾದಿ ತುಂಬಿ ತುಳುಕುತ್ತಿರುತ್ತವೆ.

ಅಂಥ ಸಂಘಟನೆಗೆ ಹೊರತಾದ ನೀತಿ ಆಧ್ಯಾತ್ಮಿಕ ಮೌಲ್ಯಗಳ ಮೇಲೆ ಆಧಾರಿತವಾದ ಒಂದು ಸಂಘಟನೆಯನ್ನು ನಾವು ಕಟ್ಟಬೇಕು ಎಂಬ ತತ್ತ್ವದ ಬೆಂಬಲವಿಡಿದು ಕಾರ್ಯೋನ್ಮುಖರಾದೆವು. ಸಂಪ್ರದಾಯ ಬದ್ಧ ಸಮಾಜದಲ್ಲಿ ಇದು ಕಠಿಣತಮ ಸಾಹಸ. ಏಕೆಂದರೆ ಒಟ್ಟಾರೆ ಹಿಂದೂ ಸಮಾಜದಲ್ಲಿ, ಲಿಂಗಾಯತ ಸಮಾಜದಲ್ಲಿ, ಬಹು ಪಾಲು ಜನಕ್ಕೆ ಜಾತಿ ಸಂಘಟನೆಯ ಸಂಸ್ಕಾರವೇ ಬಲವಾಗಿರುವುದರಿಂದ ನೈತಿಕ - ತಾತ್ವಿಕ ಹಿನ್ನೆಲೆಯ ಸಂಸ್ಕಾರವುಳ್ಳ ಸಂಘಟನೆಯತ್ತ ಜನರನ್ನು ಆಕರ್ಷಿಸುವುದು ಕಷ್ಟ ಸಾಧ್ಯ. ಆದರೂ ನಾವು ವಿಚಲಿತರಾಗದೆ ಹತಾಶರಾಗದೆ, ಧ್ಯೇಯದೆಡೆಗೆ ಸಾಗುತ್ತಿದ್ದೇವೆ. ಎಲ್ಲ ಜಾತಿ ಮತ ಪಂಥಗಳಲ್ಲಿರುವ ಮುಮುಕ್ಷುಗಳು, ಸತ್ಯಾನ್ವೇಷಿಗಳನ್ನು ಮನವೊಲಿಸುವಲ್ಲಿ ಮುನ್ನಡೆದಿದ್ದೇವೆ. ಇದು ಜಾತಿ ಸಂಘಟನೆಯಷ್ಟು ತೀವ್ರ ವೇಗದಲ್ಲಿ ಬೆಳೆಯದಿದ್ದರೂ, ಅದು ಅಪಾಯಕಾರಿ ಮಾರ್ಗವೆಂದು ಅರಿತು, ತಾತ್ತ್ವಿಕ ಸಂಘಟನೆಯಲ್ಲಿ ಆಸಕ್ತರಾಗಿದ್ದೇವೆ. ಏಕೆಂದರೆ ಇದು ನಿಧಾನಗತಿಯದಾದರೂ ವಿಧಾಯಕವಾದ, ಸಾತ್ವಿಕವಾದ, ಸತ್ಯನಿಷ್ಠವಾದ ಮಾರ್ಗ. ಪಾರ್ಥೇನಿಯಂನಷ್ಟು ಶೀಘ್ರವಾಗಿ ತೆಂಗಿನಮರ ಬೆಳೆಯದಿದ್ದರೂ, ಪಾರ್ಥೇನೀಯಂ ಅಪಾಯಕಾರಿ ಕಸ ಎನ್ನಿಸಿಕೊಳ್ಳುತ್ತದೆ. ತೆಂಗಿನ ಮರವು ಕಲ್ಪವೃಕ್ಷವೆನ್ನಿಸಿಕೊಳ್ಳುತ್ತದೆ. ಅದೇ ರೀತಿ ಜಾತಿ-ಸಂಘಟನೆಗಳು ಕಸವಾದರೆ ನೈತಿಕ - ತಾತ್ತ್ವಿಕ ಸಂಘಟನೆಗಳು ಸಮಾಜಕ್ಕೆ ಅಮೃತವಾಗುತ್ತದೆ.

ಇದು ಸಮಾಜ ಸಂಘಟನೆ ಕುರಿತಾದುದು : ಇನ್ನು ಸಾಧಕರ ತರಬೇತಿ ಕುರಿತಾದುದು ನಮ್ಮ ಸಂಸ್ಥೆಯ ಮತ್ತೊಂದು ಧ್ಯೇಯ. ಪೂಜ್ಯರಾದ ಲಿಂಗೈಕ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಜೀವನದ ಉದಾತ್ತ ಧ್ಯೇಯವೇ ಇದಾಗಿತ್ತು. ವೈದಿಕ ಪರಂಪರೆಯನ್ನು ಅಪ್ಪ ಬಸವಣ್ಣನವರು ತ್ಯಜಿಸಿ ಹೊರಬಂದುದು ಅಸಮಾನತೆಯ ಸಮಾಜ ವ್ಯವಸ್ಥೆಯನ್ನು ಪ್ರತಿಭಟಿಸಿಯೆ. ಅದಕ್ಕೆ ಪ್ರತಿದ್ವಂದ್ವಿಯಾಗಿ ಸಮಾನತೆಯ ತಳಹದಿಯ ಮೇಲೆ ಶರಣ ಸಮಾಜವನ್ನು ಕಟ್ಟಿದರು. ಆದರೆ ಅವರ ನಂತರ ಆದುದೇನು ? ಪುನಃ ಹಳೆಯ ವ್ಯವಸ್ಥೆಯೇ ಒಳ ಸೇರಿತು. 20ನೇ ಶತಮಾನದಲ್ಲಿ ಅದರಲ್ಲೂ ಶಿವಯೋಗ ಮಂದಿರವು ಸ್ಥಾಪನೆಯಾದ ಮೇಲೆ ಪವಿತ್ರವಾದ ಜಂಗಮ ತತ್ತ್ವವೂ ವಿಕೃತಗೊಂಡು ಜಂಗಮತ್ವವು ಜಾತಿಗೆ ಸೀಮಿತವಾದಾಗ ವಿಲಕ್ಷಣ ಪರಿಸ್ಥಿತಿ ನಿರ್ಮಾಣವಾಯಿತು. ಕ್ರಾಂತಿಕಾರಿಯಾದ ಪ್ರಗತಿಪರ ಚಿಂತನೆಯ ಲಿಂಗಾಯತ ಧರ್ಮವು ವಿಕೃತಗೊಂಡು ಈ ಸಮಾಜ ಮಂದಿರದ ಒಳಕ್ಕೆ ಇನ್ನಿತರರನ್ನು ಆಹ್ವಾನಿಸುವುದತ್ತಲಿರಲಿ, ಸಂಪ್ರದಾಯ ಜಡ ಮಠಾಧೀಶರು ಮತ್ತು ಅವರ ಹಿಂಬಾಲಕರಾದ ಮೂಢ ಭಕ್ತರ ಉಪಟಳ ಸಹಿಸಲಾರದೆ ಲಿಂಗಾಯತ ಸಮಾಜದಲ್ಲೇ ಹುಟ್ಟಿದ ಅನೇಕ ಸಾಧಕ ಜೀವಿಗಳು ಇಷ್ಟಲಿಂಗಧಾರಣೆ ತೊರೆದು ಆರೂಢ, ಅವಧೂತ ಮಾರ್ಗಗಳನ್ನು ಅವಲಂಬಿಸತೊಡಗಿದರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬಸವ ಗುರುವಿನ ಕರುಣೆಯ ಕಂದ

ಪೂಜ್ಯ ಅಪ್ಪಾಜಿ ಈ ಮಾರ್ಗಕ್ಕೆ ಬಂದು ಏಕಾಂಗ ವೀರರಾಗಿ, ಧೀರರಾಗಿ ಬಸವ ತತ್ತ್ವದ ನಿಜರೂಪವನ್ನು ತೋರಿಕೊಡಲು ಸನ್ನದ್ಧರಾದುದು ಅವಿಸ್ಮರಣೀಯ.

ಧರ್ಮಪಿತ ಬಸವಣ್ಣನವರನ್ನು ಕಡೆಗಣಿಸಿ, ವಚನ ವಾಙ್ಮಯವನ್ನು ಬದಿಗೆ ತಳ್ಳಿ, ಕಾಶಿಯ ಪಾಂಡಿತ್ಯದ ಕೊಳೆಯನ್ನು ಹೊತ್ತುತಂದು, ಕೃತಕವಾಗಿ ವೀರಶೈವ ಪುರಾತನತೆಯ ವಾದವನ್ನು ಒಳತೂರಿಸಿ ಸಮಾಜವನ್ನು ಧರ್ಮವನ್ನು ಅಂದಗೆಡಿಸಿದ ಪಂಚಾಚಾರ್ಯರದು ಒಂದು ಗುಂಪು. ಪೌರಾಣಿಕ ಕಲ್ಪನೆಯ ಪಂಚಾಚಾರ್ಯರನ್ನು ಒಪ್ಪದೆ ಇದ್ದರೂ, ಜಾತಿ ಜಂಗಮತ್ವದಲ್ಲಿ ಅಚಲ ವಿಶ್ವಾಸ ಹೊಂದಿ, ಶ್ರೀಗುರುಬಸವಲಿಂಗಾಯ ನಮಃ ಮಂತ್ರವನ್ನು ತಗುಲಿ ಹಾಕಿಕೊಂಡರೂ ಬಸವ ತತ್ತ್ವದಲ್ಲಿ ಪೂರ್ಣಶ್ರದ್ಧೆಇಲ್ಲದ ಶೈವ ಮಾರ್ಗಿಗಳಾದ, ಬಹುದೇವತೋಪಾಸನೆಯ ಜಾಲಕ್ಕೆ ಸಿಕ್ಕ ವಿರಕ್ತರದು ಇನ್ನೊಂದು ಗುಂಪು. ಅತ್ತ ಅದೂ ಅಲ್ಲ, ಇತ್ತ ಇದೂ ಅಲ್ಲ ಎಂಬಂತೆ ವಚನ ಸಾಹಿತ್ಯದ ಬಂಡವಾಳವನ್ನು ಮಾತ್ರ ಜನ ಮೆಚ್ಚುಗೆಗಾಗಿ ಬಳಸಿಕೊಳ್ಳುತ್ತ ಶ್ರೀಗುರುಬಸವಲಿಂಗಾಯ ನಮಃ ಮಂತ್ರ ಸಹ ಬರೆದುಕೊಳ್ಳದ ಮತ್ತೊಂದು ಗುಂಪು; ಈ ಮೂರು ವರ್ಗಗಳನ್ನು ಓದುಗರೇ ಅರಿತುಕೊಂಡು ವಿವಿಧ ಮಠಗಳನ್ನು ವರ್ಗೀಕರಿಸಿಕೊಳ್ಳಲಿ. ನಾನು ಯಾರ ಹೆಸರನ್ನೂ ಬರೆಯಲು ಇಚ್ಛಿಸುವುದಿಲ್ಲ. ಆದರೆ ಈ ಎಲ್ಲ ವರ್ಗಗಳವರಲ್ಲೂ ಒಂದು ಸಂಗತಿ ಸಾಮಾನ್ಯವಾಗಿದೆ. ಅದೆಂದರೆ ಜಾತಿ ಜಂಗಮತ್ವದ ಆಧಾರದ ಮೇಲೆ ಆಯ್ಕೆ ಮಾಡಿ, ಅವರಿಗೆ ತರಬೇತಿ (?) ನೀಡಿ ಮಠಾಧೀಶರನ್ನು ಮಾಡುವುದು ಒಂದು ಬಗೆಯಾದರೆ, ಲೌಕಿಕರು ತಮ್ಮ ಆಸ್ತಿಪಾಸ್ತಿಗೆ ದತ್ತು ತೆಗೆದುಕೊಳ್ಳುವಂತೆ ಮಠಾಧೀಶರು ತಮ್ಮ ತಮ್ಮ ಬಂಧು ಬಳಗದಲ್ಲೇ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡುವದು ಇನ್ನೊಂದು ಬಗೆ. ಇದರಿಂದಾಗಿ ಸ್ವಯಂ ಪ್ರೇರಣೆಯಿಂದ ಅಧ್ಯಾತ್ಮ ಜೀವನಕ್ಕೆ ಬಂದ ಮುಮುಕ್ಷುಗಳಿಗಾಗಲೀ, ಸಾಧಕರಿಗಾಗಲೀ ಮಠದ ಅಧಿಕಾರವಿರಲಿ ಸಾಧಕರಾಗಲೂ ಅವಕಾಶವಿಲ್ಲ. ಇನ್ನು ಹೆಣ್ಣು ಮಕ್ಕಳ ಪಾಡಂತೂ ಹೇಳಲು ಅಸಾಧ್ಯ. ಧರ್ಮಪಿತ ಬಸವಣ್ಣನವರ ವಚನ ಸಂವಿಧಾನದಲ್ಲಿ ಪೂರ್ಣ ಸಮಾನತೆ ಇರಬಹುದು. ಜಗನ್ಮಾತಾ ಅಕ್ಕಮಹಾದೇವಿಯನ್ನು ಆಚಾರ್ಯ ಪುರುಷಳ ಸ್ಥಾನದಲ್ಲಿ ಕಂಡಿರಬಹುದು, ಆದರೆ ವಾಸ್ತವಿಕತೆಯಲ್ಲಿ ಯಾವ ಅವಕಾಶವೂ ಇಲ್ಲ. ಯಾರಾದರೊಬ್ಬರು ಮೊದಲ ಹಾಗೂ ದಿಟ್ಟ ಹೆಜ್ಜೆ ಇಡಬೇಕಾಗಿತ್ತು. ಅಪವಾದ, ಸಂಕಷ್ಟಗಳನ್ನು ಎದುರಿಸಿಯೂ ಪೂಜ್ಯ ಅಪ್ಪಾಜಿ ಅಂಥ ದಿಟ್ಟ ಹೆಜ್ಜೆ ಇಟ್ಟರು. ಆ ಧೈರ್ಯವನ್ನು ಅವರು ಮಾಡದಿದ್ದರೆ ನಾವು ಎಲ್ಲಿ ಇರುತ್ತಿದ್ದೆವು ? ಸಂಪ್ರದಾಯವಾದಿ ಮಠಾಧೀಶರು, ಅವರ ಬೆಂಬಲಿಗರಾದ ಮೂಢಭಕ್ತರು, ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯ ಮಧ್ಯೆ ಬಹುಶಃ ಹೆಮ್ಮರವಾಗಿ ಬೆಳೆಯುವುದಿರಲಿ, ಸಸಿಯಾಗಿ ಬೆಳೆಯಲೂ ಸಾಧ್ಯವಾಗುತ್ತಿರಲಿಲ್ಲವೇನೊ ! ಪೂಜ್ಯ ಅಪ್ಪಾಜಿ ಕೈಗೊಂಡ ಸಾಹಸದ ಫಲವಾಗಿ ಅವರು ಅವರ ಪ್ರತಿಭೆಗೆ ತಕ್ಕಂತಹ ಯಾವ ಮನ್ನಣೆ ಪಡೆಯಬೇಕಿತ್ತೋ ಅದನ್ನು ಪಡೆಯಲಿಲ್ಲ. ಆದರೆ ಚಿಂತೆಯಿಲ್ಲ ; ಅವರ ಸತ್ಸಂಕಲ್ಪ, ಸಾಧನೆ ಶಾಶ್ವತ ; ಮುಂದಿನ ಜಗತ್ತು ಗೌರವಿಸುವಂತಹುದು. ರಾಷ್ಟ್ರೀಯ ಬಸವ ದಳ ಎಂಬ ತತ್ತ್ವವಾದಿ ಸಂಘಟನೆಯನ್ನು ಹುಟ್ಟುಹಾಕಿ, ಕಟ್ಟಿ ಬೆಳೆಸುವುದು ಒಂದು ಪೂಜ್ಯರ ಸತ್ ಸಂಕಲ್ಪವಾದರೆ ಜಾತಿಮತ ಪಂಥ ಲಿಂಗ ಭೇದವಿಲ್ಲದೆ ಮುಮುಕ್ಷುಗಳಿಗೆ ಆಶ್ರಯ, ತರಬೇತಿ ನೀಡುವುದು ಇನ್ನೊಂದು ಸತ್ ಸಂಕಲ್ಪ. ಇವೆರಡನ್ನೂ ಪೂಜ್ಯ ಅಪ್ಪಾಜಿ ತಾವಿದ್ದಾಗಲೂ ಸಾಧಿಸಿದರು ; ಅವರ ನಂತರವೂ ನಾವು ತಪ್ಪದೆ ಮುಂದುವರಿಸಿಕೊಂಡು ಬರುತ್ತಿದ್ದೇವೆ. ಈವರೆಗಂತೂ ತಾತ್ತ್ವಿಕ ಶಿಥಿಲತೆಗಾಗಲೀ, ಸಂಕುಚಿತ

Digitalized by e-Sahithya Documentation Forum
Sponsored by Sarayu Foundation Trust

ಜಾತೀಯತೆಗಾಗಲೀ ಅವಕಾಶವನ್ನು ನಾವು ನೀಡಿಲ್ಲ ಎಂಬುದು ಸಮಾಧಾನ ತರುವ ಸಂಗತಿ. ಬೇರೆ ಬೇರೆ ಜಾತಿ ಮತ ಪಂಥಗಳಲ್ಲಿ ಹುಟ್ಟಿದ್ದವರೂ ಬಸವ ಧರ್ಮಕ್ಕೆ ಸೇರ್ಪಡೆಯಾಗಿ ನಿಷ್ಠೆಯಿಂದ ಬಸವ ತತ್ತ್ವ ಪ್ರಚಾರ ಕಾರ್ಯದಲ್ಲಿ, ಸಮಾಜ ನಿರ್ಮಾಣದಲ್ಲಿ ನಿರತರಾಗಿದ್ದಾರೆ ಎಂಬುದು ನಮಗೆ ಹೆಮ್ಮೆ ತರುವ ವಿಷಯ.

ಅತೃಪ್ತಿ

ಮಾಡಿರುವ ಕಾರ್ಯದ ಬಗ್ಗೆ ಸಮಾಧಾನವಿದೆಯಾದರೂ ಸಂತೃಪ್ತಿ ಇಲ್ಲ. ಒಂದು ಬಗೆಯ ಅತೃಪ್ತಿ ಇದೆ. ಏಕೆಂದರೆ ಸಮಾಜದ ವಿಸ್ತಾರದ ದೃಷ್ಟಿಯಿಂದ ನೋಡಿದಾಗ ಕಾರ್ಯದ ವೇಗ ಮತ್ತು ಗಾತ್ರ ಸಾಲದು.

ಮೊದಲು ಸಮಾಜ ಸಂಘಟನೆಯ ದೃಷ್ಟಿಯಿಂದ ನೋಡೋಣ. ತತ್ತ್ವನಿಷ್ಠರು, ನೀತಿವಾದಿಗಳು, ಧ್ಯೇಯವಾದಿಗಳು ಆದ ಜನ ಸಿಗುವುದೇ ದುರ್ಲಭ. ಏನೋ ಅಷ್ಟಿಷ್ಟು ತಯಾರಾದರು ಎನ್ನುವಾಗಲೇ ಸ್ವಾರ್ಥವೋ, ಆಮಿಷವೋ, ಅಹಂಕಾರವೋ, ಕಾಮವೋ, ಮೋಹವೋ ಅವರನ್ನು ನುಂಗಿ ನೀರು ಕುಡಿಯುತ್ತದೆ; ಸಂಘಟನೆಯನ್ನು ಒಡೆಯುತ್ತದೆ. ಅನೇಕ ಬಾರಿ ತಮ್ಮ ದೌರ್ಬಲ್ಯಗಳನ್ನು ಮುಚ್ಚಿಕೊಂಡು ಅನ್ಯರ ಮೇಲೆ ಪ್ರಭಾವ ಬೀರಲು ಅಥವಾ ಅನ್ಯರನ್ನು ತಮ್ಮ ಹಿಡಿತದಲ್ಲಿ ತೆಗೆದುಕೊಳ್ಳಲು ಮಿಥ್ಯ, ಕುಹಕ, ಕುಟಿಲ ತಂತ್ರಗಳನ್ನು ಕೆಲವರು ಅನುಸರಿಸುವುದುಂಟು.

ಇದೇ ರೀತಿ ಸಾಧಕ ಜೀವಿಗಳಲ್ಲೂ ಶಿಥಿಲತೆ ಎರಗುವುದುಂಟು. ಸಾಮೂಹಿಕವಾಗಿ ಕೆಲಸ ಮಾಡುತ್ತ ಎಲ್ಲರೂ ಒಟ್ಟಾರೆ ಧ್ಯೇಯದೆಡೆಗೆ ಸಾಗಿದರೆ ಆಗುವ ಪರಿಣಾಮ ಅಪೂರ್ವ. "ಇನ್ನೇನು ಈ ಮಟ್ಟಕ್ಕೆ ಇವರು ಏರಿದರು, ಈ ಗುರಿಗೆ ಹತ್ತಿರ ಬಂದರು." ಎನ್ನುವಾಗಲೇ ಅವರು ಪತನಗೊಂಡಾಗ ಆಗುವ ನಿರಾಶೆ ಅಷ್ಟಿಷ್ಟಲ್ಲ. "ಮೇಘದ ಜಲವೆಲ್ಲ ಮುತ್ತಾದಡೆ ಸಮುದ್ರಕ್ಕೆ ಉದಕವೆಲ್ಲಿಯದೊ ?" ಎಂದು ಸಮಾಧಾನ ಪಟ್ಟುಕೊಳ್ಳುವುದು ಅನಿವಾರ್ಯವಾದರೂ, ನಿರಾಶೆಯೂ ಅಷ್ಟೇ ಆಳವಾಗಿರುತ್ತದೆ. ಧ್ಯೇಯವಾದಿಗಳಾಗದೆ ಆಸ್ತಿಪಾಸ್ತಿ ಮಠದ ಆಸೆಗಾಗಿ ಮಠದ ಗದ್ದುಗೆಗಾಗಿ ಸ್ಪರ್ಧಿಸುವವರ ವಿಷಯ ಬದಿಗಿಡೋಣ. ಧ್ಯೇಯವಾದಿಗಳಾಗಿ ಬಂದವರೂ ತಮ್ಮ ಆದರ್ಶದ ಕಡೆಗೆ ಸ್ಥಿರವಾದ ಹೆಜ್ಜೆಗಳನ್ನು ಇಡದೆ ಸೋಲುವುದನ್ನು ಕಂಡಾಗ ಗುರುವಿಗೆ ಆಗುವ ನೋವು-ನಿರಾಶೆ ಅಷ್ಟಿಷ್ಟಲ್ಲ. ಒಂದು ಅಮೃತಶಿಲೆಯ ಕಲ್ಲನ್ನು ತೆಗೆದುಕೊಂಡು ಎಲ್ಲ ಕಟೆದು, ಕಡೆಯಲ್ಲಿ ಪ್ರತಿಷ್ಠಾಪಿಸುವಾಗ ಅದು ಮುಕ್ಕಾದರೆ ಶಿಲ್ಪಿಗೆ ಎಂಥಾ ನೋವಾದೀತು ! ಅದಕ್ಕಿಂತಲೂ ಹೆಚ್ಚಿನ ನೋವು ಗುರುವಿಗೆ ಆಗುವುದು. ಏಕೆಂದರೆ ಭೂಗರ್ಭದಲ್ಲಿ ಮತ್ತೆ ಕಲ್ಲು ಸಿಗುತ್ತವೆ, ಕಟೆಯಬಹುದು ಆದರೆ ಜೀವಂತ ಶಿಲ್ಪಗಳಾದ ಆದರ್ಶವಾದಿಗಳು ಸಿಗುವುದು ಮುತ್ತುರತ್ನವಜ್ರಗಳನ್ನು ಹೊಂದುವುದಕ್ಕಿಂತಲೂ ಕಷ್ಟಕರ. ಅನೇಕ ಸಾಧಕ ಜೀವಿಗಳು, ಧ್ಯೇಯವಾದಿಗಳು, ಸ್ತ್ರೀಯರಿರಲಿ, ಪುರುಷರಿರಲಿ ಪತನಗೊಳ್ಳುವುದು ಕಾಮದಿಂದ, ಮೋಹದಿಂದ, ಆಸೆ, ಸ್ವಾರ್ಥದಿಂದ. ಕ(ಕನಕ) ಕಾ (ಕಾಮಿನಿ)ಗಳಿಂದ ತಪ್ಪಿಸಿಕೊಂಡವರು ಕೀ(ಕೀರ್ತಿಲಾಲಸೆ) ಗೆ ಬಲಿಯಾಗುವುದುಂಟು.

ಸಾಧನಾಪಥದಲ್ಲಿ ನಡೆಯುವಾಗ ಅನೇಕ ಬಗೆಯ ಆಸೆ-ಆಮಿಷ, ದೌರ್ಬಲ್ಯ ಅಂತರಂಗದಲ್ಲಿ ಕಾಣಿಸಿಕೊಂಡರೂ ಅವನ್ನು ಮೆಟ್ಟಿ ಮುನ್ನಡೆಯಬೇಕೆಂಬ ಸಂಕಲ್ಪವು ದೃಢವಾಗಿರಬೇಕು. ಸ್ವಂತಕ್ಕೆ ಆಸ್ತಿಮಾಡಿಕೊಳ್ಳಬೇಕು, ಮಠ ಕಟ್ಟಬೇಕು, ಹಣ ಮಾಡಿಕೊಳ್ಳಬೇಕು

ಎಂದು ಕೆಲವರಲ್ಲಿ ಆಸೆ ಉಂಟಾಗಿ ಸಂಘಜೀವನದಿಂದ ದೂರಾಗುವರು. ಗುರುಗಳ ಸನ್ನಿಧಿಯಲ್ಲಿದ್ದರೆ ವಿಶೇಷ ಕೀರ್ತಿ ಸಿಗದು, ತಾವೇ ನೇರವಾಗಿ ಹೋದರೆ ಹೆಚ್ಚಿನ ಕೀರ್ತಿಯನ್ನು ಜನರಿಂದ ಪಡೆಯಬಹುದು ಎಂದೂ ಕೆಲವರು ಹೋಗುವರು. ಕ್ರೈಸ್ತರಲ್ಲಿ ಸಂಘ-ಸಂಸ್ಥೆ ಬಿಟ್ಟು ತಾವೇ ನೇರವಾಗಿ ಪ್ರಚಾರ ಮಾಡುವ ಹವ್ಯಾಸ ಇಲ್ಲವೇ ಇಲ್ಲ. ಹಿಂದುಗಳಲ್ಲಿ ಮತ್ತು ಲಿಂಗಾಯತರಲ್ಲಿ ಹಾಗಲ್ಲ, ಸಾಧ್ಯವಾದಷ್ಟು ಸಂಘಟನೆಯಿಂದ, ಸಂಘ ಜೀವನದಿಂದ ಹೊರಹೋಗಿ ವೈಯಕ್ತಿಕವಾಗಿ ಬೆಳೆಯಬೇಕು ಎಂಬ ಹಪಾಹಪಿಯೇ ಜಾಸ್ತಿ. ಆದರೆ ಇದು ಸಾಧ್ಯವಾಗದೆ ಕೆಲವೇ ಸಮಯದಲ್ಲಿ ಹತಾಶರಾಗುವರು. ಸಾಂಘಿಕ ಜೀವನದಲ್ಲಿ ಸುರಕ್ಷಿತತೆ ಇದೆ. ತನ್ನನ್ನು ತಾನು ಕಾಯ್ದುಕೊಂಡು ಗುರಿ ಮುಟ್ಟಬೇಕು ಎನ್ನುವವನು ಸಾಂಘಿಕವಾಗಿ ಬದುಕುವುದೇ ಲೇಸು. ಅಂಥ ಒಳ್ಳೆಯ ಜನರ, ಪ್ರಾಮಾಣಿಕ ಗುರುಗಳ ಆಶ್ರಯ ಸಿಗದಿದ್ದಾಗ ಅನಿವಾರ್ಯವಾಗಿ ವ್ಯಕ್ತಿಯು ಏಕಾಂಗಿಯಾಗಿ ಅಥವಾ ಸ್ವಂತ ಸಾಹಸ ಮಾಡಿ ಬೆಳೆಯ ಬೇಕಾಗುತ್ತದೆ. ಉತ್ತಮ ಅವಕಾಶ, ಪ್ರೋತ್ಸಾಹ ಇದ್ದೂ ಸಹ ಅದರಿಂದ ದೂರ ಹೋಗಿ ಕೆಲವರು ಪ್ರಯತ್ನ ಮಾಡಿಸೋಲುವುದುಂಟು. ಸಾಧಕ ಪ್ರಾಮಾಣಿಕನಾಗಿದ್ದೂ ಆತನಿಗೆ ಸದ್ಗುರು ಅಥವಾ ಪ್ರಾಮಾಣಿಕ ಗುರುವು ಸಿಗದೆ ಇದ್ದಾಗ ದೇವರ ಕೃಪೆ ಇವನ ಕಡೆಗೆ ಇರುತ್ತದೆ. ಪ್ರಾಮಾಣಿಕ ಗುರುವು ಇದ್ದಾಗಲೂ ಸ್ವಾರ್ಥಿಯಾಗಿ ಹೊರಹೋದಾಗ ದೇವರ ಕೃಪೆ ಹೊರಟು ಹೋಗುತ್ತದೆ. ತನ್ನ ದೌರ್ಬಲ್ಯದಿಂದ ಹೊರಗೆ ಹೋದರೂ ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಗುರುನಿಂದೆಯನ್ನು ಮಾಡುವ ಹವ್ಯಾಸ ಬೆಳೆಸಿಕೊಳ್ಳುವುದರಿಂದ ಅದರಿಂದ ಗುರುದ್ರೋಹದ ಪಾಪ ಬೇರೆ ಸಂಗ್ರಹವಾಗುತ್ತ ಹೋಗುತ್ತದೆ. ಹೀಗಾಗಿ ಎಷ್ಟೋ ಜನ ಪ್ರತಿಭಾವಂತರ ವ್ಯಕ್ತಿತ್ವವು ಕಮರಿ ಹೋಗಿಬಿಟ್ಟು ಅವರಿಂದ ಆಗಬಹುದು ಎಂದು ನಿರೀಕ್ಷಿಸಿದ ಸೇವೆ ಆಗದೆ ಹೋಗಿ ಮೂಲೆ ಗುಂಪಾಗುತ್ತಾರೆ. ಹಿಂದಿನ ಅನೇಕರ ತಪ್ಪುಗಳಿಂದ ಬುದ್ಧಿ ಕಲಿಯಿರಿ ಎಂದು ಸಾರಿಸಾರಿ ಹೇಳಿದರೂ ತಿಳಿದುಕೊಳ್ಳದೆ ಕೆಲವರು ತಪ್ಪು ಮಾಡುವರು. "ಅದು ಬೆಂಕಿ, ಮುಟ್ಟಿ ಕೈ ಸುಟ್ಟಿಕೊಳ್ಳ ಬೇಡಿರಿ." ಎಂದು ಹೇಳುತ್ತಿದ್ದರೂ ಅದೇ ತಪ್ಪನ್ನು ಮಾಡುವವವರನ್ನು ಕಂಡು ಖೇದವೆನಿಸುತ್ತದೆ. ಅವರ ಅದೃಷ್ಟ ಇಷ್ಟೇ ಏನೋ ಎಂದು ಮರುಕವೆನಿಸುತ್ತದೆ.

ತೀರ್ಪು ಕೊಡುವುದು ಬೇಡ

ನನ್ನ ವಿಚಾರಧಾರೆ ಏನೆಂದರೆ, ಯಾರು ಏನೇ ದ್ರೋಹ ಬಗೆಯಲಿ, ಕೇಡು ಮಾಡಲಿ, ನಾವುಗಳು ತೀರ್ಪು ಕೊಡುವುದು ಬೇಡ. ದೇವರು ನಿಜವಾದ ನ್ಯಾಯಾಧೀಶ. ಒಬ್ಬ ವ್ಯಕ್ತಿ ಈ ಕ್ಷಣದವರೆಗೂ ತಪ್ಪು ಮಾಡಿರಬಹುದು, ಈ ಕ್ಷಣದಲ್ಲಿ ತಿದ್ದಿಕೊಂಡಿರಬಹುದು. ಪಶ್ಚಾತ್ತಾಪ ಪಟ್ಟು ಶುದ್ಧನಾಗಿ ದೇವರ ಕೃಪೆಗೆ ಪಾತ್ರನಾಗಬಹುದು. ಆದ್ದರಿಂದ ನಾವೇಕೆ ತೀರ್ಪುಕೊಡಬೇಕು. ಒಂದು ತಪ್ಪು ಮಾಡಿ, ಬಿಟ್ಟು ಹೋದ ಓರ್ವರ ಬಗ್ಗೆ ಫೋನ್ ಮಾಡಿ ಒಬ್ಬರು ಕೇಳಿದರು, "ಇಂಥವರು ಬಂದಿದ್ದಾರೆ. ಮಠ ಕಟ್ಟಲು ಸಹಾಯ ಮಾಡಿ ಎನ್ನುತ್ತಿದ್ದಾರೆ. ನಿಮ್ಮ ಒಪ್ಪಿಗೆ ಇದೆಯೆ ?" ಎಂದರು. "ಇಂಥ ಪ್ರಶ್ನೆ ಕೇಳಿ ನನ್ನ ವ್ಯಕ್ತಿತ್ವಕ್ಕೆ ನೀವು ಕುಂದುತರಬಾರದು. ನೀವು ಅವರ ಪ್ರವಚನ ಕೇಳಿ, ಅವರ ವಿಚಾರ ನಿಮಗೆ ಸರಿ ಎನಿಸಿದರೆ, ಅವರ ವರ್ತನೆ ಸರಿ ಎನಿಸಿದರೆ ಸಹಾಯ ಮಾಡಿರಿ ಇಲ್ಲವೇ ಬಿಡಿರಿ" ಎಂದು ಹೇಳಿದೆ. ಮಾನವರು ವ್ಯಕ್ತಿಗಳನ್ನು ಅಳೆಯುವ ದೃಷ್ಟಿಕೋನವೇ ಬೇರೆ, ದೇವರು ಅಳೆಯುವ ದೃಷ್ಟಿಕೋನವೇ ಬೇರೆ. "ಹೊಯ್ದರೆ ಹೊಯ್ಗಳು ಕೈಯ ಮೇಲೆ, ಬೈದರೆ ಬೈಗಳು ಕೈಯ ಮೇಲೆ; ಲಿಂಗದೇವನ ಪೂಜಿಸಿದ ಫಲ ಕೈಯ ಮೇಲೆ.

Digitalized by e-Sahithya Documentation Forum
Sponsored by Sarayu Foundation Trust

ಪರಮಾತ್ಮನನ್ನು ತೂಗಿ ತೂಗಿ ಫಲ ಕೊಡುವ ನ್ಯಾಯಾಧೀಶ ಮತ್ತೊಬ್ಬನಿಲ್ಲ. ನಾವು ಯಾರದೋ ಕೆಟ್ಟತನದ ಬಗ್ಗೆ, ತಪ್ಪಿನ ಬಗ್ಗೆ ಚಿಂತೆ ಮಾಡುತ್ತ ಕೂರುವುದರಿಂದ ಸಮಯ ಹಾಳು, ಮನಸ್ಸು ಮಲಿನಗೊಳ್ಳುವುದು, ಅನವಶ್ಯಕ ಉದ್ವಿಗ್ನತೆಗೆ ಕಾರಣವಾಗುವುದು.

ಒಂದು ಕುಟುಂಬದಲ್ಲಿ ಅತ್ತೆ-ಮಾವಂದಿರಿಂದ ಬೇರೆಯಾಗಿ ಇರಬೇಕೆಂದು ಸೊಸೆಯು ಪತಿಯನ್ನು ಒತ್ತಾಯಿಸುವುದುಂಟು ಎಂದುಕೊಳ್ಳೋಣ. ಆಗ ತಾಯಿ-ತಂದೆ ಮಗನಿಗೆ ಹೋಗಬೇಡ ಎಂದು ಒತ್ತಾಯಿಸಿದರೆ ಆತ ಸಂದಿಗ್ಧತೆಗೆ ಸಿಕ್ಕಿಕೊಂಡು ತೊಳಲಾಡುವ ಸಂಭವವುಂಟು. ಹೆಂಡತಿ ಮಾತು ಕೇಳಬೇಕೋ, ತಾಯಿತಂದೆಯರ ಮಾತು ಕೇಳಬೇಕೋ ಎಂದರಿಯದೆ, ಆತ ಹಿಂಸೆ ಪಡುವುದುಂಟು. ಅಂಥ ಸಮಯದಲ್ಲಿ ತಾಯಿತಂದೆ ಉದಾರಿಗಳಾಗಿ, ''ನೀವು ಸುಖವಾಗಿರಲೆಂದು ತಾನೇ ಮದುವೆ ಮಾಡಿರುವುದು. ಹೋಗಿ ಸುಖವಾಗಿರಿ'' ಎಂದು ಒಪ್ಪಿಗೆ ಕೊಡುವುದು ವ್ಯಾವಹಾರಿಕ ಜಾಣತನ. ಸಂಘಟನೆಗಳನ್ನು ರಕ್ಷಿಸುವಾಗಲೂ ಸಹಿತ ಈ ವ್ಯಾವಹಾರಿಕ ಜಾಣತನ ಬೇಕು. ಸ್ವಾರ್ಥಬುದ್ಧಿಯಿಂದ ಸಂಘಟನೆ ಒಡೆಯುವ ಜನರಿಗೆ ಕೊಂಚ ಸ್ವಾತಂತ್ರ್ಯ ನೀಡಿ ಕೈಬಿಡಬೇಕು. ಇಲ್ಲದಿದ್ದರೆ ಗುಂಪುಗಳಾಗಿ ಸರಿಪಡಿಸಲಾರದಷ್ಟು ಸಂಘಟನೆಯು ದುರ್ಬಲವಾಗುವುದು. ''ಲಿಂಗದೇವನ ಶರಣರು ನೊಂದು ಸೈರಿಸಬೇಕು'' ಎಂಬ ಮಹಾವಾಣಿಯನ್ನು ನುಡಿದ ಧರ್ಮಪಿತ ಬಸವಣ್ಣನವರ ಮಾತಿನ ಮರ್ಮ ಅದೇ, ವ್ಯಕ್ತಿಯು ವೈಯಕ್ತಿಕವಾಗಿ ನೊಂದುಕೊಂಡರೂ ಚಿಂತೆಯಿಲ್ಲ ಸಂಘಟನೆಯನ್ನು, ಸಾಮಾಜಿಕ ಒಗ್ಗಟ್ಟನ್ನು ರಕ್ಷಿಸಬೇಕು. ಮಾನವನ ದೌರ್ಬಲ್ಯಗಳ ಮಧ್ಯೆಯೂ ಸಂಬಂಧವನ್ನು ರಕ್ಷಿಸಿಕೊಳ್ಳುವ ವಿವೇಕವನ್ನು ಪ್ರದರ್ಶಿಸಬೇಕು. ★

ಬೆಂಗಳೂರಿನ ವಿಜಯನಗರ ಬಡಾವಣೆಯ
೬ನೇ ಮೇನ್, ೩ನೇ ಕ್ರಾಸ್‌ನಲ್ಲಿರುವ
ಗಾಂಧಿ ಮೈದಾನದಲ್ಲಿ
ಭಾನುವಾರ ೧೨-೩-೨೦೦೦ ದಿಂದ ೪ ವಾರಗಳ ವರೆಗೆ

ವಿಶ್ವಧರ್ಮ ಪ್ರವಚನ

ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ
ಅವರ ಕರಕಮಲ ಸಂಜಾತರಾಗಿ ಕಿರಿದಾದ ವಯಸ್ಸಿನಲ್ಲಿಯೇ ಹಿರಿದಾದ ಜ್ಞಾನಗಳಿಸಿ, ಸಮಾಜದ ಸರ್ವಾಂಗೀಣ ಉದ್ಧಾರಕ್ಕಾಗಿ ತಮ್ಮ ಜೀವನವನ್ನು ಧರ್ಮಪ್ರಚಾರಕ್ಕೆಂದು ಮೀಸಲಿಟ್ಟು ವಿರಕ್ತಾಶ್ರಮ ಸ್ವೀಕರಿಸಿ ಸತತವಾಗಿ ಸಂಚರಿಸುತ್ತಿರುವ
ಪೂಜ್ಯ ಶ್ರೀ ಸದ್ಗುರು ಅಲ್ಲಮ ಪ್ರಭು ಸ್ವಾಮೀಜಿ
(ಬಸವ ಮಂಟಪ, ರಾಜಾಜಿನಗರ, ಬೆಂಗಳೂರು)
ಅವರು ಪ್ರತಿನಿತ್ಯ ಸಂಜೆ ೬-೩೦ ರಿಂದ ೮-೩೦ ಗಂಟೆಯವರೆಗೆ ಅಖಂಡವಾಗಿ ಅವ್ಯಾಹತವಾಗಿ ವಿಶ್ವಧರ್ಮ ಪ್ರವಚನ ಮಾಡಲಿದ್ದಾರೆ.

ವಚನ ಕಿರಣ

೧. ಮನದ ಮಾಲೆಯಲ್ಲಿ ಕ್ಷಣಾರ್ಧ
ನಿರಾಶೆಯ ಛಾಯೆ ಮೂಡಿಸಿದಂತಿರಿಸಿ
ಮರುಕ್ಷಣವೆ ಆಶೆಯ ಚಿಗುರೊಡೆಸುವೆಯಲ್ಲಾ
ಒಮ್ಮೆ ಬೀಳಿಸಿದಂತೆ ಮಾಡಿ
ತಕ್ಷಣವೇ ಮತ್ತೆತ್ತಿಕೊಂಬುವೆಯಯ್ಯಾ
ಸೂತ್ರಧಾರನ ಕೈಯ ಗೊಂಬೆ ಕುಣಿವಂತೆ
ನಿನ್ನ ಸೂತ್ರದಲ್ಲಿ ಜಗವು ನಟಿಸುತಿಹುದಯ್ಯಾ
ನೀನಾಡಿಸಿದಂತೆ ಆಡುವ ಕೈಗೊಂಬೆ ನಾನಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

೨. ನಾನೆಂಬ ಮಮಕಾರವ ಹರಿದು
ನನ್ನದೆಂಬ ಮೋಹವ ತೊಡೆದು
ನನ್ನಿಂದೆಂಬ ಅಹಂ ನಷ್ಟಗೈದು
ನಿನ್ನಿಂದಲೇ ಎಲ್ಲವೂ ಎಂದರಿದು
ನಾನು ನೀನೆ ನೀನು ನಾನೆಂಬ ಭಾವ
ತಲೆದೋರಿದಲ್ಲದೆ ನಿಜ ಶರಣನೆಂತಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ ?

೩. ನಾನು ಮಾಡುವೆನೆಂಬ ಭಾವ ಬರಿದಾಗಿ
ನೀನೇ ಮಾಡುವಿಯೆಂಬ ಭಾವದುಂಬಿಕೊಂಡು
ಮಾಡುವ ಕಾರ್ಯಗಳೆಲ್ಲವು
ಯಶಸ್ವಿಯಾಗದಿರುವವೆ
ಮಾತಾ ಪ್ರಿಯ ಸಚ್ಚಿದಾನಂದ ?

೪. ಪಾತ್ರೆಯ ಒಳಗೆ ಶುಚಿಯಾದಲ್ಲದೆ
ಮಾಡಿದ ಪಾಕ ಕೆಡದಂತೆ ಇರದು
ಹೊರಗೆ ತೊಳೆದಲ್ಲದೆ ಸ್ವೀಕರಿಸುವವರ
ಮನಕೆ ಒಗ್ಗದು. ಇದು ಕಾರಣ
ಅಂತರಂಗ ಬಹಿರಂಗ ಶುದ್ಧವಾದಲ್ಲದೆ

Digitalized by e-Sahithya Documentation Forum
Sponsored by Sarayu Foundation Trust

ನಿನ್ನೊಲುಮೆಯೆಂತಪ್ಪುದಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ ?

೫. ಶರೀರಕ್ಕೆ ಭಸ್ಮವ ಪೂಸಿದರೇನಯ್ಯಾ
ಅಂತರಂಗದಲ್ಲಿ ಅರಿಷಡ್ವರ್ಗಂಗಳು ನಷ್ಟವಾಗದನ್ನಕ್ಕ ?
ದೇಹದ ಮೇಲೆ ರುದ್ರಾಕ್ಷಿಯ ತೊಡುಗೆ
ಧರಿಸಿದರೇನಯ್ಯಾ ಸಮ್ಯಕ್‌ದೃಷ್ಟಿ ಅಳವಡದನ್ನಕ್ಕ ?
ಹೊತ್ತಾರೆ ಎದ್ದು ಹಲವು ತಾಸು ಲಿಂಗವ
ಪೂಜಿಸಿದರೇನಯ್ಯಾ ತನು, ಮನ ಗುಣಾದಿಗಳು ಕೆಡದನ್ನಕ್ಕರ ?
ಇವ ನಷ್ಟಗೊಳಿಸಿ ಎನ್ನ ನಿನ್ನವಳಾಗಿಸಿಕೊಳ್ಳಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ

೬. ಅರಿಯಲೆಂದು ಅಳಲಿದೆನಯ್ಯಾ ;
ತಿಳಿಯಲೆಂದು ತೊಳಲಿದೆನಯ್ಯಾ
ಬೇಡಿ ಬೇಡಿ ಬಳಲಿದೆನಯ್ಯಾ ;
ಕೇಳಿ ಕೇಳಿ ಕನಲಿದೆನಯ್ಯಾ
ಹಂಬಲಿಸಿ ಧಾವತಿಗೊಂಡೆನಯ್ಯಾ
ನಾನೇನ ಮಾಡಿದರೂ ನೀನೊಲಿಯೆಯಯ್ಯಾ
ನೀನೊಲಿದಾಗ ಕೃಪೆದೋರಾ
ಮಾತಾ ಪ್ರಿಯ ಸಚ್ಚಿದಾನಂದ.

೭. ಹಲವು ಹತ್ತು ಸುಖಗಳಿಗೆ ಹರಿದಾಡಿ
ಸೋಲುವುದೀ ಮನ
ಅಭಿಮಾನ ಅಕ್ಕರತೆಗಳ ಅಪೇಕ್ಷಿಸುವುದೀ ಮನ
ಕೀರ್ತಿ ವಾರ್ತೆಗಳ ಹಿಂದೋಡುವುದೀ ಮನ
ನಿಮ್ಮ ಕೃಪೆಗೆ ಹಂಬಲಿಸದೆ
ಹತ್ತಾರು ಕಡೆಗೆ ಸುತ್ತಾಡುವ ಮನವ
ನಿಮ್ಮ ಚಿತ್ತದಲ್ಲಿರಿಸಿಕೊಳ್ಳಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

- ಮಾತೆ ಅಕ್ಕಮಹಾದೇವಿ
ಬಸವ ಧರ್ಮಪೀಠ, ಕೂಡಲ ಸಂಗಮ

ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ

ಬಸವ ತತ್ತ್ವ ತರಬೇತಿ ಕಮ್ಮಟ

ಮೇ 11 ರಿಂದ 21ರವರೆಗೆ

ಬಸವ ಧರ್ಮ ಪೀಠ-ವಿಶ್ವ ಕಲ್ಯಾಣ ಮಿಷನ್ ಸಂಯುಕ್ತ ಆಶ್ರಯದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟಗಳನ್ನು ಪ್ರತಿವರ್ಷವೂ ಬೇಸಿಗೆಯ ರಜಾಕಾಲದಲ್ಲಿ ಮತ್ತು ಅಕ್ಟೋಬರ್ ರಜಾಕಾಲದಲ್ಲಿ ನಡೆಸಲಾಗುತ್ತಿತ್ತು. ಅಖಿಲ ಭಾರತ ಬಸವ ಧರ್ಮ ಸಮ್ಮೇಳನಗಳನ್ನು ಆರಂಭಿಸಿದ ಮೇಲೆ ತರಬೇತಿ ಶಿಬಿರಗಳಿಗೆ ಸಮಯವು ದೊರೆಯದಂತಾಯಿತು. ಕಮ್ಮಟಗಳಲ್ಲಿ ಪ್ರಾಯೋಗಿಕ ತರಬೇತಿ ಸಾಧ್ಯವಾಗುವುದರಿಂದ ಇದನ್ನು ನಡೆಸಬೇಕೆಂದು ಒತ್ತಾಯ ಮತ್ತು ಬೇಡಿಕೆ ಶರಣ ಬಂಧುಗಳಿಂದ ಬಂದಿದೆ. ಆದ್ದರಿಂದ 2000 ಇಸವಿಯ ಮೇ 11 ರಿಂದ 21ನೆಯ ದಿನಾಂಕದವರೆಗೆ 11 ದಿನಗಳ ಕಾಲ ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವ ತತ್ತ್ವ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ.

1. ದಿನ ನಿತ್ಯ ಸಂಜೆ ಪ್ರವಚನದ ತರಬೇತಿಯೇ ಅಲ್ಲದೆ ಯೋಗಾಸನ, ಪ್ರಾಣಾಯಾಮ, ಧ್ಯಾನ, ಪ್ರಕೃತಿ ಚಿಕಿತ್ಸೆಯ ತರಬೇತಿ ಸಹ ಇರುತ್ತದೆ. ವಚನಾಧ್ಯಯನ, ಚಿಂತನೆ, ಚರ್ಚಾಗೋಷ್ಠಿಗಳೂ ಏರ್ಪಾಡಾಗಿರುತ್ತವೆ.
2. ನಾಮಕರಣ, ಲಿಂಗಧಾರಣೆ, ಮಂತ್ರೋಪದೇಶ, ಇಷ್ಟಲಿಂಗದೀಕ್ಷೆ, ವಿವಾಹ, ಗೃಹಪ್ರವೇಶ, ಲಿಂಗೈಕ್ಯರ ಶವಸಂಸ್ಕಾರ, ವಿಭೂತಿ ವೀಳ್ಯ ಮುಂತಾದವುಗಳ ಪ್ರಾಯೋಗಿಕ ತರಬೇತಿ ಇರುವುದಲ್ಲದೆ ''ಕ್ರಿಯಾಮೂರ್ತಿ'' ದೀಕ್ಷೆಯನ್ನು ಆಸಕ್ತರಿಗೆ ನೀಡಲಾಗುವುದು.
3. ನಿಸರ್ಗ ಚಿಕಿತ್ಸೋಪಚಾರ, ಸಾತ್ವಿಕ ಆಹಾರ ಪದ್ಧತಿ ಮುಂತಾಗಿ ವಿಶೇಷ ಉಪನ್ಯಾಸಗಳು ಇರುತ್ತವೆ.
4. ಶಿಬಿರಾರ್ಥಿಗಳು ಬರುವಾಗ ಹಾಸಿಕೊಳ್ಳಲು, ಹೊದೆಯಲು, ಊಟಕ್ಕಾಗಿ ತಟ್ಟೆ, ಲೋಟ ತರಬೇಕು. ಯೋಗಾಸನಕ್ಕೆ ಅನುಕೂಲವಾಗಲು ಚೂಡಿದಾರ, ಪೈಜಾಮ ಮುಂತಾದ ಬಟ್ಟೆಗಳನ್ನು ತರಬೇಕು.
5. ಮೊದಲನೆಯ ದಿನದಿಂದ ಕಡೆಯ ದಿನದವರೆಗೆ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗಿಗಳಾಗಬೇಕು.

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆಯುವ ಈ ಶಿಬಿರದ ಕಡೆಯ ಎರಡು ದಿವಸ ದಿ. 20-5-2000 ಮತ್ತು 21-5-2000 ಭಕ್ತಿ ಪಕ್ಷ ಸಮ್ಮೇಳನವು ಜರುಗುತ್ತದೆ.

ಪೂರ್ಣಾವಧಿಯ ಶಿಬಿರ ಶುಲ್ಕ ಒಬ್ಬರಿಗೆ ೩೫೦ (ಮೂರು ನೂರಾ ಐವತ್ತು)

Digitalized by e-Sahithya Documentation Forum
Sponsored by Sarayu Foundation Trust

ರೂಪಾಯಿಗಳು. ವಿದ್ಯಾರ್ಥಿಗಳಿಗೆ ೨೦೦ ರೂ. ಬಹಳ ಆಸಕ್ತರಿದ್ದು ಆರ್ಥಿಕವಾಗಿ ಅಶಕ್ತರಿರುವವರು ಮೊದಲೇ ಪತ್ರ ಬರೆದು ಒಪ್ಪಿಗೆಯನ್ನು ಪಡೆದುಕೊಳ್ಳಬೇಕು. ಭಕ್ತಿ ಪಕ್ಷ ಸಮ್ಮೇಳನದ ಎರಡು ದಿವಸಗಳ ಪ್ರತಿನಿಧಿ ಶುಲ್ಕ ಒಬ್ಬರಿಗೆ ೬೦ ರೂ.

ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸುವ ಕ್ರಿಯಾಮೂರ್ತಿಗಳು ತರಬೇತಿ ಹೊಂದುವುದು ಅತ್ಯಂತ ಅಗತ್ಯವಿದೆ. ಏನೆಲ್ಲ ಬಸವ ತತ್ತ್ವವನ್ನು ತಿಳಿದುಕೊಂಡಿದ್ದರೂ, ಅಂಥವರು ತಮ್ಮ ಮನೆಯ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ಯಪುರೋಹಿತರನ್ನು ಕರೆದಾಗ ಅವರು ತತ್ತ್ವವಿರೋಧಿ ಪೂಜೆಗಳನ್ನು ನೆರವೇರಿಸುವರು. ಆರ್ಥಿಕವಾಗಿ ಅಶಕ್ತರಿದ್ದು ಕ್ರಿಯಾ ಮೂರ್ತಿಗಳಾಗಬಲ್ಲ ಕಾರ್ಯಕರ್ತರಿದ್ದರೆ ಅಂಥವರ ಪ್ರಯಾಣದ ವೆಚ್ಚವನ್ನು ಮತ್ತು ಶಿಬಿರ ಶುಲ್ಕವನ್ನು ಸ್ಥಳೀಯ ರಾಷ್ಟ್ರೀಯ ಬಸವ ದಳದವರು ವಹಿಸಿಕೊಂಡು ತರಬೇತಿಗೆ ಕರೆತರಬೇಕು. ಶ್ರೀಮಂತರು ಧನ ಸಹಾಯ ನೀಡಿ ತರಬೇತಿ ಪಡೆಯಲು ಒಳ್ಳೆಯ ಸಾತ್ವಿಕರನ್ನು ಕಳಿಸಿಕೊಡಬಹುದು.

ಆದಷ್ಟು ಬೇಗನೆ ಹಣವನ್ನು ಡಿ.ಡಿ., ಎಂ. ಓ., ಮೂಲಕ ಕಳಿಸಿ ತಮ್ಮ ಪ್ರವೇಶವನ್ನು ಕಾಯ್ದಿರಿಸಿಕೊಳ್ಳಬೇಕು. ಬ್ಯಾಂಕ್‌ಡ್ರಾಫ್ಟ್‌ನ್ನು ವಿಶ್ವಕಲ್ಯಾಣ ಮಿಷನ್ ಎಂದು ಬೆಂಗಳೂರಿನ ಯಾವುದೇ ಬ್ಯಾಂಕಿನ ಶಾಖೆಗೆ ತೆಗೆಸಿ ಕೆಳಗಿನ ವಿಳಾಸಕ್ಕೆ ಕಳಿಸಬಹುದು.

6. ಧರ್ಮಪ್ರಚಾರ, ನೈತಿಕ ಮೌಲ್ಯಗಳ ಪ್ರಚಾರ ಇಂದಿನ ಅಗತ್ಯವಾಗಿದೆ. ಅದರಲ್ಲಿಯೂ ಬಸವ ತತ್ತ್ವದ ಪ್ರಚಾರ ತೀರಾ ಅವಶ್ಯಕತೆಯಾಗಿದೆ. ಧರ್ಮಪ್ರಚಾರದಲ್ಲಿ ತೊಡಗಿಸಿಕೊಳ್ಳಬೇಕಾದರೆ ವಿಷಯಗಳನ್ನು ತಿಳಿದುಕೊಳ್ಳುವುದು ಮಾತ್ರವಲ್ಲದೆ ಇನ್ನೊಬ್ಬರಿಗೆ ಮನವರಿಕೆ ಮಾಡಿಕೊಡಲು ತರಬೇತಿ ಹೊಂದಬೇಕು. ಆದ್ದರಿಂದ ಹೆಚ್ಚಿನ ಜನರು ತರಬೇತಿ ಕಮ್ಮಟದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಆಶಿಸುವೆವು. ಶಿಬಿರ ನಿರ್ವಹಣೆಗಾಗಿ ದೇಣಿಗೆ ಕೊಡುವವರಿಗೆ ಅವಕಾಶವಿದೆ.

7. ತರಬೇತಿಯ ಅವಧಿಯಲ್ಲಿ ಪ್ರಸಾದ ದಾಸೋಹವನ್ನು ಮಾಡಿಸಬೇಕೆಂಬ ಹಂಬಲವುಳ್ಳ ದಾನಿಗಳು ಒಂದು ದಿವಸದ ಪೂರಾ ವೆಚ್ಚವನ್ನು ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ, ಸಂಜೆಯ ಚಹಾ, ರಾತ್ರಿಯ ಊಟದ ವೆಚ್ಚವನ್ನು ಭರಿಸಬಹುದು. ಇಲ್ಲವೇ ಒಂದೊಂದು ಹೊತ್ತಿನ ಖರ್ಚು ಭರಿಸಬಹುದು ಅಥವಾ ತಮ್ಮ ಕೈಲಾದಷ್ಟು ಕಾಣಿಕೆಯನ್ನು ಕೊಡಬಹುದು.

ವ್ಯವಹರಿಸುವ ವಿಳಾಸ :

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮಪ್ರಭು, ಕಾರ್ಯದರ್ಶಿ
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, ೨೦೩೫, ೨೦ನೆಯ ಮೇನ್, ೨ನೆಯ ಬ್ಲಾಕ್,
ರಾಜಾಜಿನಗರ, ಬೆಂಗಳೂರು - ೫೬೦ ೦೧೦ ದೂ : ೩೩೨೫೩೩೩೫ / ೩೩೨೨೬೮೦

8. **ಬಸವ ಗಂಗೋತ್ರಿ ಸ್ಥಳ ನಿರ್ದೇಶನ :**

ವಿಶ್ವ ಕಲ್ಯಾಣ ಮಿಷನ್ (ರಿ.) ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ. ಮೀ. ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ ಬಿ,

ಮೆಜೆಸ್ಟಿಕ್ - ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತದೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇರದೆ ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ.

೧. "**ಬಸವ ಗಂಗೋತ್ರಿ ನಗರ**" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' x ೬೦'-ವಿಸ್ತೀರ್ಣ ೨೪೦೦ ಚ. ಅಡಿಗಳು

ವರ್ಗ 'ಬಿ'-೩೦' x ೪೦'-ವಿಸ್ತೀರ್ಣ ೧೨೦೦ ಚ. ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

Digitalized by e-Sahithya Documentation Forum
Sponsored by Sarayu Foundation Trust

೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. ೧೦೦೦-೦೦ (ಒಂದು ಸಾವಿರ) ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ ೧೦೦-೦೦ (ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ :-

ದೂರವಾಣಿ : 080 - 3325335, 3322790
Telefax : 3306183

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮ ಪ್ರಭು, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ ನಗರ ಯೋಜನೆ,
ಬಸವ ಮಂಟಪ, ೨೦೩೫, ೨೦ನೆಯ ಮುಖ್ಯರಸ್ತೆ,
೨ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು - ೫೬೦ ೦೧೦

ಬಸವ ಪ್ರಣೀತ ಲಿಂಗಾಯತ ಧರ್ಮದ ಸೂತ್ರಗಳು

೧. **ಧರ್ಮಗುರು** : ವಿಶ್ವಗುರು ಬಸವಣ್ಣನವರು ಕ್ರಿ. ಶ. ೧೧೩೪ ರಿಂದ ೧೧೯೬

೨. **ಧರ್ಮ ಸಂಹಿತೆ** : ಸಮಾನತೆ ಸಾರುವ ವಚನ ಸಾಹಿತ್ಯ.

೩. **ಧರ್ಮ ಲಾಂಛನ** : ವಿಶ್ವಾತ್ಮನ ಕುರುಹಾದ ಇಷ್ಟಲಿಂಗ.

೪. **ಧರ್ಮ ಕ್ಷೇತ್ರ** : ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ.

೫. **ಧರ್ಮ ಧ್ವಜ** : ಷಟ್ಕೋನಸಹಿತ ಬಸವ ಧ್ವಜ.

೬. **ಧರ್ಮದ ಧ್ಯೇಯ** : ಜಾತಿ, ವರ್ಣ, ವರ್ಗರಹಿತ, ಧರ್ಮ ಸಹಿತ ಕಲ್ಯಾಣ ರಾಜ್ಯ ನಿರ್ಮಾಣ.

(೧೬ನೇ ಪುಟದಿಂದ ಮುಂದುವರೆದದ್ದು)

ಶರಣೆ ಲಕ್ಷ್ಮೀಬಾಯಿಯನ್ನು ಗಣನಾಯಕಿಯನ್ನಾಗಿ ಮಾಡಿರುವುದೇ ಅಲ್ಲದೆ ಪೂಜ್ಯ ಮಾತಾಜಿ ೧೯೯೯ರ ಶರಣ ಮೇಳದಲ್ಲಿ ವೀರಮಾತೆ ಅಕ್ಕನಾಗಲಾಂಬಿಕಾ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಎಲ್ಲಿಗೆ ಹೋದರೂ, ತತ್ತ್ವಜ್ಞಾನ, ಅಧ್ಯಾತ್ಮ ಕುರಿತು ಹೇಳಲು ಸಾಮರ್ಥ್ಯವಿಲ್ಲದ ಕೆಲವು ಮಠಾಧೀಶರು, ವೀರಶೈವ ಗಣ್ಯರು ಒಂದು ಸಭೆಯಲ್ಲಿ ಅನವಶ್ಯಕವಾಗಿ ಪೂಜ್ಯ ಮಾತಾಜಿಯವರ ಹೆಸರನ್ನು ಎತ್ತಿ ನಿಂದಿಸತೊಡಗಿದಾಗ ಲಕ್ಷ್ಮಿಬಾಯಿ ಪಾಂಡ್ರೆ ಸಭೆಯಲ್ಲಿ ಎದ್ದು ನಿಂತು, "ಅವರು ಮಾಡಿದಷ್ಟು ಬಸವ ತತ್ತ್ವ ಪ್ರಚಾರ ನೀವ್ಯಾರು ಮಾಡಿದ್ದೀರಿ ? ಲಿಂಗಾನಂದ ಅಪ್ಪಾಜಿ ೩೫ ವರ್ಷಗಳ ಹಿಂದೆ ಬಂದು ಹೇಳಿದಾಗಲೇ ವಿಭೂತಿ, ಲಿಂಗ, ರುದ್ರಾಕ್ಷಿಗಳನ್ನು ನಾವು ಧರಿಸಿದ್ದು, ಬಸವ ತತ್ತ್ವ ತಿಳಿದದ್ದು. ಈಗ ಅವರು ಮಾಡಿದ ಸಂಘಟನೆ ಕೆಡಿಸಲು ನೀವು ಓಡಾಡುತ್ತಿದ್ದೀರಾ ? ಅವರಿಲ್ಲದಲ್ಲಿ ಅವರನ್ನು ಏಕೆ ನಿಂದಿಸುವಿರಿ ? ನಿಮಗೆ ಏನಾದರೂ ತತ್ತ್ವ ಹೇಳುವ ತಾಕತ್ತಿದ್ದರೆ ಹೇಳಿ ; ಯಾಕೆ ಅವರಿವರನ್ನು ನಿಂದಿಸುವಿರಿ ?" ಎಂದು ಮಾತನಾಡಿದಾಗ ಇಡೀ ಸಭೆಯು ಸ್ತಂಭೀಭೂತವಾಯಿತಂತೆ. ಆಗ ಓರ್ವ ವೀರಶೈವ ಮುಖಂಡರು, "ಹಾಗಲ್ಲ ಲಕ್ಷ್ಮೀಬಾಯಿ, ಮಾತಾಜಿ ಕೂಡಲ ಸಂಗಮದೇವ ವಚನಾಂಕಿತ ತೆಗೆದು ಲಿಂಗದೇವ ಮಾಡಿ ಅಪಚಾರ ಮಾಡಿದ್ದಾರೆ" ಎಂದಾಗ ಶರಣೆ ಲಕ್ಷ್ಮೀಬಾಯಿ ಹೇಳಿದರಂತೆ," ಹೌದು, ನಾವೇನು ಕೂಡಲಸಂಗಮದೇವ-ಸ್ಥಾವರಲಿಂಗ ಪೂಜಕರೆ ? ಅಲ್ಲ ; ನಾವು ಇಷ್ಟಲಿಂಗಪೂಜಕರು ಲಿಂಗಾಯತ ಧರ್ಮದ ದೇವರು ಲಿಂಗದೇವರು ಅಲ್ಲದೆ ಹನುಮಪ್ಪ ದೇವರೆ ? ಎಂದು ಪ್ರಶ್ನಿಸಿದಾಗ ಮುಖಂಡರ ನಾಲಿಗೆಗಳು ಒಣಗಿ ಹೋಗಿ ತಣ್ಣಗಾದರಂತೆ. ಮುಂದೆ ಮಾತಾಜಿಯವರನ್ನು ನಿಂದಿಸುವ ಧೈರ್ಯ ಯಾರಿಗೂ ಬರಲಿಲ್ಲವಂತೆ. ಹೀಗೆ ಲಕ್ಷ್ಮೀಬಾಯಿಯ ಜ್ಞಾನವಂತಿಕೆ, ತತ್ತ್ವನಿಷ್ಠೆ, ಧೈರ್ಯಗಳನ್ನು ಅಂದಿನಿಂದ ಎಲ್ಲರೂ ಕೊಂಡಾಡುವುದೇ ಅಲ್ಲದೆ, ಕಾಲೇಜಿನಲ್ಲಿ ಸಹ ಲಕ್ಷ್ಮೀಬಾಯಿಯನ್ನು ಆಯಿ(ಅಮ್ಮ)ಎಂದು ವಿದ್ಯಾರ್ಥಿಗಳು ಆದರಿಸುವುದುಂಟಂತೆ. ಉದಗೀರ್ ರಾಷ್ಟ್ರೀಯ ಬಸವ ದಳದ ವತಿಯಿಂದ ಅನೇಕ ರಾಷ್ಟ್ರೀಯ ಬಸವ ದಳದವರನ್ನು, ಗಣನಾಯಕ-ನಾಯಕಿಯರನ್ನು ಪುರಪ್ರಮುಖರನ್ನು, ಸಮಾಜದ ಗಣ್ಯರನ್ನು ಪೂಜ್ಯ ಮಾತಾಜಿ ಶಾಲು ಹೊದ್ದಿಸಿ ಸತ್ಕರಿಸಿದರು.

ದಿ.೧೨. ರಂದು ಪೂಜ್ಯ ಮಾತಾಜಿಯವರು ಉದಗೀರಿಗೆ ಹೋಗುತ್ತಿದ್ದುರಿಂದ ಬೆಂಗಳೂರಿನ ರಾಷ್ಟ್ರೀಯ ಬಸವ ದಳದವರು ಮರು ಭಾನುವಾರ ದಿ.೧೯-೩-೨೦೦೦ ಪೂಜ್ಯ ಮಾತಾಜಿಯವರ ವರ್ಧಂತಿ ಆಚರಿಸಿದರು. ಅಕ್ಷರೋಗ್ರಾಫಿಕ್ಸ್‌ನ ಮಾಲಿಕರಾದ ಶರಣರಾದ ಸೋಮಶೇಖರ್ ಪಾಟೀಲ್ ಮತ್ತು ಶರಣೆ ಸುಧಾ ವಿಶೇಷ ಪ್ರಸಾದವನ್ನು ಶರಣ ಬಂಧುಗಳಿಗೆ ವ್ಯವಸ್ಥೆ ಮಾಡಿ, ಪೂಜ್ಯ ಮಾತಾಜಿಯವರಿಗೆ ಕಾಣಿಕೆ ಸಮರ್ಪಿಸಿ, ಶಾಲು ಹೊದ್ದಿಸಿ ಸತ್ಕಾರ ಮಾಡಿದರು.

ಎಳನಡು : ಚಿಕ್ಕನಾಯಕನಹಳ್ಳಿ ತಾಲ್ಲೂಕು, ಹುಳಿಯಾರು ಹೋಬಳಿಯ ಎಳನಡು ಶಿವಯೋಗಿ ಸಿದ್ಧರಾಮೇಶ್ವರರ ಪಾದ ಸ್ಪರ್ಶದಿಂದ ಪುನೀತವಾದ ನಾಡು. ಅವರು ಆ

Digitalized by e-Sahithya Documentation Forum
Sponsored by Sarayu Foundation Trust

ಭಾಗದಲ್ಲೆಲ್ಲ ಸಂಚಾರ ಮಾಡಿದ್ದು, ಇಂದಿಗೂ ಅನುಯಾಯಿಗಳು ಸ್ಥಾನಗಳನ್ನು ಕಾಯ್ದುಕೊಂಡಿದ್ದಾರೆ. ಎಳನಡುವಿನ ತೋಟದ ಮನೆಯ ಶರಣ ಸೋಮಶೇಖರಪ್ಪ ಪಟೇಲರವರು ದಿ.೨೩-೩-೨೦೦೦ದಂದು ತಮ್ಮ ಮಗಳು ಗಾಯಿತ್ರಿಯನ್ನು ಶರಣ ಶಿವಣ್ಣನವರ ಸುಪುತ್ರ ಹೊನ್ನಲಿಂಗಯ್ಯನಿಗೆ ಕೊಟ್ಟು ವಿವಾಹ ಮಾಡುವ ಸುಸಂದರ್ಭದಲ್ಲಿ ಬಸವ ತತ್ತ್ವದ ಸಮಾವೇಶವನ್ನು ಏರ್ಪಡಿಸಿದ್ದರು. ಮದುವೆ, ಗೃಹಪ್ರವೇಶ, ನಾಮಕರಣ, ಲಿಂಗೈಕ್ಯ ಸಂಸ್ಮರಣೆ ಮುಂತಾದವು ಧರ್ಮಪ್ರಚಾರಕ್ಕೆ ಅತ್ಯುತ್ತಮ ಸನ್ನಿವೇಶಗಳು. ಪ್ರವಚನ, ಭಾಷಣ, ಸಮ್ಮೇಳನ, ಶರಣ ಮೇಳ ಮುಂತಾದ ಧಾರ್ಮಿಕ ಸಮಾವೇಶಕ್ಕೆ ಜಪ್ಪಯ್ಯ ಎಂದರೂ ಬರದ ಲೌಕಿಕ ಜನರು ನಂಟಸ್ಥನ, ಮಿತ್ರತ್ವಗಳ ದಾಕ್ಷಿಣ್ಯಕ್ಕಾಗಿ ಮದುವೆ ಮುಂತಾದ ಲೌಕಿಕ ಸಮಾರಂಭಗಳಲ್ಲಿ ಸಮಾವೇಶವಾಗುವರು. ಹೀಗಾಗಿ ಧರ್ಮದ ಕಡೆಗೆ ಬರದ ಜನರ ಬಳಿಗೆ ಧರ್ಮವನ್ನು ಒಯ್ಯುವ ಉತ್ತಮ ಕಾರ್ಯವನ್ನು ಇಂಥ ಸನ್ನಿವೇಶಗಳಲ್ಲಿ ಮಾಡಬಹುದು. ಪೂಜ್ಯ ಮಾತಾಜಿ ತಮ್ಮ ಒಂದು ಆಶೀರ್ವಚನದಲ್ಲಿ ತಮಾಷೆಯಾಗಿ ಹೇಳಿದ್ದರು : ''ಪಳಗಿದ ಆನೆಗಳನ್ನು ಬಿಟ್ಟು ಕಾಡಾನೆಗಳನ್ನು ಪಳಗಿಸುವಂತೆ ತತ್ತ್ವ ತಿಳಿದವರನ್ನು ಮುಂದೆ ಬಿಟ್ಟು ತಿಳಿಯದವರನ್ನು ಜ್ಞಾನವಂತರನ್ನಾಗಿ ಮಾಡಬೇಕು.'' ಪೂಜ್ಯ ಮಾತಾಜಿ ಮಾಡಿಸುವ ಮದುವೆಯ ವಿಧಾನವೇ ಒಂದು ಅಪರೂಪದ ಕಾರ್ಯಕ್ರಮ ; ಇದರ ಜೊತೆಗೆ ಧರ್ಮ ಚಿಂತನಗೋಷ್ಠಿ ಸೇರಿ ಶರಣ ಸೋಮಶೇಖರಯ್ಯನವರ ಮಗಳ ವಿವಾಹ ಚೆನ್ನಾಗಿ ನೆರವೇರಿತು. ಮದುವೆ ನಡೆದುದು ತೆಂಗಿನ ತೋಟದ ಮಧ್ಯದಲ್ಲಿ. ಪೂಜ್ಯ ಮಾತಾಜಿಯವರು ಆ ವಾತಾವರಣ ನೋಡಿ ಪ್ರಸನ್ನರಾಗಿ, ''ಬೆಂಗಳೂರಿನ ಹವಾನಿಯಂತ್ರಿತ ಕಲ್ಯಾಣ ಮಂಟಪಗಳಿಗಿಂತಲೂ ಚೆನ್ನಾಗಿದೆ. ತೆಂಗಿನ ಗರಿಗಳು ಚಾಮರ ಬೀಸುತ್ತಿವೆ. ತಂಗಾಳಿ ಬೀಸಿ ಮುದವನ್ನು ನೀಡುತ್ತಿದೆ. ಎಂಥ ಪ್ರಶಾಂತ ಪರಿಸರ !'' ಎಂದು ಸಹರ್ಷದಿಂದ ನುಡಿದರು. ಮದುವೆಯಲ್ಲಿ ನೆನಪಿನ ಕಾಣಿಕೆಯಾಗಿ ''ವಚನ ಜ್ಯೋತಿ'' ಎಂಬ ಪುಸ್ತಕವನ್ನು ಸೋಮಶೇಖರಯ್ಯ ಪಟೇಲರು ಹಂಚಿದರು. ಮಾತಾಜಿಯವರು ಇಂಥ ಆದರ್ಶ ಆಚರಣೆಯನ್ನು ಮನತುಂಬಿ ಕೊಂಡಾಡಿದರಲ್ಲದೆ 'ಲಿಂಗದೇವ' ಪದದ ಆಳ ಮತ್ತು ವಿಸ್ತಾರಗಳನ್ನು, ಲಿಂಗಾಯತ-ವೀರಶೈವ ಸ್ಪಷ್ಟವಾಗಿ ಬೇರೆ ಬೇರೆ ಎಂಬುದನ್ನು ಪರಿಣಾಮಕಾರಿಯಾಗಿ ವಿವರಿಸಿದರು.

ಪೂಜ್ಯರು ಎಳನಡುವಿನ ವಿವಾಹ ಕಾರ್ಯಕ್ರಮಕ್ಕೆ ಬರಲಿರುವ ಸಂಗತಿ ತಿಳಿದು ಹುಳಿಯಾರಿನ ಬಸವ ಸಮಿತಿಯವರು, ಚಿಕ್ಕಮಗಳೂರು ಜಿಲ್ಲೆಯ ರಾಷ್ಟ್ರೀಯ ಬಸವ ದಳದವರು ದಿ.೨೨-೩-೨೦೦೦ರಂದು ಭವ್ಯವಾದ ಸಮಾರಂಭವನ್ನು ಏರ್ಪಡಿಸಿದ್ದರು. ಸಂಜೆ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಹುಳಿಯಾರಿನ ಗಣ್ಯ ವರ್ತಕರು, ನಗರಾಧ್ಯಕ್ಷರು ಮುಂತಾದವರು ಭಾಗಿಗಳಾದರು. ಪೂಜ್ಯ ಮಾತಾಜಿಯವರು ವಿಶೇಷ ಪ್ರವಚನ ನೀಡಿದರು.

ವರದಿ : ರಮೇಶ್ ಲಿಂಗಾಯತ

ಸಕಲ ಜೀವಾತ್ಮರಿಗೆ ಲೇಸು ಬಯಸುವವನೇ ಶರಣ

ಸಂಪಾದಕೀಯ -೨ :

ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠ ಲಿಂಗಾಯತ ಸಮಾಜಕ್ಕೊಂದು ದುಃಸ್ವಪ್ನ

ನಾವು ಸಣ್ಣ ಹುಡುಗರಿದ್ದ ಸಮಯ ; ನಮ್ಮ ಪೂರ್ವಾಶ್ರಮದ ತಂದೆ, ದೊಡ್ಡಪ್ಪ, ತಾತಂದಿರು ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠದ ಪರಮ ಭಕ್ತರು. ಶ್ರಾವಣ ಮಾಸ ಬಂತೆಂದರೆ ಒಂದೊಂದು ದಿನದ ದಾಸೋಹದ ಖರ್ಚು ಹೊರುತ್ತಿದ್ದರಲ್ಲದೆ, ಆಗ ಮಠಾಧೀಶರಾಗಿದ್ದ ಲಿಂ|| ಪೂಜ್ಯ ಶ್ರೀ ಜಗದೇವ ಜಗದ್ಗುರುಗಳ ಅನುಗ್ರಹಕ್ಕೆ ಪಾತ್ರರಾಗಿದ್ದರು. ಅವರ ಕಾಲಕ್ಕೆ ಮುರುಘಾಮಠದ ಪುಣ್ಯಮಯ ಕೀರ್ತಿ ಎಲ್ಲೆಡೆಗೆ ಹಬ್ಬಿ ಹಸರಿಸುತ್ತಿತ್ತು. ಮಠವು ಸದ್ಭಕ್ತರಿಂದ ಗಿಜಿಗುಡುತ್ತಿತ್ತು ಗುರುಗಳ ತೇಜಸ್ವೀ ಮುಖವನ್ನು ದರ್ಶಿಸುವುದು ಒಂದು ಬಗೆಯ ಸಂತೋಷ ತರುವ ಸಂಗತಿಯಾಗಿತ್ತು. ದೊಡ್ಡವರ ಜೊತೆಗೆ ಸಣ್ಣ ಮಕ್ಕಳಾದ ನಾವೂ ಹೋಗಿ ಮೌನವಾಗಿ ಓಡಾಡಿ ಆನಂದಿಸಿ ಬರುತ್ತಿದ್ದೆವು. ಈಗಿನಂತೆ ಆಗ ಗೂಂಡಾಗಿರಿಯಾಗಲಿ, ದ್ವೇಷಾಸೂಯೆಗಳಾಗಲೀ ಮಠವನ್ನು ಪ್ರವೇಶಿಸಿರಲಿಲ್ಲ. ಇಷ್ಟೇ ಅಲ್ಲ ಗುರುಗಳು ತಮ್ಮ ಪೂರ್ವಾಶ್ರಮದವರನ್ನು ಹಸ್ತಕ್ಷೇಪ ಮಾಡಲು ಬಿಟ್ಟಿಲ್ಲ ಎಂದು ಮನೆಯಲ್ಲಿ ಹಿರಿಯರು ಮಾತನಾಡುತ್ತಿದ್ದರು. ಪೂಜ್ಯ ಜಯದೇವ ಜಗದ್ಗುರುಗಳು ಕರ್ನಾಟಕದ ಅನೇಕ ಸ್ಥಳಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರಾದರೂ ಸಾತ್ತ್ವಿಕ ಮಾರ್ಗದಿಂದಲೇ ಸ್ಥಾಪಿಸಿದರೇ ವಿನಾ ಈಗಿನ ಶ್ರೀಗಳು ಮತ್ತು ಅವರ ಮೇನೇಜರರಂತೆ ಗೂಂಡಾಗಿರಿ, ಆಕ್ರಮಣ, ದೌರ್ಜನ್ಯಗಳ ಮೇಲೆ ಪ್ರಭುತ್ವವನ್ನು ವಿಸ್ತರಿಸಲಿಲ್ಲ. ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು. ಒಂದು ಬಗೆಯ ಸಾತ್ತ್ವಿಕ ತೇಜಸ್ಸು ಮಠವನ್ನು ಆವರಿಸಿಕೊಂಡಿತ್ತು. ಅವರ ನಂತರ ಪೂಜ್ಯ ಜಯವಿಭವ ಜಗದ್ಗುರುಗಳು ಪಟ್ಟಕ್ಕೆ ಬಂದರು. ಅವರು ಇದ್ದುದು ಸ್ವಲ್ಪ ಕಾಲ ಮಾತ್ರ ; ಅವರು ಹೆಚ್ಚು ಬೆಳೆಸಲು ಆಗದಿದ್ದರೂ ಹಿಂದಿನವರು ಮಾಡಿದುದನ್ನು ಮುಂದುವರಿಸಿದರು. ನಂತರ ಬಂದವರು ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು. ಅವರ ಆಗಮನದ ನಂತರ ಮಠವು ಕಳೆಗುಂದ ತೊಡಗಿತು. ನಾವು ಕಂಡ ಹಿಂದಿನ ಈರ್ವರು ಮಹಾನುಭಾವರ ಕಾಲದ ಭಕ್ತಿ, ಸಾತ್ತ್ವಿಕತೆ ಉಳಿಯದೆ ಕೇವಲ ವ್ಯಾವಹಾರಿಕ ಕೇಂದ್ರವಾಗತೊಡಗಿತು. ಮಠವನ್ನು ಅಧ್ಯಾತ್ಮಿಕವಾಗಿ ಬೆಳೆಸುವುದಕ್ಕಿಂತಲೂ ವ್ಯಾಪಾರಸ್ಥರ ಅವಲಂಬನೆಯ ಮೇಲೆ ವ್ಯವಹಾರ ಕೇಂದ್ರ ಮಾಡತೊಡಗಿದರು. ದಾಸೋಹ ನಿಂತಿತು ; ರಕ್ತ ಸಂಬಂಧಿಗಳ ಕಾರುಭಾರ ಹೆಚ್ಚಾಗ ತೊಡಗುತ್ತಿದ್ದಂತೆ ಸದ್ಭಕ್ತರು ಹೋಗುವುದನ್ನು ಕಡಿಮೆ ಮಾಡಿದರು.

ಆ ಸಮಯದಲ್ಲೇ ನಾನು ಅಧ್ಯಾತ್ಮಿಕ ಪ್ರವೃತ್ತಿ ಬೆಳೆಸಿಕೊಂಡು ವೈರಾಗ್ಯದತ್ತ ಮನಸ್ಸು ಹರಿಸಿದುದು. ಆ ಸಮಯದಲ್ಲಿ, ಸಂತಾನವಿಲ್ಲದೆ ಇದ್ದ ನಮ್ಮ ತಾಯಿಯ ಚಿಕ್ಕಪ್ಪ ಲಿಂ|| ಶಿವಣ್ಣ ವಕೀಲರು ವಿದ್ಯಾಸಂಸ್ಥೆಯ ಕಾರ್ಯದರ್ಶಿಯಾಗಿದ್ದಲ್ಲದೆ ಉದಾರವಾದ ದೇಣಿಗೆ ಸಹ ಕೊಟ್ಟಿರೆಂಬುದನ್ನು ಕೇಳಿದೆ. ''ನೀನೂ ಎಲ್ಲಿಯೂ ಹೋಗಬೇಡ ಸನ್ಯಾಸಿಯಾಗುವುದಾದರೆ

Digitalized by e-Sahithya Documentation Forum
Sponsored by Sarayu Foundation Trust

ಆಗು ; ಮನೆಯಲ್ಲಿರು. ಬೃಹನ್ಮಠದ ಶ್ರೀಗಳಿಂದ ದೀಕ್ಷೆ ಪಡೆ'' ಎಂದರು. ಜಾತಿ ಜಂಗಮರಲ್ಲದ ನಮಗೆ ಬಹುಶಃ ಅವರು ದೀಕ್ಷೆ ಕೊಡುತ್ತಿರಲಿಲ್ಲವೇನೋ. ನಾನಂತೂ ಸುತರಾಂ ಒಪ್ಪಲಿಲ್ಲ. ಮಠದಲ್ಲಿ ಎಳ್ಳಷ್ಟೂ ಅಧ್ಯಾತ್ಮಿಕ ವಾತಾವರಣ ಇರಲಿಲ್ಲ ; ವಚನ ಸಾಹಿತ್ಯದ ಜ್ಞಾನವಂತೂ ಎಷ್ಟೂ ಇರಲಿಲ್ಲ. ಸಂಸ್ಕೃತ ಶ್ಲೋಕಗಳಿಂದಲೇ ಹಿಂದಿನ ಶ್ರೀಗಳು ತಮ್ಮ ಭಾಷಣವನ್ನು ಪ್ರಾರಂಭಿಸುತ್ತಿದ್ದುದು. ಪೂಜ್ಯ ಶ್ರೀ ಲಿಂಗೈಕ್ಯ ಲಿಂಗಾನಂದ ಮಹಾಸ್ವಾಮಿಗಳಿಂದ ದೀಕ್ಷೆ ಪಡೆದ, ಅಧ್ಯಾತ್ಮಿಕ ಕ್ಷೇತ್ರದಲ್ಲಿ ಮುಂದೆ ಸಾಗಿದೆ. ನಾನು ಅದೇ ಆಗ ೧೯೬೫ ಮನೆಯನ್ನು ತ್ಯಜಿಸುವ ಸಿದ್ಧತೆಯಲ್ಲಿದ್ದೆ. ಓ.ಎನ್.ಲಿಂಗಣ್ಣನವರು ಬರೆದ ಒಂದು ಪುಸ್ತಕವನ್ನು ಬೃಹನ್ಮಠದಿಂದ ಪ್ರಕಾಶಿಸಿದ್ದರು. ಆ ಹೊತ್ತಿಗೆ ವಚನ ಸಾಹಿತ್ಯ ಅಧ್ಯಯನ ಆರಂಭಿಸಿ ಕೆಲವಾರು ತಿಂಗಳುಗಳಾಗಿದ್ದವು. ಪೂಜ್ಯ ಅಪ್ಪಾಜಿಯವರ ಪುಸ್ತಕಗಳು ಬಹಳ ಪ್ರಭಾವ ಬೀರುತ್ತಿದ್ದವು. ಓ.ಎನ್.ಲಿಂಗಣ್ಣಯ್ಯನವರ ಆ ಪುಸ್ತಕದ ಹೆಸರು ಮರೆತಿದೆ, ''ಶೂನ್ಯ ಸಿಂಹಾಸನದ ಪ್ರಭಾವ'' ಎಂದಿರಬಹುದೇನೋ, ಅದನ್ನು ಓದಿ ಗಾಬರಿಗೊಂಡೆ. ಏಕೆಂದರೆ ಜಂಗಮವು ಜಾತಿ ಎಂದು, ಶ್ರೇಷ್ಠ ಜಾತಿ ಎಂದು ಪ್ರತಿಪಾದಿಸಲಾಗಿತ್ತಲ್ಲದೆ ಭಕ್ತ ವರ್ಗದವರು ಮಠಾಧಿಕಾರಿಗಳಾಗಿರುವ ಸಿದ್ಧಗಂಗಾ, ಸುತ್ತೂರು, ಸಿರಿಗೆರೆ ಮಠಗಳವರನ್ನು ಕೆಟ್ಟ ಪದಗಳಿಂದ ನಿಂದಿಸಲಾಗಿತ್ತು. ಅಧ್ಯಾತ್ಮಿಕ ಪ್ರವೃತ್ತಿಯ ನನಗೆ ಅಂಥ ಕುಶಬ್ದಗಳು ಆಘಾತವನ್ನುಂಟು ಮಾಡಿದುವು. ಎಂಥಾ ಶ್ರೀಮಂತ ಮಠವಾದರೇನು ಹೃದಯ ಶ್ರೀಮಂತಿಕೆ ಇಲ್ಲದ ಮೇಲೆ ಎಂಬ ಜಿಗುಪ್ಸೆ ಮೂಡಿತ್ತು. ಮುಂದೆ ಆ ಮಠ ದಿನದಿನಕ್ಕೂ ಕಳಾಹೀನವಾಗಿ ಬರಿ ಒಕ್ಕಲುತನ ಮತ್ತು ವ್ಯಾಪಾರದ ಕೇಂದ್ರವಾಗತೊಡಗಿತು. ಆದರೆ ಒಂದು ವಿಷಯ ಮನನಾರ್ಹ. ಲಿಂಗಾಯತ ಸಮಾಜದಲ್ಲಿ ದೀಕ್ಷಾವಂತರಾಗಿ ಬಂದು ಸೇರ್ಪಡೆಯಾಗಿದ್ದ ವಿವಿಧ ಉಪಪಂಗಡಗಳಲ್ಲಿ ಕೆಲವು ಜಾತಿಗಳವರನ್ನು ಶ್ರೇಷ್ಠವೆಂದು ಭಾವಿಸಿ ಮುರುಘಾಮಠವು ವರ್ತಿಸತೊಡಗಿದಾಗ ದೊಡ್ಡ ವಿಘಟನೆ ಶುರುವಾಯಿತು. ಛಿದ್ರ ವಿಚ್ಛಿದ್ರಗೊಂಡ ಇಂದಿನ ಲಿಂಗಾಯತ ಸಮಾಜದ ಸ್ಥಿತಿಗೆ ಅಂದಿನ ಚಿತ್ರದುರ್ಗದ ಬೃಹನ್ಮಠ ಪ್ರಮುಖ ಕಾರಣ ಎಂದರೆ ಒಂದು ಐತಿಹಾಸಿಕ ಸತ್ಯವನ್ನು ನುಡಿದಂತಾಗುವುದು. ಕೆಲವು ಮಡಿವಂತ ಜಾತಿಗಳವರು ಸ್ವಧರ್ಮೀಯರಾಗಿದ್ದವರನ್ನು ಇಷ್ಟಲಿಂಗ ಧರಿಸಿದವರನ್ನು ಒಳಗೆ ಊಟಕ್ಕೆ ಬಿಟ್ಟುಕೊಳ್ಳದಿರುವುದು, ಅವರಿಗಾಗಿ ಪ್ರತ್ಯೇಕ ಲೋಟಗಳನ್ನು ತಟ್ಟೆಗಳನ್ನು ಇಟ್ಟು ಪಡಸಾಲೆಯಲ್ಲಿ ಕುಳ್ಳಿರಿಸಿ ಊಟಕ್ಕಿಟ್ಟು, ಅವರು ಎದ್ದು ಹೋದ ನಂತರ ಆ ಜಾಗವನ್ನು ತೊಳೆಸುತ್ತಿದ್ದರಂತೆ. ಈ ಜಾತೀಯ ಮಡಿವಂತಿಕೆ ಅನೇಕ ಉಪಜಾತಿಗಳವರನ್ನು ಕೆರಳಿಸಿ ಪ್ರತ್ಯೇಕ ಮಠಗಳನ್ನು ನಿರ್ಮಿಸಲು ಪ್ರಚೋದನೆ ನೀಡಿತು. ಮಾತ್ರವಲ್ಲ ಜಾತಿ (ಜಂಗಮ) ಪುರೋಹಿತರ ಭೇದಭಾವದ ವರ್ತನೆ ಪ್ರತಿಭಟಿಸಿ ತಮ್ಮ ತಮ್ಮ ಜಾತಿಗಳಲ್ಲೇ ಪುರೋಹಿತರನ್ನು ಅನೇಕರು ಮಾಡಿಕೊಳ್ಳತೊಡಗಿದರು.

ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ನಂತರ ಈಗಿನ ಶ್ರೀ ಶಿವಮೂರ್ತಿ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರನ್ನು ಉತ್ಸವ ಮೂರ್ತಿಯನ್ನಾಗಿ ಮಾಡಿ ಸ್ಥಿರಮೂರ್ತಿಯಾಗಿ ಆಡಳಿತಾಧಿಕಾರಿಯಾಗಿ ಶ್ರೀ ರಾಜನ್‌ರವರೂ ಅಧಿಕಾರದ ಗದ್ದುಗೆ ಏರಿದರು. ಶ್ರೀಗಳು

ಸೂತ್ರದ ಗೊಂಬೆಯಾದರೆ ಶ್ರೀ ರಾಜನ್‌ರವರೇ ಸೂತ್ರಧಾರರು ಎಂಬ ವದಂತಿಗಳು ಹಬ್ಬುತ್ತಿವೆ. ನಾವುಗಳು ಅಂದುಕೊಳ್ಳುತ್ತಿದ್ದವು ''ವಯಸ್ಸಾದವರು ಹಿರಿಯ ತಲೆಮಾರಿನವರು ಪುರಾತನ ನಂಬಿಕೆ ಇಟ್ಟುಕೊಂಡಿರುತ್ತಾರೆ. ಅವರ ನಂತರ ಈಗಿನ ಕಾಲದವರು ಪಟ್ಟಕ್ಕೆ ಬಂದರೆ ಮಠಗಳಲ್ಲಿ ಪ್ರಗತಿಪರ ಚಿಂತನೆ, ಬದಲಾವಣೆ ಕಾಣಿಸಿಕೊಳ್ಳುವುದು.'' ಎಂದು. ಆರಂಭದ ದಿನಗಳಲ್ಲಿ ಶ್ರೀ ರಾಜನ್ ಅವರ ನಡೆ-ನುಡಿ-ವರ್ತನೆ ಆಶಾದಾಯಕವಾಗಿ ಕಂಡಿದ್ದವು. ಏಕೆಂದರೆ, ಮಠಕ್ಕೆ ನೀವು ಬರಲೇಬೇಕು ಎಂದು ಆಗ್ರಹದ ಆಮಂತ್ರಣ ನೀಡಿ, ಬರಮಾಡಿಕೊಂಡಿದ್ದರು. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಒಂದು ರೇಷ್ಮೆಯ ಮಡಿವಸ್ತ್ರ ೧೦೦೧-೦೦ ರೂ. ದೊಡ್ಡ ತಟ್ಟೆಯಲ್ಲಿ ಹಣ್ಣು ಇಟ್ಟು ಕೊಡಲು ಶ್ರೀ ರಾಜನ್ ಅವರೇ ಪ್ರೇರಕರು ಎಂದು ನನ್ನೊಡನೆ ಬಂದಿದ್ದ ಶರಣ ಲಿಂಗಣ್ಣ ಮತ್ತು ಶರಣ ಬಿ.ವಿ.ಸತ್ಯನಾರಾಯಣಶೆಟ್ಟರು ಹೇಳಿದ್ದರು. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಮಾತಿನಲ್ಲಿ ಅಂದು ವಿಶಾಲತೆ ಇತ್ತು. ''ನೀವೀಗ ದೊಡ್ಡವರಾಗಿ ಬೆಳೆದಿದ್ದೀರಿ'' ಎಂದು ಕೈಯನ್ನು ಹರಡಿ ಉದ್ಗರಿಸಿದರು ; ''ಮಠಕ್ಕೆ ಬಂದು ಹೋಗುತ್ತಿರಿ. ಎಲ್ಲೆಡೆ ಕೀರ್ತಿ ಹಬ್ಬಿದೆ. ನಮ್ಮ ಊರಿನವರು ಎಂದು ನಮಗೂ ಸಂತೋಷ'' ಎಂದರು. ಈ ಒಳ್ಳೆಯ ಮಾತುಗಳಿಗೆ ರಾಜನ್ ಅವರೇ ಕಾರಣರಿರಬಹುದು ಎಂದುಕೊಂಡೆವು.

''ಬುದ್ಧಿ, ತಪ್ಪು ಭಾವಿಸಬೇಡಿ, ತಾವು ವಯಸ್ಸಿನಲ್ಲಿ ಹಿರಿಯರು. ಈ ಪಂಚಾಂಗ ನೋಡುವುದು ನಮ್ಮ ಧರ್ಮವಲ್ಲ. ಈ ಪದ್ಧತಿಯನ್ನು ತಪ್ಪಿಸಬೇಕು...'' ಎಂದೆ ಪಕ್ಕದಲ್ಲಿದ್ದ ಪಂಚಾಂಗ ನೋಡಿ. ''ಹಿಂದಿನಿಂದ ಬಂದ ಪದ್ಧತಿ, ಸುಲಭವಾಗಿ ಬಿಡಲು ಆಗುವುದೆ ?'' ಎಂದರು.

''ಇಷ್ಟಲಿಂಗ ಪೂಜೆಗೆ ಸಂಸ್ಕೃತ ಶ್ಲೋಕಗಳನ್ನು ಬಳಸುವುದು ಸಹ ನಮ್ಮ ಧರ್ಮವಲ್ಲ; ಈ ಬಗ್ಗೆ ಪುಸ್ತಕವನ್ನು ಸಹ ಬರೆದಿದ್ದೇವೆ.'' ಎಂದು ದೇವಪೂಜಾ ವಿಧಾನ ಪುಸ್ತಕ ಅರ್ಪಿಸಿದೆ.

ಹೀಗೆ ಆರಂಭದ ದಿನಗಳಲ್ಲಿ ಉತ್ಸಾಹದಾಯಕ ಪ್ರಗತಿಪರ ಮನೋಭಾವ ಹೊಂದಿದ್ದ ರಾಜನ್ ಅವರು ಈಗ ಸಂಪೂರ್ಣ ಬದಲಾಗಿದ್ದಾರೆ. ಸರ್ವಾಧಿಕಾರಿ ಮನೋಭಾವ, ದೌರ್ಜನ್ಯ ಪೂರ್ಣ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ ಎಂದು ಜನರು ಬಗೆಬಗೆಯಾಗಿ ಮಾತನಾಡುವುದನ್ನು ಕಂಡಾಗ ಆತ ಹೀಗಾದರೆ ? ಹಣ, ಅಧಿಕಾರದ ಅಮಲು ಎಷ್ಟು ಕೆಟ್ಟದು?! ಎನಿಸುತ್ತದೆ. ವಿಶ್ವಗುರು ಬಸವಣ್ಣನವರು ನಮಗೆ ಆದರ್ಶ ಮೂರ್ತಿ.

ಭಕ್ತರ ಭಾವದಲ್ಲಿ ಸುಳಿವ ಸುಳುಹು
ವಿರಕ್ತರ ಜ್ಞಾನದಲ್ಲಿ ಹೊಳೆವ ಕಳೆಯು ನೀನೆಯಯ್ಯಾ
ನಮ್ಮ ಕಟ್ಟಿನ ನೇಮದ ನಿಷ್ಠೆ ನೀನೆಯಯ್ಯಾ
ಅಮರೇಶ್ವರ ಲಿಂಗದ ಒಡಲು ಸಂಗನಬಸವಣ್ಣ.

-ಆಯ್ದಕ್ಕಿ ಮಾರಯ್ಯ

ಅವರು ಭಕ್ತರು ಅರ್ಥಾತ್ ಗೃಹಸ್ಥರಿಗೆ ಆದರ್ಶ ಗೃಹಸ್ಥರು. ವಿರಕ್ತರಿಗೆ ಆದರ್ಶ ವಿರಕ್ತರು. ಗೃಹಸ್ಥರಾದ ರಾಜನ್ ಇರಲಿ, ವಿರಕ್ತರಾದ ಶ್ರೀ ಶಿವಮೂರ್ತಿ ಸ್ವಾಮಿಗಳಿರಲಿ ಅಪ್ಪ

Digitalized by e-Sahithya Documentation Forum
Sponsored by Sarayu Foundation Trust

ಬಸವಣ್ಣನವರನ್ನು ಜೀವನಕ್ಕೆ ಮಾದರಿಯಾಗಿ ಇಟ್ಟುಕೊಳ್ಳಬೇಕು. ಧರ್ಮಪಿತರಿಗೆ ಅತ್ಯುನ್ನತ ಅಧಿಕಾರವಾದ ಪ್ರಧಾನಿ ಪದವಿ ಇತ್ತು ; ಅವರು ಮನಸ್ಸು ಮಾಡಿದರೆ ದಂಡನಾಯಕರಾದ ಅವರಿಗೆ ಸೇನೆ ಸದಾ ಲಭ್ಯವಿರುತ್ತಿತ್ತು. ಆದರೆ ಕಳ್ಳರು ಆಕಳನ್ನು ಕದ್ದೊಯ್ದಾಗ ಕಳ್ಳರನ್ನು ಸದೆಬಡಿಯಲು ಸೈನ್ಯವನ್ನು ಕಳಿಸಲಿಲ್ಲ ; ಕಳ್ಳನಾದ ಬೊಲ್ಲನು ನೀಲಾಂಬಿಕಾ ತಾಯಿಯ ಕಿವಿಯೋಲೆ ಕದ್ದು ಓಡಿ, ಸಿಕ್ಕಿಬಿದ್ದಾಗ ಭಟರನ್ನು ಬಳಸಿ ಬಡಿಸಲಿಲ್ಲ. ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಲಿಂಗದೇವನಲ್ಲದೆ ಮತ್ತಾರೂ ಅಲ್ಲ ಎಂದು ಕಳ್ಳನಿಗೆ ಒಡವೆ ಕೊಡಿಸಿ ಪರಿವರ್ತಿಸಿದರು. ಇಂಥ ಆದರ್ಶಮೂರ್ತಿ ಬಸವ ಗುರುವಿನ ಹೆಸರನ್ನು ಹೊತ್ತ ರಾಜನ್, ಬಸವ ಗುರುವಿನ ಪವಿತ್ರನಾಮವನ್ನು ಜೋಡಿಸಿ ನಡೆಸುವ ಬಸವ ಕೇಂದ್ರದವರು ಪ್ರಶಾಂತವಾಗಿ ೫೫ ದಿವಸಗಳ ಕಾಲ ಪ್ರವಚನ ಮಾಡುತ್ತಿದ್ದ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಮೇಲೆ ಮತ್ತು ಅವರ ಸಹವರ್ತಿಗಳಾದ ಮುಗ್ಧ ಸಾಧಕಿಯರ ಮೇಲೆ ದಬ್ಬಾಳಿಕೆ, ದೌರ್ಜನ್ಯ ನಡೆಸಿ ಸಹಸ್ರಾರು ಜನರು ಆನಂದದಿಂದ ಕೇಳುತ್ತಿದ್ದ ಪ್ರವಚನವನ್ನು ನಿಲ್ಲಿಸಿದ ದೌರ್ಜನ್ಯಕ್ಕೆ ಧಿಕ್ಕಾರ. ಧರ್ಮ ಪ್ರಚಾರ ಮಠಾಧೀಶರ ಕರ್ತವ್ಯ. ಭಕ್ತರು ಕೋಟಿಗಟ್ಟಳೆ ಹಣ-ಆಸ್ತಿ ಮಠಗಳಿಗೆ ಕೊಟ್ಟುದು ಧರ್ಮಪ್ರಚಾರ ಮಾಡಲೆಂದು. ಅನೇಕ ಮಠಗಳು ಆ ಕರ್ತವ್ಯ ಮಾಡದೆ ಇರುವಾಗ ಆರತಿ ಹಣ ಸಂಗ್ರಹಿಸಿ, ಖರ್ಚು-ವೆಚ್ಚ ಸರಿದೂಗಿಸಿಕೊಂಡು ಜನ ಕೊಡುವ ಕಾಯಕದ ಹಣದಿಂದ ಸಾಹಿತ್ಯ ಪ್ರಕಟಿಸಿ, ಮೈಯಲ್ಲಿನ ಶಕ್ತಿ-ರಕ್ತ ಸುಟ್ಟು ಮನೆಮನೆಗೆ ನಮ್ಮ ಸಾಧಕಿಯರು ತಿರುಗಿ ವಚನ ಸಾಹಿತ್ಯ ಪ್ರಚಾರವನ್ನು ಮಾಡುತ್ತಿರುವುದನ್ನು ಸಹಿಸಲಾಗದೆ ಗೂಂಡಾಗಳನ್ನು ತಂದು ಪೋಲೀಸರ ಬೆಂಬಲದಿಂದ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯವೆಸಗಿ ಪ್ರವಚನ ನಿಲ್ಲಿಸಿರುವ ಹೇಡಿತನದ ಕೃತ್ಯಕ್ಕೆ ಆಡಳಿತಾಧಿಕಾರಿ ರಾಜನ್, ಬೃಹನ್‌ಮಠಾಧೀಶ ಶ್ರೀ ಶಿವಮೂರ್ತಿ ಸ್ವಾಮಿಗಳು ನಾಚಿಕೆ ಪಟ್ಟುಕೊಳ್ಳಬೇಕು ಇವರಿಬ್ಬರ ಆಸೆ, ದುರಾಸೆ, ಆಕ್ರಮಣಕಾರಿ ಪ್ರವೃತ್ತಿ ನೋಡಿದಾಗ

ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ?
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ?

ಎಂಬ ಶರಣೆ ಆಯ್ದಕ್ಕಿ ಲಕ್ಕಮ್ಮನ ಮಾತನ್ನು ಹೀಗೆ ಹೇಳಬೇಕಾದೀತು :

ಆಸೆ ಎಂಬುದು ಮಠಾಧೀಶರಿಗಲ್ಲದೆ ಶರಣರಿಗುಂಟೆ ?
ರೋಷವೆಂಬುದು ಮಠಾಧೀಶರ ಬೆಂಬಲಿಗರಿಗಲ್ಲದೆ ಶರಣರಿಗುಂಟೆ ?

ಸುತ್ತೂರು ಜಗದ್ಗುರುಗಳ ಆರ್ಥಿಕ ಸ್ಥಿತಿ, ಶೈಕ್ಷಣಿಕ ಕ್ಷೇತ್ರದ ಸಾಧನೆ ಎಲ್ಲ ಲಿಂಗಾಯತ ಮಠಗಳವರನ್ನೂ ಮೀರಿಸುವಂತಿದೆ. ಆದರೆ ಅವರು ತಮಗೆ ಬೇಡವಾದ ವಿಷಯವಿದ್ದರೂ ಮೌನದಿಂದಿರುವರೇ ವಿನಾ ಚಿತ್ರದುರ್ಗದ ಬೃಹನ್ಮಠದವರಂತೆ ಗೂಂಡಾಗಿರಿಗೆ ಯತ್ನಿಸಿದುದನ್ನು ಎಲ್ಲೂ ಕಾಣುವುದಿಲ್ಲ, ಕೇಳಿಲ್ಲ. ಮೊದಲಿನಿಂದಲೂ ಸತ್ಯವನ್ನು, ತತ್ತ್ವವನ್ನು ನಿರ್ಭಯವಾಗಿ ಹೇಳುವುದು ಪೂಜ್ಯ ಅಪ್ಪಾಜಿಯವರ ಸ್ವಭಾವ ಅದೇ ಸಂಸ್ಕಾರದಲ್ಲಿ ತರಬೇತಿ ಹೊಂದಿದ ನಮ್ಮ ಸ್ವಭಾವ. ನಮ್ಮ ವಿಚಾರಗಳನ್ನು ನಾವು ನಿಂದೆಯ ರೂಪದಲ್ಲಿ ಮಾಡುವುದಿಲ್ಲ, ಅಪಪ್ರಚಾರದ ಕರಪತ್ರ ಮುದ್ರಿಸುವುದಿಲ್ಲ ; ಹಣ ಕೊಟ್ಟು ದುರ್ಜನರನ್ನು,

ಗೂಂಡಾಗಳನ್ನು ಕಳಿಸಿ ಕಾರ್ಯಕ್ರಮಗಳನ್ನು ಕೆಡಿಸಲು ಹೋಗುವುದಿಲ್ಲ. ಅನೇಕ ಮಠಗಳ ಪರಂಪರೆ ಕುರಿತು, ತಪ್ಪು ಆಚರಣೆ ಕುರಿತು ವಿಮರ್ಶಿಸಿ ನಾವು ಬರೆಯುತ್ತೇವೆ. ಆದರೆ ಯಾವ ಮಠಗಳವರೂ ನಮ್ಮ ಮೇಲೆ ಗೂಂಡಾಗಿರಿಗೆ ಎಳೆಸಲಿಲ್ಲ. ಇಂಥ ಕುಕೃತ್ಯವನ್ನು ಮಾಡಿಸಿದ ಚಿತ್ರದುರ್ಗ ಬೃಹನ್ಮಠದ ಶ್ರೀಗಳು ಮತ್ತು ಅವರ ಆಡಳಿತಾಧಿಕಾರಿ ರಾಜನ್‌ರ ದೌರ್ಜನ್ಯಶೀಲ ಪ್ರವೃತ್ತಿ ಖಂಡನಾರ್ಹ.

ಪೂಜ್ಯ ಸುತ್ತೂರು ಮಠಾಧೀಶರು ದೆಹಲಿಯಲ್ಲಿ ತಮ್ಮದೇ ಆದ ಇಂಜನಿಯರಿಂಗ್ ಕಾಲೇಜನ್ನು, ಜನರನ್ನು ಹೊಂದಿದ್ದಾರೆ. ಆದರೆ ಯಾವುದೇ ರೀತಿ ನಮ್ಮ ಸಮ್ಮೇಳನದ ಪ್ರಯತ್ನ ಕೆಡಿಸಲು ಯತ್ನಿಸಲಿಲ್ಲ. ಆದರೆ ಚಿತ್ರದುರ್ಗ ಮಠದವರು ಅಲ್ಲಿ ಸಹ ಬಗೆಬಗೆಯ ಕೈವಾಡ ನಡೆಸಿದರು. ಸಿದ್ಧಗಂಗೆಯ ಪೂಜ್ಯ ಮಠಾಧೀಶರು ವಯೋವೃದ್ಧ ಮಹಾನ್ ಚೇತನ. ಅವರ ವ್ಯಕ್ತಿತ್ವ ಪ್ರಭಾವದ ಮುಂದೆ ಚಿತ್ರದುರ್ಗದ ಬೃಹನ್ಮಠದವರು ಏನೂ ಅಲ್ಲ. ಆದರೆ ಯಾವ ಊರಲ್ಲಿಯೇ ಪ್ರವಚನವನ್ನು ನಾವು ಮಾಡಲಿ, ತುಮಕೂರಿನಲ್ಲೇ ೨ ಸಲ ಮಾಡಿದ್ದೇವೆ ಎಂದೂ ನಮಗೆ ಕೆಡುಕು ಮಾಡಲಿಲ್ಲ ಅಥವಾ ಪ್ರವಚನ ಕೆಡಿಸಬೇಕೆಂದು ಅಸಂಖ್ಯಾತ ಅವರ ಅಭಿಮಾನಿಗಳಿದ್ದರೂ ಅವರು ಯಾರಿಗೂ ಹೇಳಲಿಲ್ಲ. ಎಂಥ ಸೌಜನ್ಯ -ಸಜ್ಜನಿಕೆಗಳ ಸಾಕಾರ. ಮೈಸೂರಲ್ಲಿ ರಾಷ್ಟ್ರೀಯ ಬಸವ ದಳವಿದೆ. ತುಮಕೂರಲ್ಲಿ ರಾಷ್ಟ್ರೀಯ ಬಸವ ದಳವಿದೆ, ಧಾರವಾಡದಲ್ಲಿದೆ. ಅಲ್ಲೆಲ್ಲ ಪ್ರಭಾವಶಾಲಿಗಳಾಗಿ ಸುತ್ತೂರು ಜಗದ್ಗುರುಗಳು, ಸಿದ್ಧಗಂಗಾ ಪೂಜ್ಯರು, ಧಾರವಾಡ ಮುರುಘಾ ಮಠದವರು ಇದ್ದರೂ ಇವರಾರೂ ರಾಷ್ಟ್ರೀಯ ಬಸವ ದಳಗಳ ಯಾವ ಕಾರ್ಯಕ್ರಮಕ್ಕೂ ತೊಂದರೆ ಕೊಡುತ್ತಿಲ್ಲ. ಎಲ್ಲ ರಾಷ್ಟ್ರೀಯ ಬಸವ ದಳಗಳಿಗೆ ತೊಂದರೆ ಕೊಡುವುದು ಒಡೆಯುವುದನ್ನು ಮಾಡುವ ಗುತ್ತಿಗೆಯನ್ನು ಚಿತ್ರದುರ್ಗ ಬೃಹನ್ಮಠದವರೇ ತೆಗೆದುಕೊಂಡಂತೆ ತೋರುತ್ತದೆ. ಬರೀ ಬಸವ ದಳಗಳಷ್ಟೇ ಅಲ್ಲ ಇತರರ ಮಠಗಳ ವ್ಯವಹಾರದಲ್ಲೂ ಕೈಹಾಕಿ ಆ ಮಠಗಳಿಗೆ ವಿಪತ್ತು ತರುವ ಹೇಯ ಕೆಲಸದ ಹಿಂದೆ ಬೃಹನ್ಮಠದ ಶ್ರೀಗಳು ಮತ್ತು ಅದರ ಆಡಳಿತಾಧಿಕಾರಿಯ ಕೈವಾಡವನ್ನು ಜನರು ಸುಲಭವಾಗಿ ಗುರುತಿಸಬಲ್ಲರು. ಇದೇ ರೀತಿ ಹಸ್ತಕ್ಷೇಪವನ್ನು ಮಾಡಿ ಮೂರು ಸಾವಿರ ಮಠದ ಪರಿಸ್ಥಿತಿಯನ್ನು ಗಂಭೀರ ಹಂತಕ್ಕೆ ಒಯ್ದಾಗ ಪೂಜ್ಯ ಸುತ್ತೂರು ಜಗದ್ಗುರುಗಳು ವಿವೇಕಪೂರ್ಣ ನಿಲುವಿನಿಂದ ಪರಿಹಾರ ಹುಡುಕಿ ಮಠದ ಹಿತರಕ್ಷಿಸಿ, ಅಭಿನಂದನೆಗೆ ಪಾತ್ರರಾದರು. ಬಸವ ಕೇಂದ್ರ ಎಂಬ ಸಂಸ್ಥೆಯನ್ನು ತೆರೆದು ಕಂಡಕಂಡಲ್ಲಿ ಕುಕೃತ್ಯಗಳನ್ನು ಮಾಡಿಸುತ್ತ, ಮದುವೆ ಮುಂತಾದ ಮಂಗಲ ಸಮಾರಂಭಗಳಿಗೆ ಸಹ ಜನರನ್ನು ಕಳಿಸಿ ಅನ್ಯರ ಬದುಕಿನಲ್ಲಿ ಹಸ್ತಕ್ಷೇಪ ಮಾಡುವ ಹೇಯ ಕೃತ್ಯಗಳನ್ನು ಮಾಡಿಸುವ ದುಷ್ಟತನಕ್ಕೆ ಬೃಹನ್ಮಠದ ಶ್ರೀಗಳು ಮತ್ತು ಅವರ ಆಡಳಿತಾಧಿಕಾರಿ ರಾಜನ್ ಪೂರ್ಣವಿರಾಮ ಹಾಕಿ, ತಾವು ಮಾಡಿರುವ ಕುಕೃತ್ಯಗಳಿಗಾಗಿ ಪಶ್ಚಾತ್ತಾಪ ಪಟ್ಟು, ಇನ್ನು ಮುಂದಾದರೂ ಇಂಥ ಹೇಯ ಕೃತ್ಯಗಳನ್ನು ಎಸಗದೆ ನಿಜವಾದ ಬಸವ ಪಥಿಕರಾಗಲೆಂದು ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರಲ್ಲಿ ಪ್ರಾರ್ಥಿಸುತ್ತೇವೆ.

೨೬-೩-೨೦೦೦

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

Digitalized by e-Sahithya Documentation Forum
Sponsored by Sarayu Foundation Trust

ದಾವಣಗೆರೆಯಲ್ಲಿ ವಿಶ್ವಧರ್ಮ ಪ್ರವಚನ

ಕೂಡಲ ಸಂಗಮದ ಬಸವ ಧರ್ಮ ಪೀಠದ ಕೋಶಾಧ್ಯಕ್ಷರೂ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ಅಧ್ಯಕ್ಷರೂ ಆದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ದಾವಣಗೆರೆ ನಗರದ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ದಿ.೨೪-೧-೨೦೦೦ದಂದು ವಿಶ್ವಧರ್ಮ ಪ್ರವಚನವನ್ನು ಆರಂಭಿಸಿದರು. ಅವರ ಅಮೋಘ ವಾಣಿಯು ದಿನದಿನಕ್ಕೂ ಅಧಿಕಧಿಕ ಸಂಖ್ಯೆಯಲ್ಲಿ ಸದ್ಭಕ್ತರನ್ನು ಆಕರ್ಷಿಸಿತು.

ಪ್ರಾರಂಭೋತ್ಸವದಂದು ಶರಣ. ಡಾ॥ ಆರ್.ಡಿ.ಪುರಂತರ್ ಅವರ ಅಧ್ಯಕ್ಷತೆಯಲ್ಲಿ ಪತ್ರಿಕಾಕರ್ತರೂ, ಅಂಕಣಕಾರರೂ ಆದ ಶರಣ ಎ.ಜಿ.ವಿರುಪಾಕ್ಷಪ್ಪನವರು ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪೋಲೀಸ್ ಅಧಿಕಾರಿಗಳಾದ ಶರಣ. ಲಕ್ಷಣ ಮ್ಯಾಗೇರಿ -ಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶರಣ ಹಳ್ಳೂರ ಸಿದ್ದಪ್ಪನವರು ಅತಿಥಿಗಳಾಗಿ ಆಗಮಿಸಿದ್ದರು.

ಚನ್ನ ಹುಣ್ಣಿಮೆ: ದಿ. ೧೯-೨-೨೦೦೦; ಮಾಘ ಪೌರ್ಣಮೆಯಂದು ಚನ್ನಬಸವಣ್ಣನವರ ಲಿಂಗೈಕ್ಯ ಸಂಸ್ಮರಣೆಯ ನಿಮಿತ್ತ ಚನ್ನ ಹುಣ್ಣಿಮೆ, ಪ್ರವಚನ ವೇದಿಕೆಯ ಮೇಲೆ ಚನ್ನಬಸವಣ್ಣನವರನ್ನು ಕುರಿತ ವಿಶೇಷ ಪ್ರವಚನ. ನಂತರ ಬೆಳದಿಂಗಳಲ್ಲಿ ಪ್ರಸಾದ. ಡಾ॥ ಪುರಂತರ ಆಸ್ಪತ್ರೆಯ ವಿಸ್ತಾರವಾದ ಮಹಡಿಯ ಮೇಲೆ ಸಾಮೂಹಿಕವಾಗಿ ಗಣಭೋಜನವನ್ನು ಮಾಡಿ ಎಲ್ಲರೂ ಹರ್ಷಿಸಿದರು.

ಗಣಮೇಳ: ದಿ. ೪-೩-೨೦೦೦ ಶಿವರಾತ್ರಿಯಂದು ಶರಣ ಗಣ ಮೇಳ ದಾವಣಗೆರೆಯ ಜನಕ್ಕೆ ಒಂದು ಹೊಸ ಅನುಭವ. ಶಾಮಿಯಾನಾ ಮಂಟಪದಲ್ಲಿ ಕುಳಿತು ಸಾಮೂಹಿಕ ಪ್ರಾರ್ಥನೆ ಮಾಡಿದರು ; ಸಂಜೆ ಪ್ರವಚನದಲ್ಲಿ ಭಾಗಿಗಳಾಗಿ ಸಾಮೂಹಿಕ ಪೂಜೆ ಮತ್ತು ಮಂತ್ರಜಪದಲ್ಲಿ ಭಾಗಿಗಳಾದರು.

ಪೂಜ್ಯ ಮಾತಾಜಿಯವರ ವರ್ಧಂತಿ : ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ೫೫ನೆಯ ವರ್ಧಂತಿಯನ್ನು ವಿಶ್ವಧರ್ಮ ಪ್ರವಚನ ವೇದಿಕೆಯ ಮೇಲಿಂದ ಆಚರಿಸಲಾಯಿತು. ಬೆಳಿಗ್ಗೆ ಡಾ॥ ಪುರಂತರ ಆಸ್ಪತ್ರೆಯ ಆವರಣದಲ್ಲಿ ಬಸವೇಶ್ವರರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಒಂದು ಸಾವಿರದ ಎಂಟು ಬಸವ ಮಂತ್ರಗಳನ್ನು ಪಠಿಸಿ ಪುಷ್ಪಾರ್ಚನೆ ನೆರವೇರಿಸಲಾಯಿತು. ಸಂಜೆ ಪ್ರವಚನದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಜೀವನ ಸಾಧನೆ-ಸಂದೇಶ ಕುರಿತು ಜಗದ್ಗುರು ಮಾತೆ ಗಂಗಾದೇವಿಯವರು ವಿಶೇಷ ಪ್ರವಚನ ನೀಡಿದರು.

ಪ್ರತಿ ಭಾನುವಾರ ಬೇರೆ ಬೇರೆ ಸ್ಥಳಗಳಲ್ಲಿ ಸಾಮೂಹಿಕ ಪ್ರಾರ್ಥನೆ-ಪ್ರವಚನಗಳು ನೆರವೇರಿದವು. ದಿ. ೨೬-೩-೨೦೦೦ರಂದು ಪ್ರವಚನ ಕಾರ್ಯಕ್ರಮವು ಮಂಗಲಗೊಳ್ಳಬೇಕೆಂದು ನಿಯೋಜಿಸಲಾಗಿತ್ತು. ಮಹಿಳಾ ಜಗದ್ಗುರುಗಳ ಪ್ರತಿಭೆ, ಪ್ರಗತಿ, ಜನರಲ್ಲಿ ಬೆಳೆಯುತ್ತಿದ್ದ ಭಕ್ತಿ, ಜನಪ್ರಿಯತೆ ಕಂಡು ಕರುಬಿದ ತರಲ ಕೇಂದ್ರ ಮತ್ತು ಜಗಳದ ಬಳಗಗಳವರು ★ ದುಷ್ಕರ್ಮಿಗಳನ್ನು ಕರೆತಂದು, ಪೋಲೀಸರ ಬೆಂಬಲದೊಡನೆ ಹಲ್ಲೆ ಮಾಡಿ ಪ್ರವಚನ ಕಾರ್ಯಕ್ರಮವನ್ನು ನಿಲ್ಲಿಸಿದ ಕುಕೀರ್ತಿಗೆ ಪಾತ್ರರಾದರು.

ವರದಿ : ಶಿವಕುಮಾರ ಥಾಕುಳಗೆ

★ ವಿವರಣೆಗಾಗಿ ಇದೇ ಸಂಚಿಕೆಯ ೩ನೇ ಪುಟ ನೋಡಿರಿ.

ಸ್ಫುರಣ ಕಿರಣ :

- ಮಾತಾಜಿ

ಹೂವು-ಜೀವನ/ಸ್ತ್ರೀ

ಪೂಜೆ ಮಾಡುತ್ತಾ ಕುಳಿತಿದ್ದೆ. ಹೂವಿನ ಬುಟ್ಟಿಯಿಂದ ಹೂವನ್ನು ತೆಗೆದು ಏರಿಸುವಾಗ ಅದು ಜಾರಿ ನೆಲಕ್ಕೆ ಬಿದ್ದಿತು. ''ಅಯ್ಯೋ, ಈ ಹೂವು ವ್ಯರ್ಥವಾಗಿ ನೆಲದ ಮೇಲೆ ಬಿದ್ದಿತಲ್ಲಾ, ಪೂಜೆಗೆ ಸಲ್ಲಲಿಲ್ಲ, ಅದರ ಜನ್ಮ ಸಾರ್ಥಕವಾಗಲಿಲ್ಲ'' ಎನ್ನಿಸಿತು. ಆಗ ಕೆಲವೊಂದು ವಿಚಾರಗಳು ಸ್ಫುರಿಸಿದವು. ಗಿಡದಲ್ಲಿ ಹಲವಾರು ಹೂವುಗಳು ಅರಳುತ್ತವೆ.

೧. ಕೆಲವು ಹೂವು ಅಲ್ಲೇ ಬಾಡಿಹೋಗುತ್ತವೆ.
೨. ಮತ್ತೆ ಕೆಲವು ನೆಲಕ್ಕೆ ಬಿದ್ದು ತುಳಿಯಲ್ಪಟ್ಟು ಹಾಳಾಗುತ್ತವೆ.
೩. ಮತ್ತೆ ಕೆಲವು ಮಾಲೆಯಾಗಿ ಯಾರ ಕೊರಳನ್ನೋ ಮುಡಿಯನ್ನೋ ಅಲಂಕರಿಸುತ್ತವೆ.
೪. ಇನ್ನು ಕೆಲವು ಪೂಜೆಗೆ ಬಳಕೆಯಾಗಿ, ಉಪಾಸ್ಯ ವಸ್ತುವಿಗೆ ಏರಿಸಲ್ಪಡುತ್ತವೆ.

ಜೀವನವು ಇದೇ ರೀತಿ ತಾನೆ ಎನ್ನಿಸಿತು. ಜಗತ್ತೆಂಬ ಗಿಡದಲ್ಲಿ ಅನೇಕ ಮಾನವ ಜೀವಗಳೆಂಬ, ಸ್ತ್ರೀ, ಪುರುಷರೆಂಬ ಹೂವು ಅರಳುತ್ತವೆ. ಗಿಡದಲ್ಲಿ ಅರಳಿ ಅಲ್ಲೆ ಬಾಡುವಂತೆ ಯಾವ ಆದರ್ಶವೂ ಇಲ್ಲದೆ ಹೇಗೋ ಬದುಕಿ ಬಾಳಿ ಸಾಯುತ್ತಾರೆ. ಮತ್ತೆ ಕೆಲವರು ತಮ್ಮ ಮನೋದೌರ್ಬಲ್ಯದಿಂದಲೋ ಅಥವಾ ಅನ್ಯರ ದೌರ್ಜನ್ಯದಿಂದಲೋ ಪತಿತರು, ದುಶ್ಚಟ ದುರ್ಗುಣಗಳ ದಾಸರೋ ಆಗುತ್ತಾರೆ. ಇನ್ನು ಕೆಲವು ಸ್ತ್ರೀ/ಪುರುಷರು ಸಭ್ಯ ಗೃಹಸ್ಥರಾಗಿ ಜೀವನ ಪೂರೈಸುತ್ತಾರೆ. ಮತ್ತೆ ಕೆಲವರು ದೈವೀ ಜೀವನಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡು ದೇವಾರ್ಪಿತವಾಗುತ್ತಾರೆ. ಕಡೆಯದೇ ಶ್ರೇಷ್ಠವಾದ ಉತ್ತುಂಗ ಬದುಕು.

ಸ್ತ್ರೀಯ ಜೀವನಕ್ಕೆ ಹೋಲಿಸಿದಾಗ ಈ ವರ್ಗೀಕರಣ ಬಹಳ ಅರ್ಥಗರ್ಭಿತವಾಗುತ್ತದೆ. ಕೆಲವರು ಯಾವ ಗುರಿಗಮ್ಯ ಧ್ಯೇಯಾದರ್ಶಗಳಿಲ್ಲದೆ ಮದುವೆಯೂ ಆಗದೆ ಕಾಲ ಕಳೆದು ಗಿಡದಲ್ಲೇ ಅರಳಿ ಬಾಡಿದ ಹೂವಿನಂತೆ ಆಗುವರು. ಇವರು **ಕೆಟ್ಟು ಹೋದವರು** ಎನ್ನಿಸಿಕೊಳ್ಳದಿದ್ದರೂ **ವ್ಯರ್ಥ ಜೀವಿಗಳು** ಎನ್ನಿಸಿಕೊಳ್ಳುವರು. ಇನ್ನು ಎರಡನೆಯ ಪ್ರಕಾರದ ಸ್ತ್ರೀಯರು ದಾರಿಯಲ್ಲಿ ಬಿದ್ದು ತುಳಿಯಲ್ಪಟ್ಟ ಹೂವಿನಂತೆ ಚೆಲ್ಲುಚೆಲ್ಲಾಟ, ದುರ್ನಡತೆ, ಸ್ವೇಚ್ಛಾ ಜೀವನದಿಂದ ಹಾಳಾಗುವರು. ಮೂರನೆಯವರು ಸದ್ಗೃಹಿಣಿಯರಾಗಿ ಮುಡಿಯನ್ನು ಅಲಂಕರಿಸಿದ ಹೂವಾಗುವರು. ವೈರಾಗ್ಯ ಜೀವನ, ಆಧ್ಯಾತ್ಮ ಜೀವನ ಸ್ವೀಕರಿಸಿದ ಮಹಿಳೆಯರು (ಪುರುಷರು)ದೇವರ ಪೂಜೆಗೆ ಸಂದ ಹೂವಾಗುವರು. ಬಸವ ಧರ್ಮವು ಸದ್‌ಗೃಹಸ್ಥ ಜೀವನಕ್ಕೆ ಪವಿತ್ರ ಸ್ಥಾನ ಕೊಟ್ಟಿದೆ ; ವೈರಾಗ್ಯ ಜೀವನಕ್ಕೆ ಪರಮೋನ್ನತ ಗೌರವ ಕೊಟ್ಟಿದೆ. ಭಕ್ತ-ವಿರಕ್ತ ಉಭಯತರೂ ಸಮಾಜದ ಆಧಾರ ಸ್ತಂಭಗಳೆಂದೇ ಗುರುತಿಸಿದೆ. ★

ಕಲ್ಯಾಣ ಕಿರಣದ ಎರಡು ಪ್ರತಿಗಳು ಬರುತ್ತಿದ್ದರೆ ಒಂದರ ಕ್ರಮ ಸಂಖ್ಯೆ ಕಾಣಿಸಿ ದಯವಿಟ್ಟು ಪತ್ರ ಬರೆಯಿರಿ. -ವ್ಯವಸ್ಥಾಪಕರು

Digitalized by e-Sahithya Documentation Forum
Sponsored by Sarayu Foundation Trust

ಮಾರ್ಚ್ ತಿಂಗಳಲ್ಲಿ ದೇಣಿಗೆ ಸಲ್ಲಿಸಿದವರು

ವಿಶ್ವಕಲ್ಯಾಣ ಮಿಷನ್, ಗ್ರಂಥ ಪ್ರಕಟಣೆಗೆ :

ಶರಣರುಗಳಾದ :

ಸರೋಜಮ್ಮ ಲಿಂ॥ಕೀರವಾಡಿ ಷಣ್ಮುಖಪ್ಪ, ದಾವಣಗೆರೆ	ರೂ.೧೧೦೧೦-೦೦
ಗೌರಮ್ಮ ಮತ್ತು ಕೆ. ತಿಪ್ಪಣ್ಣ, ದಾವಣಗೆರೆ	ರೂ.೧೧೧೧೧-೦೦
ಸುನಂದಾ ಮತ್ತು ಎಂ. ಹಾಲಪ್ಪನವರು, ದಾವಣಗೆರೆ	ರೂ.೧೧೦೦೦-೦೦
ಅಮೃತಮ್ಮ ಮತ್ತು ಟಿ.ಶಿವಪ್ಪ, ದಾವಣಗೆರೆ	ರೂ.೧೧೧೧೧-೦೦
ಆರ್. ವೀರಣ್ಣ, ದಾವಣಗೆರೆ	ರೂ.೧೧೧೧೧-೦೦
ಸಿದ್ಧಪ್ಪ ಹಳ್ಳೂರು, ದಾವಣಗೆರೆ	ರೂ.೧೧೧೧೧-೦೦
ಗಿರಿಜಮ್ಮ ಮತ್ತು ಶಿವಲಿಂಗಪ್ಪ , ದಾವಣಗೆರೆ	ರೂ.೧೧೦೦೦-೦೦

ಧರ್ಮ ಗ್ರಂಥ ನಿಧಿಗೆ

ಶರಣ. ಜಿ.ಎಸ್.ಜಗದೀಶ್, ತಿಮ್ಮಪ್ಪನಹಳ್ಳಿ	ರೂ. ೧೦೧೦-೦೦
ಶರಣೆ. ಯಶೋದಮ್ಮ ಮತ್ತು ವೀರಣ್ಣ, ದಾವಣಗೆರೆ	ರೂ. ೧೦೧೦-೦೦

ಮಾತಾ ನೀಲಾಂಬಿಕಾ ವಿದ್ಯಾರ್ಥಿನಿಯರ ಹಾಸ್ಟೆಲ್ ಕಟ್ಟಡ ನಿರ್ಮಾಣಕ್ಕೆ

ಶರಣರುಗಳಾದ :

ಚನ್ನಬಸವಣ್ಣ ಹೆಚ್.ಎ.ಶರಣಪ್ಪ, ಬೆಂಗಳೂರು	ರೂ. ೧೦೦೦೦-೦೦
ಬಂಗಾರುರಾಜು, ಬೆಂಗಳೂರು	ರೂ. ೫೦೦೦-೦೦
ಡಿ.ಎಂ.ಚಂದ್ರಶೇಖರ್, ನಿವೃತ್ತ ನ್ಯಾಯಾಧೀಶರು, ಬೆಂಗಳೂರು	ರೂ. ೫೦೦೦-೦೦
ಅನಿತಾ ಈಶ್ವರ್ ಪಾಟೀಲ್, ಬೆಂಗಳೂರು	ರೂ. ೫೦೦೦-೦೦
ಎಸ್.ಎಸ್.ಜಾನಗೌಡರ್, ದಾವಣಗೆರೆ	ರೂ. ೨೦೦೦-೦೦

ಶರಣ ಮೇಳದ ದಾಸೋಹ ನಿಧಿಗೆ ಪುದುವಟ್ಟು ಇಡಲು

ಶರಣರುಗಳಾದ :

ಭಾಗ್ಯಮ್ಮ ದುರ್ಗಪ್ಪ, ದಾವಣಗೆರೆ	ರೂ. ೫೦೦೧-೦೦
ಅನಂತಮ್ಮ ಮತ್ತು ಮೂಡಲಗಿರಿ, ದಾವಣಗೆರೆ	ರೂ. ೫೦೦೧-೦೦
ಸೌಭಾಗ್ಯ ಮತ್ತು ಉಮೇಶ್, ದಾವಣಗೆರೆ	ರೂ. ೫೦೦೧-೦೦
ಮಂಜುಳಾ ಮತ್ತು ಹನುಮಂತಪ್ಪ, ದಾವಣಗೆರೆ	ರೂ. ೫೦೦೧-೦೦
ಸಿ.ಕೆ.ಪಾಟೀಲ್, ದಾವಣಗೆರೆ	ರೂ. ೫೦೦೧-೦೦
ರತ್ನಾ ಮತ್ತು ಶೇಖರಪ್ಪ, ದಾವಣಗೆರೆ	ರೂ. ೫೧೧೧-೦೦
ಪರಮೇಶ್ವರಪ್ಪ , ದಾವಣಗೆರೆ	ರೂ. ೫೦೦೦-೦೦

ಬಸವ ಧರ್ಮ ಪೀಠದ ಕಟ್ಟಡ ನಿಧಿಗೆ

ಶರಣರುಗಳಾದ :

ಸರೂಬಾಯಿ ಕಲ್ಯಾಣಪ್ಪ ಸೋರಡೆ, ನೀಲಂಗಾ, ಮಹಾರಾಷ್ಟ್ರ	ರೂ.೫೦೦೦೦-೦೦

ಗುಣವಂತಿ ಡಾ॥ ಮಿತಾರೆ, ಉದಗೀರ್, ಮಹಾರಾಷ್ಟ್ರ	ರೂ.೫೦೦೦೦-೦೦
ಉದಗೀರ್ ರಾಷ್ಟ್ರೀಯ ಬಸವ ದಳದ ಪಾಂಡ್ರೆ ಪರಿವಾರ ಚನ್ನಬಸಯ್ಯ ಸ್ವಾಮಿ ಮುಂತಾದ ಶರಣ ಬಂಧುಗಳೆಲ್ಲ ಸೇರಿ	ರೂ.೭೦೦೦೦-೦೦
ನಿರ್ಮಲಾ ಶಿವನಾಥ ನೀಲಂಗೆ ವಿದ್ಯಾವತಿ ಗುರುನಾಥ ನಿಡಗುಂದೆ ಸುನೀತಾ ಅಶೋಕ ಶೀಲವಂತ ಪಾರ್ವತಿ ಪರಮೇಶ್ವರ ಶಿವದೆ ಪುತಳಾಬಾಯಿ ಶಿವನಾಥ ಜಾಬಶೆಟ್ಟಿ ನೀಲಮ್ಮ ಮನ್ಮಥಯ್ಯಾ ಸ್ವಾಮಿ ಮಲ್ಲಮ್ಮ ಶಿವರಾಜ ಮುಗಟೆ ಪಾರ್ವತಿ ಜಗನ್ನಾಥ ಘುಡೇದ ಪಾರ್ವತಿ ಮಲ್ಲಿಕಾರ್ಜುನ ನೀಲಪ್ಪನವರು	ರೂ.೭೦೦೦೦-೦೦
ಪಾರ್ವತಮ್ಮ ಮತ್ತು ಈಶ್ವರಪ್ಪ, ದಾವಣಗೆರೆ	ರೂ. ೫೧೦೦೦-೦೦
ಶಾಂತಾ ಮತ್ತು ಚನ್ನವೀರಪ್ಪ, ದಾವಣಗೆರೆ	ರೂ. ೫೧೧೧-೦೦
ವಿಜಯಾ ಮತ್ತು ನಂಜುಂಡಪ್ಪ, ದಾವಣಗೆರೆ	ರೂ. ೫೦೦೦-೦೦
ಎಲ್.ಎನ್.ಪುಟ್ಟಪ್ಪ, ದಾವಣಗೆರೆ	ರೂ. ೫೦೦೦-೦೦
ಮಂಜುಳಾ ಮತ್ತು ಷಡಕ್ಷರಿ, ದಾವಣಗೆರೆ	ರೂ. ೫೦೦೦-೦೦
ಚನ್ನಬಸಮ್ಮ ಜೆ.ಜಿ.ಬಸಪ್ಪ	ರೂ. ೫೦೦೦-೦೦
ರಾಷ್ಟ್ರೀಯ ಬಸವ ದಳ, ಗುಲಬರ್ಗಾ (೫೫ನೆಯ ವರ್ಧಂತಿಯ ನಿಮಿತ್ತ)	ರೂ. ೧೧೦೦೦-೦೦
ಅಶೋಕ ಸ್ವಾಮಿ, ಉದಗೀರ್ (೫೫ನೆಯ ವರ್ಧಂತಿ ಕಾಣಿಕೆ)	ರೂ. ೧೧೦೦೦-೦೦

ಬಸವ ಧರ್ಮ ಪೀಠದ ದಾಸೋಹ ನಿಧಿಗೆ ೧೧೧೧ ರೂ. ಸಲ್ಲಿಸಿದವರು

ಶರಣರುಗಳಾದ :

ಕುಸುಮಾ ಮತ್ತು ಮೃತ್ಯುಂಜಯಪ್ಪ, ದಾವಣಗೆರೆ
ಕಾಂತಾಮಣಿ ಮತ್ತು ಕಾಸಲ ವಿಶ್ವನಾಥಶೆಟ್ಟಿ, ದಾವಣಗೆರೆ
ಕಿರವಾಡಿ ಗಿರಿಜಮ್ಮ ಮತ್ತು ಶಿವಣ್ಣ, ದಾವಣಗೆರೆ
ಎಂ. ಅಮರಪ್ಪ, ದಾವಣಗೆರೆ
ವಿಜಯಾ ಮತ್ತು ನಂಜುಂಡಪ್ಪ, ದಾವಣಗೆರೆ
ಬನ್ನಿಕಟ್ಟೆ ವಿಶ್ವನಾಥ ಮತ್ತು ಮಕ್ಕಳು, ದಾವಣಗೆರೆ
ಎಂ. ಷಡಕ್ಷರಿ, ದಾವಣಗೆರೆ
ಭೀಮರಾವ್ ಪಾಟೀಲ್, ಬೀದರ್
ಬಿ.ಈಶ್ವರಪ್ಪ, ದಾವಣಗೆರೆ
ಹನುಮಂತಪ್ಪ, ಶಾಮನೂರು
ನಿರ್ಮಲ ಮತ್ತು ನಾಗೇಂದ್ರಪ್ಪ, ದಾವಣಗೆರೆ

Digitalized by e-Sahithya Documentation Forum
Sponsored by Sarayu Foundation Trust

ಮೀನಾಕ್ಷಮ್ಮ ಚಂದ್ರಶೇಖರ, ದಾವಣಗೆರೆ
ಹೆಚ್.ಆರ್.ಲಿಂಗರಾಜ್, ದಾವಣಗೆರೆ
ಶೇಖರಪ್ಪ, ದಾವಣಗೆರೆ
ಎಂ.ಸಿ.ಗುರುಸ್ವಾಮಿ, ದಾವಣಗೆರೆ
ಎಸ್.ಆರ್.ಚಂದ್ರಶೇಖರಯ್ಯ, ಬಸವೇಶ್ವರ ನಗರ, ಬೆಂಗಳೂರು
ಅಂಬಿಕಾ ವಿ.ಗೋವಿಂದರಾಜು, ರಾಜಾಜಿನಗರ, ಬೆಂಗಳೂರು
ಎಂ. ವಿಶ್ವನಾಥ, ಬೆಂಗಳೂರು
ಮಂಜುಳಾ ವಿಶ್ವನಾಥ, ಬೆಂಗಳೂರು
ಶುಭಾ ಶಿವರಾಜ್ ಪಟ್ಟಣಶೆಟ್ಟಿ, ಬೆಂಗಳೂರು
ಉಮಾದೇವಿ ಮತ್ತು ಬಸವರಾಜಪ್ಪ, ದಾವಣಗೆರೆ
ಮಹೇಶ್ವರಪ್ಪ ಮತ್ತು ಮಕ್ಕಳು, ದಾವಣಗೆರೆ
ಶಿವಾನಂದಪ್ಪ ಮುರುಗೇಂದ್ರಪ್ಪ, ದಾವಣಗೆರೆ
ದಯಾನಂದ ಬಸಪ್ಪ ಹೊನ್ನೂರು, ದಾವಣಗೆರೆ
ಬಿ.ಮುರುಗೇಶ್ ಬಸಪ್ಪ ಹೊನ್ನೂರು, ದಾವಣಗೆರೆ
ನೀಲಕಂಠಪ್ಪ ಗಂಗಪ್ಪ ಹೊನ್ನೂರು, ದಾವಣಗೆರೆ
ತಿಪ್ಪೇರುದ್ರಯ್ಯ ಕರಿನಕ್ಕೇನಹಳ್ಳಿ, ದಾವಣಗೆರೆ

ಬಸವ ಧರ್ಮ ಪೀಠದ ಪೂಜಾನಿಧಿಗೆ ೫೦೧ ರೂ.ಸಲ್ಲಿಸಿದವರು ಶರಣರುಗಳಾದ :

ಡಾ॥ ಆರ್.ಡಿ.ಪುರಂತರ್, ದಾವಣಗೆರೆ
ಎಂ. ತಿಪ್ಪೇರುದ್ರಪ್ಪ, ದಾವಣಗೆರೆ
ಜಿ.ಬಸಪ್ಪ, ದಾವಣಗೆರೆ
ಮೀನಾಕ್ಷಿ ದೀವಿದಾಸ್, ದಾವಣಗೆರೆ
ಎಸ್.ರುದ್ರಪ್ಪ, ದಾವಣಗೆರೆ
ಸುನೀತ ನರೇಂದ್ರನಾಥ, ದಾವಣಗೆರೆ
ಚನ್ನಮ್ಮ ಕೆಂಚವೀರಪ್ಪ, ದಾವಣಗೆರೆ
ಗೌರಮ್ಮ ಬಸವನಗೌಡ, ದಾವಣಗೆರೆ
ಎನ್.ಎಂ. ಷಡಕ್ಷರಪ್ಪ, ದಾವಣಗೆರೆ
ರಾಜೂ ಮಾನೆ, ದಾವಣಗೆರೆ

ಈ ಎಲ್ಲ ಶರಣ ಬಂಧುಗಳಿಗೆ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ಅನುಗ್ರಹಿಸಲೆಂದು ಹಾರೈಸುತ್ತೇವೆ.

ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ, ಪೀಠಾಧ್ಯಕ್ಷೆ
ಬಸವ ಧರ್ಮ ಪೀಠ, ಕೂಡಲಸಂಗಮ-೫೮೭ ೧೦೧

ಕಾಯಕವೇ ಕೈಲಾಸ, ದಾಸೋಹವೇ ದೇವಧಾಮ

ಡಾ॥ ಆರ್.ಡಿ. ಪುರಂತರ ಅವರ
ಹೃದಯಸ್ಪರ್ಶಿ ಪತ್ರ

(ಡಾ॥ ಆರ್.ಡಿ.ಪುರಂತರ್ ಸೇವಾ ಮನೋಭಾವದ ಅಪ್ಪಟ ರಾಷ್ಟ್ರಪ್ರೇಮಿ ವೈದ್ಯರು. ಅವರ ಪರಿಚಯವಾದುದೇ ಒಂದು ವಿಶಿಷ್ಟ ಸನ್ನಿವೇಶದಲ್ಲಿ. ಚುನಾವಣೆಯ ಸಮಯದಲ್ಲಿ ರಾಷ್ಟ್ರದ ಹಿತದೃಷ್ಟಿಯಿಂದ ನಾನು ಬರೆದು, ಪ್ರಕಾಶಿಸಿದ ಒಂದು ಕರಪತ್ರವನ್ನು ಓದಿ ಪ್ರಭಾವಿತರಾದ ಅವರು ಪತ್ರವನ್ನು ಬರೆದರು. ಅವರಲ್ಲಿದ್ದ ದೇಶಪ್ರೇಮ, ಪ್ರಾಮಾಣಿಕತೆಯ ಕಳಕಳಿ, ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿಯಬೇಕೆಂಬ ಹಂಬಲ ಈ ಕಾಲದಲ್ಲೂ ಇಂಥ ಚಿಂತನಶೀಲ ಪವಿತ್ರಾತ್ಮರು ಇರುವರಲ್ಲ ಎಂಬ ಅಭಿಮಾನ, ಸಮಾಧಾನ ಮೂಡಿಸಿತು. ದಾವಣಗೆರೆಯಲ್ಲಿ ಪೂಜ್ಯ ಗಂಗಾಮಾತಾಜಿಯವರ ಪ್ರವಚನ ಆರಂಭವಾಗುವಾಗ ಇರಲು ಸ್ಥಳವನ್ನು ಕೇಳಿದಾಗ ಸಂತೋಷದಿಂದ ನೀಡಿದರಲ್ಲದೆ ತಾವೂ ಭಕ್ತಿಪೂರ್ಣರಾಗಿ ಭಾಗಿಗಳಾದರು. ದಾವಣಗೆರೆಯಲ್ಲಿ ದಿ.೨೦-೩-೨೦೦೦ ದಂದು ದೌರ್ಜನ್ಯದಿಂದ ಬಸವ ಕೇಂದ್ರ/ಬಸವ ಬಳಗದವರು ಪ್ರವಚನವನ್ನು ಗೂಂಡಾಗಿರಿಯ ಮೂಲಕ ನಿಲ್ಲಿಸಿದ ನಂತರ ಶರಣ. ಡಾ॥ ಆರ್.ಡಿ.ಪುರಂತರ ಅವರು ಆಂಗ್ಲಭಾಷೆಯಲ್ಲಿ ಬರೆದ ದಿ. ೨೨-೩-೨೦೦೦ದ ಭಾಷಾಂತರಗೊಂಡ ಪತ್ರವಿದು.)

ಪರಮ ಪೂಜ್ಯರಾದ, ಧೈರ್ಯಶಾಲಿಗಳು, ಅಧ್ಯಾತ್ಮಿಕವಾಗಿ ಉನ್ನತ ಸ್ಥಿತಿಯಲ್ಲಿರುವ ಮಾತಾಜಿಯವರಿಗೆ,

ನಿಮ್ಮ ಪತ್ರ ಮತ್ತು ನೀವು ಆಶೀರ್ವದಿಸಿ ಕಳಿಸಿದ ಶಾಲು (ದಿ.೨೪-೩-೨೦೦೦ದಂದು ನಾನು ಹೋದಾಗ ಡಾಕ್ಟರರಿಗೆ ಹೊದ್ದಿಸಬೇಕೆಂದು ಇರಿಸಿಕೊಂಡಿದ್ದ ಶಾಲನ್ನು ದುರ್ಘಟನೆಯ ನಂತರ ಕೋರಿಯರದಲ್ಲಿ ಕಳಿಸಲಾಗಿತ್ತು) ಬಂದು ತಲ್ಪಿದವು. ದಿ.೨೦-೩-೨೦೦೦ದಂದು ದಾವಣಗೆರೆಯಲ್ಲಿ ನಡೆದ ಘಟನೆಗಳು ಅತ್ಯಂತ ಅಸಹ್ಯಕರ, ಅನೈತಿಕ, ಅನಾಗರಿಕ ಮತ್ತು ನಾಚಿಕೆಗೇಡಿನ ಸಂಗತಿ.

ವಿದ್ಯಾವಂತರು, ಬುದ್ಧಿವಂತರು ಎಂದು ಅಂದುಕೊಳ್ಳುವ ಕೆಲವು ಲಿಂಗಾಯತರ ವರ್ತನೆಯಿಂದ ನಾನು ದಿಗ್ಭ್ರಾಂತನಾಗಿದ್ದೇನೆ. ಅದೂ ನಿಸ್ಸಹಾಯಕ ಮತ್ತು ಮುಗ್ಧರಾದ ಪೂಜ್ಯ ಶ್ರೀ ಗಂಗಾ ಮಾತಾಜಿಯವರ ಸಹಚರರ ಮೇಲೆ ಅಕ್ಷರಶಃ ಹಲ್ಲೆ ಮಾಡಲು ಬಂದ ಗಣ್ಯರೆನ್ನಿಸಿಕೊಂಡ ಜನರ ಹೇಯ ವರ್ತನೆ ನನ್ನನ್ನು ದಿಗ್ಭ್ರಾಂತಗೊಳಿಸಿದೆ. ಪೋಲೀಸರು ನಿಸ್ಸಹಾಯಕರಂತೆ, ಮೂಕ ಪ್ರೇಕ್ಷಕರಂತೆ ವರ್ತಿಸಿದ್ದು ಸ್ಪಷ್ಟವಾಗಿತ್ತು. ಬಹುಶಃ ಹಣದ ಶಕ್ತಿಯು ಮೇಲಧಿಕಾರಿಗಳ ಮೇಲೆ ಕೆಲಸ ಮಾಡಿದಂತೆ ತೋರುತ್ತದೆ. ಅನೇಕ ವಿದ್ಯಾವಂತ ಅವಿದ್ಯಾವಂತ ಮೂರ್ಖರು ಕಾನೂನನ್ನು ಕೈಗೆ ತೆಗೆದುಕೊಂಡಂತೆ ವರ್ತಿಸಿದರು. ಅವರು ಬಳಸಿದ ಕೀಳುಭಾಷೆಯು ಕೂಡ, ಅದೂ ಹೆಣ್ಣು ಮಕ್ಕಳನ್ನು ಕುರಿತು, ದೇವರ ಭಯ ಇರುವಂಥ ಜನರು ಕೇಳುವ ಭಾಷೆಯೇ ಆಗಿರಲಿಲ್ಲ.

ನಾನು ನಂಬಿದ್ದೇನೆ, ಪೂಜ್ಯ ಮಾತಾಜಿಯವರು ಈ ವಿಷಯವನ್ನು ಇಷ್ಟಕ್ಕೇ ಬಿಡದೆ ನ್ಯಾಯಾಲಯಕ್ಕೆ ಮತ್ತು (good for nothing) ನಿಷ್ಕ್ರಿಯ ಸರಕಾರದ ಗಮನಕ್ಕೆ ತರಬಹುದೆಂದು. ಏಕೆಂದರೆ ತಾವು ವಜ್ರದಂತೆ ಕಠಿಣವಾದ ಹೂವಿನಂತೆ ಮೃದುವಾದ

Digitalized by e-Sahithya Documentation Forum
Sponsored by Sarayu Foundation Trust

ಹೃದಯವನ್ನು ಹೊಂದಿದ್ದೀರೆಂದು ಭಾವಿಸಿಯೂ ಈ ಅಮಾನವೀಯ ಪ್ರಸಂಗವನ್ನು ತನ್ನಷ್ಟಕ್ಕೇ ಬಿಡುವುದಿಲ್ಲವೆಂದು ಭಾವಿಸಿದ್ದೇನೆ. ನಾನೇನಾದರೂ ನಿಮ್ಮ ಸಮಾಜದವನಾಗಿದ್ದರೆ ★ ನನ್ನ ಘನತೆ, ಗೌರವ, ಮರ್ಯಾದೆಯನ್ನು ಬದಿಗಿಟ್ಟು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೆ. ಯಾವುದೇ ಜಾತಿಮತ ಪಂಥದವರಿರಲಿ ಯಾರು ಮಹಿಳೆಯರನ್ನು ಮತ್ತು ನಿಮ್ಮಂತಹ ಉನ್ನತ ನಿಲುವಿನವರನ್ನು ಗೌರವಿಸುವುದಿಲ್ಲವೋ ಅಂಥ ಅನಾಗರಿಕರನ್ನು ನಾನು ತೀವ್ರವಾಗಿ ದ್ವೇಷಿಸುತ್ತೇನೆ.

ನಿಮ್ಮ ಪಾದಕಮಲಗಳಿಗೆ ವಿನಯಪೂರ್ವಕ ಪ್ರಣಾಮಗಳನ್ನು ಸಲ್ಲಿಸುವ

ನಿಮ್ಮ ನಿಷ್ಠಾವಂತ ಮಗ

೨೨-೩-೨೦೦೦ ಡಾ|| ಆರ್. ಡಿ. ಪುರಂತರ

M.B.B.S., F.R.C.S.(London)

ದಾವಣಗೆರೆ

★ ಕೆಲವು ಮಠಾಧೀಶರು, ಅವರ ಆಜ್ಞಾನುವರ್ತಿಗಳು ಅವರಿಂದ ಪ್ರಚೋದಿತರಾದ ಗೂಂಡಾಗಳು ಮಾಡುವ ಹೇಯ ಕೆಲಸಗಳು ಇಡೀ ಸಮಾಜಕ್ಕೆ ಕಲಂಕ ತರುತ್ತವೆ ಎಂಬುದನ್ನು ಮಾನ್ಯ ಡಾ|| ಪುರಂತರರ ಈ ಮಾತು ಸ್ಪಷ್ಟಪಡಿಸುತ್ತದೆ. ಚಿತ್ರದುರ್ಗದ ಬಸವ ಮಂಟಪವನ್ನು ಚಿತ್ರದುರ್ಗದ ಬೃಹನ್ಮಠಾಧೀಶರು, ಅವರ ಆಡಳಿತಾಧಿಕಾರಿ ರಾಜನ್, ಮಲ್ಲಣ್ಣ ಎಂಬ ಅಬಕಾರಿ ವ್ಯಕ್ತಿಯನ್ನು ಮುಂದೆ ಮಾಡಿ ಗೂಂಡಾಗಳ ಮೂಲಕ ವಶಮಾಡಿಕೊಂಡುದಲ್ಲದೆ, ನಮ್ಮ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ವಯೋವೃದ್ಧ, ಶರಣ ಬಿ. ವಿ. ಸತ್ಯನಾರಾಯಣಶೆಟ್ಟರನ್ನು ಮತ್ತು ಅವರ ಮಗ ಶ್ರೀನಿವಾಸಮೂರ್ತಿಯನ್ನು (ಇನ್ನಿತರ ೪೦ ಜನ ಶರಣ-ಶರಣೆಯರೊಡನೆ) ಪೋಲೀಸರಿಂದ ಕೃತಕ ಮೊಕದ್ದಮೆ ಹೂಡಿಸಿ ಕೋರ್ಟಿಗೆ ಎಳೆದಾಗ, ಆರ್ಯ ವೈಶ್ಯ ಸಮಾಜದ ಗಣ್ಯರಿಂದ ಇದೇ ರೀತಿಯ ಮಾತು ಬಂದಿತ್ತು.

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

ಆಹ್ವಾನ

ಲಿಂಗಾಯತ (ಬಸವ) ಧರ್ಮೀಯರ ವಧು-ವರ ಸಮಾವೇಶವು ಪ್ರತಿವರ್ಷದ ಕಾರ್ಯಕ್ರಮದಂತೆ ದಿನಾಂಕ ೧ ಮೇ ೨೦೦೦, ಕಾಯಕ ದಿನಾಚರಣೆಯಂದು ನೆರವೇರಲಿದೆ.

ವಿಳಾಸ : ಬಸವ ಮಂಟಪ, ೨೦೩೫, ೨೦ನೇ ಮುಖ್ಯರಸ್ತೆ, ರಾಜಾಜಿನಗರ, ೨ನೇ ಬ್ಲಾಕ್, ಪಶ್ಚಿಮ ಕಾರ್ಡ್ ರಸ್ತೆ, ಬೆಂಗಳೂರು-೫೬೦೦೧೦ ಇಲ್ಲಿ ನೆರವೇರಲಿದೆ.

ಸಮಯ : ಬೆಳಗ್ಗೆ ೧೦-೦೦ ಗಂಟೆಗೆ

ದೂರವಾಣಿ : ೩೩೨೫೩೩೫/೩೩೨೨೮೦

ಡಾ|| ಆದಿ
ಸಂಚಾಲಕ
ಭಾವಸಂಗಮ

ಎನ್. ಪುಟ್ಟರುದ್ರ
ಅಧ್ಯಕ್ಷರು
ರಾಷ್ಟ್ರೀಯ ಬಸವ ದಳ, ಬೆಂಗಳೂರು ಘಟಕ

ಸಂಪಾದಕೀಯ ೩ :

ಲಿಂಗದೇವ ಬಳಕೆಯ ವಿರುದ್ಧ ಇಂಥ ಕೀಳು, ಅನಾಗರಿಕ, ಗೂಂಡಾಗಿರಿ ಸಮರ್ಥನೀಯವೆ ?

ಗೋಕಾಕ್ ನಗರದ ಗುರುವಾರ ಪೇಟೆಯ ಬಸವ ಮಂಟಪದಲ್ಲಿ ದಿ.೬-೩-೨೦೦೦ದಂದು ನಡೆದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸಂಕೇಶ್ವರದ ರಾಷ್ಟ್ರ ಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕ ಶರಣ. ಡಾ|| ಶಿವಗೌಡ ಪಾಟೀಲ್ ಒಂದು ಉದಾಹರಣೆಯನ್ನು ಬಹಳ ಚೆನ್ನಾಗಿ ಹೇಳಿದರು.

''ಒಂದು ಕೋಳಿ ಪಿಳ್ಳೆ ತಿಪ್ಪೆಯೊಂದನ್ನು ಕೆದರುತ್ತ ಹುಳುಗಳನ್ನು ಆಯ್ದು ತಿನ್ನುತ್ತಿತ್ತು. ಆಗ ಗಾಳಿ ಬಿಟ್ಟು ಕೆಲವು ಎಲೆಗಳು ಹಾರಿ ಬಂದವು. ಆ ಕೋಳಿಮರಿ ಗಾಬರಿಗೊಂಡು ಪುರ್‍ರನೆ ಹಾರಿತು. ನಂತರ ಓಡಿತು. ಆಗ ಇನ್ನೊಂದು ಕೋಳಿಮರಿ ಕೇಳಿತು. ''ಏಕೆ ಹೀಗೆ ಓಡುವೆ'' ಎಂದು. ಅದು ಹೇಳಿತು'' ಪ್ರಳಯವಾಗುತ್ತಿದೆ. ಗಿಡಮರ ಬೀಳುತ್ತವೆ.'' ಆ ಕೋಳಿಮರಿಯೂ ಓಡಿತು. ಅದರ ಹಿಂದೆ ಕೋಳಿಗಳು, ಹುಂಜ, ನವಿಲು ಹೀಗೆ ದೌಡಾಯಿಸಿದವು. ಒಂದು ನರಿ ನಿಂತಿದ್ದು ಈ ದಂಡನ್ನು ನೋಡಿತು, ಕಾರಣ ಕೇಳಿತು. ಒಕ್ಕೊರಲಿನಿಂದ ಆ ಪಕ್ಷಿಗಳೆಲ್ಲ ವಿಷಯ ತಿಳಿಸಿ, ರಕ್ಷಣೆಗಾಗಿ ಓಡುವುದಾಗಿ ಹೇಳಿದವು. ನರಿಯು ಮನದಲ್ಲೇ ನಕ್ಕಿತು. ಹೊರಗೆ ಗಂಭೀರವಾಗಿ ಹೇಳಿತು, ''ನಿಮಗೆ ರಕ್ಷಣೆ ಬೇಕಿದ್ದರೆ ಇಲ್ಲೊಂದು ಸುರಂಗವಿದೆ. ಇದರೊಳಗೆ ಹೋಗಿರಿ'' ಎಂದು ಕಳಿಸಿ ಒಂದು ತಡಿಕೆಯನ್ನು ಅಡ್ಡ ಇಟ್ಟಿತು. ಬೇಕಾದಾಗ ಅದನ್ನು ತೆಗೆದು ಹೊರಬಂದ ಪಕ್ಷಿಗಳನ್ನು ಒಂದೊಂದನ್ನಾಗಿ ತಿನ್ನತೊಡಗಿತು. ಅದೇ ರೀತಿ ''ಲಿಂಗದೇವ'' ಎಂಬ ಪದದ ಪರಿಕಲ್ಪನೆ, ಆಳ, ಅರ್ಥ ಅರಿಯದೆ ಕೆಲವರು ಹುಯಿಲೆಬ್ಬಿಸಿದಾಗ ಇಂಥದಕ್ಕೆ ಹೊಂಚುಹಾಕುತ್ತಿದ್ದ ಚಿತ್ರದುರ್ಗದ ಬೃಹನ್ಮಠದ ಶ್ರೀಗಳೆಂಬುವವರು ಬಸವ ಕೇಂದ್ರ ಎಂಬ ಸುರಂಗತೋರಿಸಿ ಕೆಲವರನ್ನು ಒಳಗೆ ನುಗ್ಗಿಸಿ ತಮ್ಮ ಬಲೆಗೆ ಹಾಕಿಕೊಳ್ಳುವರು. ಗೋಕಾಕದವರು ಕೆಲವರು ಸಿಕ್ಕಿಕೊಂಡಿದ್ದರು ; ಸದ್ಯ ಈಗ ಅವರು ಬಿಡಿಸಿಕೊಂಡಂತೆ ತೋರುತ್ತದೆ. ಆದ್ದರಿಂದ ಬಸವ ಭಕ್ತರು ಕೋಳಿ ಪಿಳ್ಳೆಯಂತೆ ಮುಗ್ಧರಾಗಿ, ವಂಚಿತರಾಗಬಾರದು.

ಡಾ|| ಶಿವಗೌಡ ಪಾಟೀಲರ ಭಾಷಣಕ್ಕೆ ಗಡುಚಿಕ್ಕುವಂತೆ ಚಪ್ಪಾಳೆ ಬಿದ್ದವು. ಎಂಥಾ ಸಮಯೋಚಿತ ಉದಾಹರಣೆ. ಚಿತ್ರದುರ್ಗದ ಬೃಹನ್ಮಠದಲ್ಲಿ ೧೯೮೭ರವರೆಗೆ ಬಸವ ಗುರುವಿನ ಒಂದು ದೊಡ್ಡ ಭಾವಚಿತ್ರವಿರಲಿಲ್ಲ. ಮೂವರು ಶ್ರೀಗಳ ಹೊರತು ಧರ್ಮಗುರುವಿನ ಭಾವಚಿತ್ರವನ್ನು ಮುದ್ರಿಸಿ ಮಾರುತ್ತಿರಲಿಲ್ಲ. ಇಂಥ ಮಠದಲ್ಲಿ ಬಸವ ನಾಮಸ್ಮರಣೆ ಶುರುವಾದುದು ಈಗಿನ ಸ್ವಾಮಿಗಳಿಂದ ಎಂಥಾ ಮಹತ್ತರ ಬದಲಾವಣೆ ! ಎಂದು ನಾವು ಮನಸ್ಸಿನಲ್ಲೇ ಸಂತೋಷಪಟ್ಟುದುಂಟು. ಆದರೆ ನಂತರ, ಬರುಬರುತ್ತ ಅವರ ಮತ್ತು ಅವರ ಆಡಳಿತಾಧಿಕಾರಿಯ ಕಾರ್ಯವೈಖರಿ ನೋಡಿದ ಮೇಲೆ ಇದು ನರಿಯು ಸುರಂಗ ತೋರಿಸಿದನಂತೆ, ಮುಗ್ಧರಾಗಿರುವ ಬಸವ ಭಕ್ತರನ್ನು ಮೋಸಪಡಿಸಲಿಕ್ಕೆ ಎಂಬುದು ಖಚಿತವಾಗುತ್ತಿದೆ.

ಲಿಂಗದೇವ ವಚನಾಂಕಿತ ಬದಲಾವಣೆ

ಲಿಂಗದೇವ ವಚನಾಂಕಿತವನ್ನು ಕೂಡಲ ಸಂಗಮದೇವದ ಬದಲಿಗೆ ಇಟ್ಟುದು ಸತ್ಯ. ಶಿವ ಸಂಬಂಧಿಯಾದ ವಚನಗಳಲ್ಲಿ ಕೂಡಲಸಂಗಮ ದೇವ ವಚನಾಂಕಿತವನ್ನು ಹಾಗೆಯೇ ಇಟ್ಟು, ಸಾಕ್ಷಾತ್ಕಾರದ ನಂತರ ಬರೆದ ವಚನಗಳಲ್ಲಿ ನಿರಾಕಾರ ನಿರ್ಗುಣನಾದ ಪರಮಾತ್ಮನನ್ನು ಸೂಚಿಸಿ ಹೇಳುವಲ್ಲೆಲ್ಲ ಲಿಂಗದೇವ ಮುದ್ರಿಕೆಯನ್ನು ಬಳಸಲಾಗಿದೆ. ನಿರಾಕಾರನಾದ ದೇವನಿಗೆ ಅಪ್ಪ ಬಸವಣ್ಣನವರು ಇಟ್ಟ ಹೆಸರು ''ಲಿಂಗದೇವ''. ನಾವು ಅಂದರೆ ಲಿಂಗಾಯತ ಧರ್ಮೀಯರು ಸೃಷ್ಟಿಕರ್ತ

Digitalized by e-Sahithya Documentation Forum
Sponsored by Sarayu Foundation Trust

ಲಿಂಗದೇವನ ಪೂಜಕರೇ ವಿನಾ ನಾಲ್ಕು ಗೋಡೆಗಳ ಮಧ್ಯೆ ಇರುವ ಕೂಡಲ ಸಂಗಮ (ಸ್ಥಾವರ ಲಿಂಗ)ನ ಪೂಜಕರಲ್ಲ. ಏಕದೇವೋಪಾಸನೆ ಬಸವ ತತ್ತ್ವದ ಜೀವಾಳ ಮತ್ತು ವೈಶಿಷ್ಟ್ಯ ಇದರ ಮರ್ಮವನ್ನೇ ಅರಿಯದ ಅನೇಕ ಮಠಾಧೀಶರೇ ಬಹುದೇವತೋಪಾಸಕರಾಗಿ, ಮೂಢನಂಬಿಕೆಯ ಆಗರವಾಗಿ, ಪಂಚಾಂಗ ನೋಡುತ್ತ, ನವಗ್ರಹ ಪೂಜೆ ಮಾಡುತ್ತ ಕಾಲ ಕಳೆಯುವಾಗ ಇನ್ನು ಅವರನ್ನು ಮಾದರಿಯಾಗಿ ಇಟ್ಟುಕೊಂಡ ಭಕ್ತರಿಗೆ ಹೇಗೆ ಲಿಂಗನಿಷ್ಠೆ ಬರಲು ಸಾಧ್ಯ ? ಅಥವಾ ಸೃಷ್ಟಿಕರ್ತ ಲಿಂಗದೇವನ ಪರಿಕಲ್ಪನೆ ಹೇಗೆ ಅರ್ಥವಾಗಲು ಸಾಧ್ಯ ?

ಅಪಪ್ರಚಾರದ ವಿಧಾನ

ಲಿಂಗದೇವ ಪದವು ಲಿಂಗಾನಂದ ಸ್ವಾಮಿಗಳ ಹೆಸರಿನ ಸೂಚಕ ಎಂದು ಹುಯಿಲೆಬ್ಬಿಸಿ ಅಪಪ್ರಚಾರವನ್ನು ತರಲೆ ಕೇಂದ್ರದವರು, ಇದರ ಹಿಂದಿನ ಸೂತ್ರಧಾರರಾದ ಚಿತ್ರದುರ್ಗ ಬೃಹನ್ಮಠದ ಶ್ರೀಗಳು ಮಾಡಿಸುತ್ತಿದ್ದಾರೆ. ಜನರಿಗೆ ಸತ್ಯ ಸಂಗತಿಯು ತಿಳಿಯುತ್ತಲೇ ನಿಜ ಶರಣರು ಮೆಚ್ಚುಗೆಯಿಂದ ಸಂಭ್ರಾಂತರಾಗುತ್ತಿದ್ದಾರೆ. ಹಣ ತೆಗೆದುಕೊಂಡು ಗೂಂಡಾಗಿರಿ ಮಾಡುವ ಜನರಿರುವಲ್ಲಿ ಈ ತರಲೆ ಕೇಂದ್ರದವರು ಪ್ರತಿಭಟನೆಗೆ ಸಜ್ಜಾದರೂ ಜನರಿಂದ ಬೆಂಬಲ ಸಿಗುತ್ತಿಲ್ಲ. ಇದಕ್ಕೆ ಗುಲಬರ್ಗಾ, ಉದಗೀರ್ ಜ್ವಲಂತ ಉದಾಹರಣೆಗಳು. ಗುಲಬರ್ಗಾದಲ್ಲಿ ಜನರನ್ನು ಪ್ರಚೋದಿಸಲು ಸರ್ವ ಸಾಹಸ ಮಾಡಿ ಓರ್ವ ಅರೆ ಹುಚ್ಚನನ್ನು (ಆ ವ್ಯಕ್ತಿಯು ಅಮೇಠಿಗೂ ಹೋಗಿದ್ದನಂತೆ. ಕೆಲವು ಕಾರ್ಯಕರ್ತರು ಅಮೇಠಿಗೆ ಚಿತ್ರದುರ್ಗ, ಬೆಂಗಳೂರು, ಚಳ್ಳಕೆರೆ, ಬಳ್ಳಾರಿಯಿಂದ ಹೋಗಿದ್ದರು. ರಾಜಾ ಸಂಜಯ್ ಸಿಂಗ್ ಅವರು ಇವರನ್ನೆಲ್ಲ ಗೌರವಪೂರ್ಣವಾಗಿ ಬರಮಾಡಿಕೊಂಡು, ವಿಶೇಷವಾಗಿ ಊಟೋಪಚಾರದ. ವ್ಯವಸ್ಥೆ ಮಾಡಿದ್ದರಂತೆ. ಆಗ ಆ ಅರೆಹುಚ್ಚ ಇವರ ಮಧ್ಯೆ ಸೇರಿಕೊಂಡು ೨೦-೩೦ ಪೂರಿ, ಹತ್ತು ಹದಿನೈದು ಚಪಾತಿ ತಿನ್ನುತ್ತಿದ್ದುದನ್ನು ಕಂಡು ಇಲ್ಲಿಂದ ಹೋದವರು ನಾಚಿ ಇವರು ನಮ್ಮವರಲ್ಲ ಎಂದು ಸ್ಪಷ್ಟಪಡಿಸಿದರಂತೆ. ತಲೆ, ಬುಡ ಇಲ್ಲದ ಇಂಥವರು ತಮ್ಮ ಗೌರವವನ್ನು ಕಳೆಯುತ್ತಾರೆ ಎಂಬ ವ್ಯವಹಾರ ಜ್ಞಾನವೂ ಬೃಹನ್ಮಠ ಶ್ರೀಗಳಲ್ಲಿಲ್ಲ. ೧೯೯೭ರ ಶರಣ ಮೇಳದಲ್ಲಿ ಹಿಂಸಾಕೃತ್ಯ ಎಸಗಲು ಬರುತ್ತಿದ್ದ ಟೆಂಪೋ ಟ್ರ್ಯಾಕ್ಸ್ ಭೀಕರ ಅಪಘಾತಕ್ಕೆ ಈಡಾಗಿ ಸ್ಥಳದಲ್ಲೇ ಅನೇಕರು ಸಾವನ್ನಪ್ಪಿದರಷ್ಟೆ. ಆ ಗಾಡಿಯ ಲೀಡರ್ ಸಹ ಈತನೇ ಆಗಿದ್ದು ಹುನಗುಂದ ಆಸ್ಪತ್ರೆಯಲ್ಲಿ ಪರದಾಡುತ್ತಿದ್ದನಂತೆ) ಹಣಕೊಟ್ಟು ದಾವಣಗೆರೆಯಿಂದ ಚಿತ್ರದುರ್ಗದ ಬೃಹನ್ಮಠದ ಶ್ರೀಗಳು ಕಳಿಸಿದ್ದರು.

ಗುಲಬರ್ಗಾ ಜನರು ಬಸವ ಕೇಂದ್ರದವರ ಕುಕೃತ್ಯಗಳಿಗೆ ಬೆಂಬಲ ಕೊಡದೆ ಇದ್ದಾಗ ನಾಲ್ಕೈದು ಜನರು ಮತ್ತು ಮುಖ್ಯವಾಗಿ ಈ ಹುಚ್ಚು ಮನುಷ್ಯ ಎಲ್ಲೋ ಒಂದೆಡೆ ನಿಂತು ಫೋಟೋ ತೆಗೆಸಿಕೊಂಡು ಪತ್ರಿಕೆಗಳಿಗೆ ದೊಡ್ಡ ಪ್ರತಿಭಟನೆ ಆಯಿತೆಂದು ಸುಳ್ಳು ಸುದ್ದಿಕೊಟ್ಟ. ಗುಲಬರ್ಗಾ ಪೋಲೀಸರು ದಾವಣಗೆರೆ ಪೋಲೀಸರಷ್ಟು ನಿಷ್ಕ್ರಿಯರು ಆಗದ್ದರಿಂದ ಕಾರ್ಯಕ್ರಮಗಳು ವೈಭವಯುತವಾಗಿ ನಡೆದವು. ದಿ.೧೩-೩-೨೦೦೦ ಈ ಆಸಾಮಿ ಉದಗೀರ್‌ಗೂ ಹಾಜರ್. ಮಹಾರಾಷ್ಟ್ರದ ಉದಗೀರಿನ ಶರಣ ಬಂಧುಗಳು ಬಹಳ ತತ್ತ್ವನಿಷ್ಠರು ಮತ್ತು ಪೋಲೀಸರೂ ಅಷ್ಟೇ ನಿಯತ್ತಿನವರು. ಈ ವ್ಯಕ್ತಿ ಪಿರಿಪಿರಿ ತಿರುಗುತ್ತಿದ್ದರೂ ಏನೇನೂ ಮಾಡಲಾಗಲಿಲ್ಲ ಅದರಲಿ, ಚಿತ್ರದುರ್ಗ ಬೃಹನ್ಮಠದವರ ಹಣ ಬರೀ ಇಂಥ ತರಲೆ ಕೆಲಸಗಳಿಗೇ, ಗೂಂಡಾಗಿರಿಗೇ ಅಪವ್ಯಯವಾಗಬೇಕೆ ?

ಪತ್ರಿಕೆಗಳ ಏಕಮುಖದ (ಅಪ)ಪ್ರಚಾರದಿಂದ ಸೃಷ್ಟಿಕರ್ತ ಲಿಂಗದೇವ ಸೂಚಕ ಪದವನ್ನು ಜನರು ಗುರುಸೂಚಕ ಪದ ಲಿಂಗಾನಂದ ಎಂದು ತಪ್ಪಾಗಿ ತಿಳಿದಿದ್ದಾಗ ಉದಾಹರಣೆ ಸಹಿತವಾಗಿ ನಾವು

ಹೇಳುತ್ತಲೇ ಸಂತೋಷಭರಿತರಾಗಿ 'ಲಿಂಗದೇವ' ವಚನಾಂಕಿತವನ್ನು ಬಳಸತೊಡಗಿದರು. ದಿ.೨೨-೩-೨೦೦೦ದಂದು ಹುಳಿಯಾರಿನ ಒಂದು ಧರ್ಮಚಿಂತನ ಸಭೆಯಲ್ಲಿ ಬಸವ ಪ್ರಸಾದ ಎಂಬ ಮೂರುವರ್ಷದ ಮುದ್ದಾದ ಮಗು ಮೈಕಿನಲ್ಲಿ ''ನೀನೊಲಿದರೆ ಕೊರಡು ಕೊನರುವುದಯ್ಯಾ'' ವಚನವನ್ನು ಹೇಳಿ ಲಿಂಗದೇವ ಎಂದು ವಚನವನ್ನು ಪೂರ್ಣಗೊಳಿಸಿದಾಗ ನಮ್ಮ ನೋವು ಎಲ್ಲ ಮರೆತು ಮನಸ್ಸು ಮುದದಿಂದ ನಲಿಯಿತು. ಪ್ರವಚನ ಕೇಳಿ, ಲಿಂಗದೇವದ ವಿವರಣೆ ಇರುವ ಪುಸ್ತಕ ಓದಿ ಪ್ರಾಜ್ಞರು ತರಲೆ ಕೇಂದ್ರದವರ ಅಪಪ್ರಚಾರಕ್ಕೆ ಕಿವಿಗೊಡದೆ ಇರುವುದು ಇವರ ಮಾತ್ಸರ್ಯ-ಅಸಹಜನೆಗಳನ್ನು ಹೆಚ್ಚಿಸಿದೆ. ದಾವಣಗೆರೆಯಲ್ಲಿ ಪ್ರವಚನ ಶುರುವಾಗುವ ಹಿಂದಿನ ದಿನದಿಂದಲೇ ಅವರ ಕಿರಿಕಿರಿ ಶುರುವಾಗಿತ್ತು. ಮೊದಮೊದಲು ಜನರು ಗಲಿಬಿಲಿಗೆ ಒಳಗಾಗಿ ಇವರ ಅಪಪ್ರಚಾರದಿಂದ ಕಡಿಮೆ ಸಂಖ್ಯೆಯಲ್ಲಿ ಬಂದರೂ ನಂತರ ಹೆಚ್ಚಿನ ಪ್ರಮಾಣದಲ್ಲಿ ಬರತೊಡಗಿದರು. ದಿನದಿನಕ್ಕೆ ಏರುತ್ತಾ ಹೊರಟಾಗ ಚಿತ್ರದುರ್ಗ ಬೃಹನ್ಮಠದವರ ಮಾತ್ಸರ್ಯ-ಅಸಹನೆಗಳೂ ವೃದ್ಧಿಯಾದವು. ಅದಕ್ಕಾಗಿ ಪೋಲೀಸರೊಡನೆ ಪೂರ್ವಭಾವಿ ಒಪ್ಪಂದ ಮಾಡಿಕೊಂಡೇ ಪ್ರವಚನ ಕೆಡಿಸಲು ತರಲೆ ಕೇಂದ್ರದವರು ಸನ್ನದ್ಧರಾದರು.

''ಲಿಂಗದೇವ'' ಅವರ ಮಾತ್ಸರ್ಯ-ಅಸಹನೆಯ ಪ್ರಕಟಣೆಗೆ ಒಂದು ನೆಪ ಮಾತ್ರ. ವಚನ ಸಾಹಿತ್ಯ ಸಂವಿಧಾನಕ್ಕೆ ಸಂಪೂರ್ಣ ವಿರುದ್ಧವಾದ ಅನೇಕ ಆಚರಣೆಗಳು, ವಿವಿಧ ಮಠಗಳಲ್ಲಿ, ಗುರುಗಳಲ್ಲಿ ತುಂಬಿ ತುಳುಕುತ್ತಿವೆ. ಅವನ್ನು ಎಂದಾದರೂ ವಿರೋಧಿಸಿದ್ದಾರೆಯೆ, ಪ್ರತಿಭಟಿಸಿದ್ದಾರೆಯೇ ? ಸೃಷ್ಟಿಕರ್ತ ದೇವನನ್ನು ಸಂಬೋಧಿಸುವ ಪದ 'ಲಿಂಗದೇವ' ಇವರಿಗೆ ಕೂರಲಗಿನಂತೆ ಇರಿಯುತ್ತಿದೆ. ಆದರೆ, ಹಡಪದ ಅಪ್ಪಣ್ಣನನ್ನು, ಮಡಿವಾಳ ಮಾಚಿದೇವರನ್ನು ಹುಟ್ಟುಬ್ರಾಹ್ಮಣರೆಂದು ಚಿತ್ರಿಸಿ ಬಹುದೊಡ್ಡ ಐತಿಹಾಸಿಕ ಅಪಚಾರವನ್ನು ಚಿತ್ರದುರ್ಗ ಮಠದವರು ಮಾಡಿದ್ದು ಸಹನೀಯವೆ ? ಬಸವರ ನೋಟ ಎಂಬ ದುರುದ್ದೇಶ ಪೂರಿತ ಕೃತಿ ಬರೆಸಿ, ಧರ್ಮಪಿತ ಬಸವಣ್ಣನವರ ಜೀವನಾಂತ್ಯವನ್ನು ಅತ್ಯಂತ ಹೀನತರದಲ್ಲಿ ಚಿತ್ರಿಸಿ, ಅವರ ಸಮಾಧಿಯು ಶ್ರೀಶೈಲದಲ್ಲಿ ಆಯಿತು ಎಂದು ಕಪೋಲ ಕಲ್ಪನೆಯನ್ನು ಹುಟ್ಟು ಹಾಕಲೆಳಸಿ, ಕೂಡಲ ಸಂಗಮವು ಧಾರ್ಮಿಕ ಶ್ರದ್ಧಾಕೇಂದ್ರವಾಗಬಾರದೆಂದು ಕುತಂತ್ರ ಮಾಡಿದರಲ್ಲ ಈ ಕುಕೃತ್ಯವನ್ನು ಒಬ್ಬ ಮಠಾಧಿಕಾರಿಯಾಗಲಿ ಸಾಹಿತಿಗಳಾಗಲಿ ಖಂಡಿಸಿದರೆ ?

'ಲಿಂಗದೇವ'-ಲಿಂಗಾಯತ ಧರ್ಮದ ದೇವರ ಹೆಸರು ; ಸೃಷ್ಟಿಕರ್ತನನ್ನು ಅಪ್ಪ ಬಸವಣ್ಣನವರು ಸಂಬೋಧಿಸಿದ ಪದ. ಇವರುಗಳು ಎಷ್ಟೇ ಬೊಬ್ಬೆ ಹೊಡೆದರೂ ಆ ಪದವು ಸಾಣೆ ಹಿಡಿದ ವಜ್ರದಂತೆ ಹೊಳಪು ಪಡೆಯುತ್ತಾ ಜನರ ಮನದಲ್ಲಿ ಬೇರೂರುವುದು ಶತಃಸಿದ್ಧ.

ಅನಾಗರಿಕತೆ, ಅಸಭ್ಯತೆ

ಒಂದು ವೇಳೆ ಅವರ ದೃಷ್ಟಿಯಲ್ಲಿ ಲಿಂಗದೇವ ಪದದಲ್ಲಿ ದೋಷವಿದೆ ಎಂದುಕೊಂಡರೂ ಬರೆಯಲು ಲೇಖನಿ, ಮಾತನಾಡಲು ಬಾಯಿ ಇರುವಾಗ ಹೊಡಿ, ಬಡಿ ಎಂಬ ದೌರ್ಜನ್ಯದ ಭಾಷೆ ಏಕೆ ಬೇಕು ? ಬಾಡಿಗೆ ಗೂಂಡಾಗಳನ್ನು ಕರೆತಂದು, ಅತ್ಯಂತ ಅಶ್ಲೀಲ ಪದಗಳಿಂದ ಹೆಣ್ಣು ಮಕ್ಕಳನ್ನು ಬೈದಾಡಿದ ಅಂದನೂರು ಕೊಟ್ರಬಸಪ್ಪ, ಪಾಟೀಲ್, ಸಿ.ಎನ್.ಹಿರೇಮಠ, ಹೆಚ್.ಎಂ.ಸ್ವಾಮಿ ಮುಂತಾದವರು ಚಿತ್ರದುರ್ಗ ಬೃಹನ್ಮಠದ ಕೀರ್ತಿಯನ್ನು ಪಾತಾಳಕ್ಕೆ ಇಳಿಸಿದ್ದಾರೆಂಬುದನ್ನು ಶ್ರೀಗಳು ಅರಿತಿರುವರೆ ?

ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು, ಮರ್ಮವನರಿಯದ ಮಾಟ ಸಯದಾನದ ಕೇಡು

Digitalized by e-Sahithya Documentation Forum
Sponsored by Sarayu Foundation Trust

ಎನ್ನುತ್ತಾರೆ ಧರ್ಮಪಿತರು. ಹಮ್ಮಿಗಾಗಿ ಧರ್ಮಪ್ರಚಾರಕರ ಕಾಲೇಜು ತೆರೆದಿದ್ದಾರೆ. ಆದರೆ ಧರ್ಮಪ್ರಚಾರಕರ ಲಕ್ಷಣಗಳೇನು ? ಕರ್ತವ್ಯವೇನು ? ಹಿಂಬಾಲಕರು ತಿಳಿದಿರುವರೆ ? ಕ್ರೈಸ್ತ ಮಿಷನರಿಗಳು ಮನೆಮನೆಗೆ ತಿರುಗುತ್ತಾರೆ. ಕಾಡು ಮೇಡು ಸಂದರ್ಶಿಸುತ್ತಾರೆ. ಏಸುವಿನ ಸಂದೇಶ ಪ್ರಚಾರ ಮಾಡುತ್ತಾರೆ. ಬರೀ ಭಕ್ತರ ಮನೆಯಲ್ಲಿ ಪಾದಪೂಜೆ ಮಾಡಿಸಿಕೊಂಡು ಬಿನ್ನಹ ತೀರಿಸುವುದಷ್ಟೆ ಧರ್ಮಪ್ರಚಾರಕರ ಕೆಲಸವೆ ? ಕ್ರೈಸ್ತ ಮಿಷನರಿಗಳಂತೆ ಸೇವೆ ಮಾಡಬೇಕೆಂದು ನಮ್ಮ ಸಂಸ್ಥೆಯ ಹೆಣ್ಣುಮಕ್ಕಳು ಪುಸ್ತಕ ಮಾರಲು, ಧರ್ಮಪ್ರಚಾರಕ್ಕೆ ಮನೆ ಮನೆ ಹಳ್ಳಿ ಹಳ್ಳಿ ಸುತ್ತುತ್ತಾರೆ. ಪ್ರಾಜ್ಞ ಜನರಾದರೆ ಅವರನ್ನು ಎಷ್ಟು ಗೌರವಿಸಬೇಕು. ಈ ತರಲೆ ಕೇಂದ್ರ, ಜಗಳದ ಬಳಗದ ಸ್ತ್ರೀ-ಪುರುಷರು ತ್ಯಾಗಿಗಳಾದ ಧರ್ಮ ಪ್ರಚಾರಕರನ್ನು ಭಿಕ್ಷುಕರು ಎಂದು ಹೀಯಾಳಿಸುತ್ತಾರೆ. ಅಪ್ಪ ಬಸವಣ್ಣನವರ ಆದೇಶದಂತೆ ''ಮೃದುವಚನವೇ ಸಕಲ ಜಪ'' ಎಂಬ ವಾಣಿಯನ್ನು ಅನುಸರಿಸಿ ಅಣ್ಣಾವರೆ, ಅಪ್ಪಾವರೆ, ಅವ್ವಾವರೆ, ಅಕ್ಕಾವರೆ ಎಂದು ಸಂಬೋಧಿಸುವುದನ್ನು ವ್ಯಂಗ್ಯವಾಡಿ ಅಕ್ಕನ ಬಳಗದ ಲಲನಾಮಣಿಗಳು ಅಂದರಂತೆ, ''ಎಲ್ಲರನ್ನು ಅಪ್ಪಾವ್ರೆ ಅನ್ನುತ್ತೀರಲ್ರೆ ? ಎಲ್ಲರೂ ನಿಮಗೆ ಅಪ್ಪ ಹೇಗಾಗುತ್ತಾರೆ...'' ಹಾಗಾದರೆ ''ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ, ಚಿಕ್ಕಯ್ಯ ನಮ್ಮಯ್ಯ ಕಾಣಿರಣ್ಣಾ ; ಅಣ್ಣನು ನಮ್ಮ ಕಿನ್ನರಿ ಬೊಮ್ಮಣ್ಣ, ಎನ್ನನೇತಕ್ಕರಿಯಿರಿ ಲಿಂಗದೇವಯ್ಯಾ ಎಂದ ಬಸವಣ್ಣನವರು ಇವರ ದೃಷ್ಟಿಯಲ್ಲಿ ತಪ್ಪಿತಸ್ಥರೇ ಸರಿ ! ಏಕೆಂದರೆ ಅವರೆಲ್ಲ ಬಸವಣ್ಣನವರ ಅಪ್ಪ, ಬೊಪ್ಪ, ಚಿಕ್ಕಪ್ಪ, ಅಣ್ಣಂದಿರಲ್ಲ ತಾನೆ ?

ಎಲ್ಲಾ ಜನರು ಹೇಳಿದರು, ಸ್ವತಃ ಡಾ|| ಪುರಂತರ ಅವರು ಬರೆದ ಪತ್ರದಲ್ಲಿ ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದಾರೆ. ಮಹಿಳೆಯರನ್ನು ಕುರಿತು ಬಳಸಬಾರದಷ್ಟು ಕೊಳಕು ಭಾಷೆಯನ್ನು ಬಸವ ಕೇಂದ್ರ, ಬಸವ ಬಳಗದ ಪ್ರಮುಖರು ಬಳಸಿದರಂತೆ. ಇಂಥ ಸಂಸ್ಥೆಗಳು ಯಾರಿಗೆ ಒಳ್ಳಿತನ್ನು ಮಾಡಬಲ್ಲವು ? ಯಾವ ಸಂಸ್ಕಾರವನ್ನು ಜನರಿಗೆ ನೀಡಬಲ್ಲವು ? ಆದ್ದರಿಂದ ಮಾನವ ಸಮಾಜದಲ್ಲಿ ಅದರಲ್ಲೂ ಲಿಂಗಾಯತ ಸಮಾಜದಲ್ಲಿ ಈಗಾಗಲೇ ಸಾಕಷ್ಟು ವೈಷಮ್ಯ-ಒಡಕು-ದ್ವೇಷ ತುಂಬಿ ತುಳುಕುವಾಗ ಇದನ್ನು ಇನ್ನಷ್ಟು ಹೆಚ್ಚು ಮಾಡುವ ತರಲೆ ಕೇಂದ್ರವನ್ನು ಹುಟ್ಟು ಹಾಕಿದ್ದು ಸರಿಯೆ ? ವಿಧಾಯಕವಾದ ಒಂದೂ ಕೆಲಸವಿಲ್ಲದೆ ಬರೀ ವಿಧ್ವಂಸಕ ಕೃತ್ಯಗಳನ್ನು ಎಸಗುತ್ತಿರುವ ಈ ತರಲೆ ಕೇಂದ್ರಗಳು ಆದರ್ಶ ಹೀನ ಹಣ ಪಿಪಾಸು ಜನರನ್ನೇ ಸೇರಿಸಿಕೊಂಡು (ಅಪರೂಪಕ್ಕೆ ಒಬ್ಬಿಬ್ಬರು ಒಳ್ಳೆಯವರು ಸೇರಿರಬಹುದು) ಊರೂರುಗಳಲ್ಲಿ ತಲೆ ನೋವಾಗುತ್ತಿವೆ.

ಪ್ರವಚನ ಕಾರ್ಯಕ್ರಮವು ದಾವಣಗೆರೆಯಲ್ಲಿ ತುಂಬಾ ಚೆನ್ನಾಗಿ ನಡೆಯುತ್ತಿತ್ತು. ಸುಂದರವಾದ ಶರಣರ ಭಾವಚಿತ್ರ, ಉತ್ತಮ ಸಾಹಿತ್ಯ ಕೃತಿಗಳು ಮಾರಾಟವಾಗುವುದನ್ನು ಕಂಡು ತರಲೆ ಕೇಂದ್ರದವರಿಗೆ ಸಂಕಟ. ಆಗಾಗ ಪೋಲೀಸರನ್ನು ಕರೆದುಕೊಂಡು ಬಂದು ಬೆದರಿಕೆ ಹಾಕಿಸುತ್ತಿದ್ದರು. ಒಂದು ದಿನ ಕೇವಲ ಇಬ್ಬರು ಅವಿದ್ಯಾವಂತ ಸಾಧಕಿಯರು ಸಂಜೆ ಆರು ಗಂಟೆಯ ಸುಮಾರಿಗೆ ಪುಸ್ತಕ ಮಳಿಗೆಯಲ್ಲಿ ಪುಸ್ತಕವನ್ನು ಹೊಂದಿಸುತ್ತಿರುವಾಗ ತರಲೆ ಕೇಂದ್ರ, ಜಗಳದ ಬಳಗದ ಕೆಲವರು ಹಲವು ಪೋಲೀಸರನ್ನು ಸಮವಸ್ತ್ರದಲ್ಲಿ, ಹಲವರನ್ನು ಮಫ್ತಿಯಲ್ಲಿ ಕರೆದುಕೊಂಡು ಬಂದು ಪುಸ್ತಕ, ಕೆಸೆಟ್ಟುಗಳನ್ನು, ಲಿಂಗದೇವ ಪದ ಇರುವುದನ್ನು ಹುಡುಕುತ್ತೇವೆ ಎಂದು ಅಲ್ಲೋಲ ಕಲ್ಲೋಲ ಮಾಡಿ ಕೈಗೆ ಸಿಕ್ಕಷ್ಟು ಪುಸ್ತಕ ಕೆಸೆಟ್ಟು ಕದ್ದೊಯ್ದಿದ್ದಾರೆ. ಹಣ ಕೊಟ್ಟು ಕೊಳ್ಳುವ ಯೋಗ್ಯತೆ ಅಥವಾ ಸಾಮರ್ಥ್ಯ ಇಲ್ಲದ ಇಂಥ ಆಸಕ್ತರಿಗೆ ಚಿತ್ರದುರ್ಗದ ಬೃಹನ್ಮಠದವರು ಹಣ, ಸಾರಾಯಿಯ ವ್ಯವಸ್ಥೆ ಮಾಡುವ ಬದಲು ನಮ್ಮ ಸಾಹಿತ್ಯವನ್ನು ಖರೀದಿಸಿ ಅವರಿಗೆ ಕೊಟ್ಟರೆ ಅವರ ಜೀವನವು ಪಾವನವಾಗುತ್ತದೆ.

ಆಕರ್ಷಣೀಯವಾಗಿ, ಇಂಪಾಗಿ ಇರುವ ನಮ್ಮ ಪುಸ್ತಕ, ಕೆಸೆಟ್ಟುಗಳನ್ನು ಈ ರೀತಿ ಕದಿಯಬೇಕೇಕೆ ? ಪೋಲೀಸರಿಗೇ ಆಗಲಿ, ತರಲೆ ಕೇಂದ್ರದವರಿಗೇ ಆಗಲಿ ಬೇಕಾದರೆ ನಾವು ಉಚಿತವಾಗಿಯೂ ಕೊಡುತ್ತೇವೆ. ಸಮವಸ್ತ್ರಧಾರಿ ಆರಕ್ಷಕರ ಈ ವೈಪರೀತ್ಯದ ಬಗ್ಗೆ ಬೆಂಗಳೂರಿನಲ್ಲಿ ಡಿ.ಜಿ.ಪಿಯವರಿಗೆ ವಿವರವಾದ ಮನವಿ ಕೊಡಲಾಯಿತು. ಮುಂದೆ ಕಿರಿಕಿರಿ ಕಡಿಮೆಯಾಯಿತು. ಪ್ರವಚನವು ನಿರಾತಂಕವಾಗಿ ಮುಂದುವರಿಯಿತು. ಮುಕ್ತಾಯ ಸಮಾರಂಭವು ದಿ ೨೬-೩-೨೦೦೦ಕ್ಕೆ ನಿಗದಿಯಾಯಿತು. ದಿ. ೨೩-೩-೨೦೦೦ರವರೆಗೆ ಎಳನಡು ಎಂಬ ಊರಲ್ಲಿ ವಿವಾಹ ಮತ್ತು ಚಿಂತನಗೋಷ್ಠಿ, ನನಗೆ ಎಡಬಿಡದ ಕಾರ್ಯಕ್ರಮ ಇದ್ದುದರಿಂದ ನಾನು ೨೪ಕ್ಕೆ ಬರಲು ಸಾಧ್ಯ ಎಂದು ತಿಳಿಸಿದೆ. ಮೂರುದಿನ ವಿಶೇಷ ಕಾರ್ಯಕ್ರಮ ಇಟ್ಟು ದಿ.೨೬ ರಂದು ಮುಕ್ತಾಯ ಇಟ್ಟೆವು, ಮಾತ್ರವಲ್ಲ ಲಿಂಗದೇವ, ಲಿಂಗಾಯತ ಅಥವಾ ಮತ್ತಾವುದೇ ಧಾರ್ಮಿಕ-ಅಧ್ಯಾತ್ಮಿಕ ವಿಷಯಗಳ ಬಗ್ಗೆ ಮುಕ್ತ ಚಿಂತನೆಯಾಗಲೆಂದು ಚರ್ಚಾಗೋಷ್ಠಿ ಸಹ ಇಡಲಾಗಿತ್ತು. ಈ ವಿಷಯ ತರಲೆ ಕೇಂದ್ರ, ಜಗಳದ ಬಳಗದವರನ್ನು ಇನ್ನಷ್ಟು ಸಂಕಟಪಡಿಸಿತೆಂದು ಕಾಣುತ್ತದೆ. ಅದಕ್ಕೆ ದಿ. ೧೯-೩-೨೦೦೦ರಂದೇ ಪ್ರವಚನ ಕೆಡಿಸಲು ಯೋಜನೆ ರೂಪಿಸಿದರು.

ಪಕ್ಷಿಗಳ ಒಂದು ಜೋಡಿ ಇತ್ತು. ಅವು ಗಿಡದಲ್ಲಿ ಒಂದು ಗೂಡು ಕಟ್ಟಿದ್ದವು. ಮಳೆಗಾಲ ಚಳಿಗಾಲದಲ್ಲಿ ಬೆಚ್ಚಗೆ ಅವು ತಮ್ಮ ಮಕ್ಕಳು-ಮರಿಗಳೊಡನೆ ನೆಮ್ಮದಿಯಿಂದ ಇರುತ್ತಿದ್ದವು. ಒಂದು ಮಂಗ ಗಿಡದಲ್ಲಿ ಕುಳಿತು ಮಳೆಯಲ್ಲಿ ತೊಯ್ದು ಗಡಗಡ ನಡುಗುತ್ತಿತ್ತು. ಆಗ ಆತ್ಮೀಯತೆಯಿಂದ ಈ ಪಕ್ಷಿಗಳು ಹೇಳಿದವು, ''ಮಂಗಣ್ಣ, ನಾವು ಚಿಕ್ಕ ಪ್ರಾಣಿಗಳು. ಆದರೆ ಗೂಡನ್ನು ಕಟ್ಟಿಕೊಂಡಿರುವುದರಿಂದ ನೆಮ್ಮದಿಯಿಂದ ಇದ್ದೇವೆ. ನೀನೂ ಒಂದು ಗೂಡು ಕಟ್ಟು. ಮಳೆಗಾಲ ಚಳಿಗಾಲದಲ್ಲಿ ಬೆಚ್ಚಗೆ ಇರಬಹುದು. ''ಮಂಗಕ್ಕೆ ಸಿಟ್ಟು ಬಂತು. ''ಇದನ್ನು ಹೇಳಲು ನೀವಾರು ? ಅತ್ಯಂತ ಕ್ಷುದ್ರ ಜಂತುಗಳು ನನಗೆ ಹೇಳುವುದೆ ?'' ಎಂದು ಆ ಮಂಗ ಪಕ್ಷಿಗಳ ಗೂಡನ್ನು ಕಿತ್ತು ಬೀಸಾಡಿತು. ಚಿತ್ರದುರ್ಗ ಬೃಹನ್ಮಠದವರ ಮಾರ್ಗದರ್ಶನದ ತರಲೆ ಕೇಂದ್ರಗಳೂ ಹೀಗೇ ಇವೆ. ''ಬಸವ ತತ್ತ್ವ ಪ್ರಚಾರ ಮಾಡಿರಿ, ವಿರಕ್ತರಾದ ನಿಮ್ಮ ಕರ್ತವ್ಯವಿದು. ಸಂಘಟನೆ ಮಾಡಿರಿ'' ಎಂದು ವಿರಕ್ತ ಮಠಾಧೀಶರಿಗೆ ಕಳಕಳಿಯಿಂದ ವಿನಂತಿಸಿದೆವು. ತರಲೆ ಕೇಂದ್ರವು ಶುರುವಾದುದು ಗೂಡುಕಟ್ಟುವ ಕೆಲಸ ಮಾಡದೆ ಅನ್ಯರ ಗೂಡು ಕಿತ್ತೆಸೆದು ದೊಂಬಿ ಮಾಡುವ ಕ್ಷುದ್ರತನವನ್ನೇ ಮಾಡತೊಡಗಿದೆ. ಪ್ರತಿಯಾಗಿ ಗೂಂಡಾಶಕ್ತಿ ತಯಾರು ಮಾಡುವ ಕ್ಷುದ್ರಜನ ನಾವಲ್ಲ. ಸಾತ್ವಿಕತೆ, ರಾಷ್ಟ್ರಪ್ರೇಮ ಆತ್ಮಬಲ, ತತ್ತ್ವನಿಷ್ಠೆ, ಸತ್ಯ ಪ್ರಿಯತೆ, ಸಮಾಜೋದ್ಧಾರದ ಕಳಕಳಿ ಇವು ನಮ್ಮ ಸಾಧನಗಳು. ಅಂತಿಮವಾಗಿ ಇವುಗಳೇ ನಿಲ್ಲುವ ತತ್ತ್ವಗಳು ಎಂಬ ವಿಶ್ವಾಸ ನಮ್ಮದು. ಈವರೆಗೂ, ಜಡರಾದ ಧೂರ್ತರಾದ ಸಂಪ್ರದಾಯವಾದಿಗಳನ್ನು ಜಾತಿವಾದಿಗಳನ್ನು ನಾವು ಎದುರಿಸಿ ಮುನ್ನಡೆಯುತ್ತಿರುವುದೇ ಈ ಆತ್ಮಬಲದಿಂದ.

ಪ್ರವಚನವು ಚೆಂದಾಗಿ ನಡೆಯುತ್ತ ಸಹಸ್ರಾರು ಜನರು ಕೇಳಿ ಹರ್ಷಿಸುತ್ತಾ, ನಮ್ಮ ಸ್ವಾಗತಕ್ಕೆ ಸಿದ್ಧತೆ ನಡೆಯುತ್ತಿರುವಾಗ ಇದ್ದಕ್ಕಿದ್ದಂತೆಯೇ ಪಿ.ಎಸ್.ಐ ಪ್ರಹ್ಲಾದ ಅವರು ಬಂದು ಮೈಕ್ ನಿಲ್ಲಿಸಿದಾಗ ದಿ. ೧೯ರಂದು ಸಂಜೆ ಪ್ರಾರ್ಥನೆಗಾಗಿ ಕಣ್ಣು ಮುಚ್ಚಿದ್ದ ಪೂಜ್ಯ ಗಂಗಾ ಮಾತಾಜಿಯವರಿಗೆ ಅಚ್ಚರಿ. ''ಜಯ ಬಸವರಾಜ'' ಹೇಳಬೇಕಿತ್ತು. ಕಣ್ತೆರೆದರೆ ಪೋಲೀಸ್ ಸಮವಸ್ತ್ರಧಾರಿ ಪಿ.ಎಸ್.ಐ ಪ್ರಹ್ಲಾದ. ''ಪ್ರವಚನ ನಿಲ್ಲಿಸಬೇಕು, ಮಾಡಬಾರದು'' ಎಂಬ ಆದೇಶ ಆತನದು. ''ಏಕೆ ?'' ಗಂಗಾ ಮಾತಾಜಿ ಪ್ರಶ್ನೆ. ಆತನ ಹಿಂದೆ ತರಲೆ ಕೇಂದ್ರ ಮತ್ತು ಜಗಳದ ಬಳಗದ ನಾಲ್ಕೈದು ಕಿರಾತರು. ''ನೀವು ಮೈಕ್ ಪರ್ಮಿಷನ್ ತೆಗೆದುಕೊಂಡಿದ್ದೀರಾ ? ತೋರಿಸಿರಿ.'' ಪಿ.ಎಸ್.ಐ ಪ್ರಶ್ನೆ. ಆತ ಎಂತಹ ಬುದ್ದೂ !

Digitalized by e-Sahithya Documentation Forum
Sponsored by Sarayu Foundation Trust

ಪೋಲೀಸ್ ಅಧಿಕಾರಿ ಕಚೇರಿಯ ಎದುರಿಗೆ ೫೫ ದಿವಸ ಪ್ರವಚನ ನಡೆದಿದೆ. ಅಂದು ೫೬ನೆಯ ದಿವಸ. ಅಂದರೆ ಅವರ ಪರ್ಮಿಷನ್ ಇಲ್ಲದೆ ನಡೆಯುತ್ತದೆಯೆ ?! ಒಂದು ವೇಳೆ ಪರ್ಮೀಷನ್ ಇಲ್ಲದಿದ್ದರೂ ನಡೆಯಗೊಟ್ಟುದು ಪೋಲೀಸರ ಬೇಜವಾಬ್ದಾರಿಯಾಗದೆ ? ಮತ್ತು ನಡೆಯದಂತೆ ನಿರ್ಬಂಧಿಸಲು ಪ್ರವಚನವೇನು ಜೂಜೇ, ಮಟ್ಕಾ, ದರೋಡೆಯೇ ? ಕಾರ್ಯಕ್ರಮ ನಡೆದಲ್ಲಿ ಹೋಗಿ ರಕ್ಷಣೆ ಕೊಡುವುದು ಪೋಲೀಸರ ಜವಾಬ್ದಾರಿಯೇ ವಿನಾ ನಿಲ್ಲಿಸುವುದೆ ?

ಮೈಕ್ ಪರ್ಮಿಷನ್ ಮುಗಿದುಹೋಗಿರುವುದಾಗಿಯೂ ಮುಂದುವರಿಸುವುದಿಲ್ಲವಾಗಿಯೂ, ಪ್ರವಚನ ನಡೆಸಕೂಡದೆಂದು ಪಿ.ಎಸ್.ಐ ಪ್ರಹ್ಲಾದರ ಆಗ್ರಹ. ಪಾಪ ! ಆತನ ಹಿಂದೆ ನಿಂತ ಕಿರಾತರು. ಮರುದಿನದ ಗಲಾಟೆ ಮುಗಿದ ಮೇಲೆ ನಮ್ಮವರು ಹೇಳಿದರು, ಗೂಂಡಾಗಳು ಏಕ ವಚನದಲ್ಲಿ ಪಿ.ಎಸ್.ಐ ಅನ್ನು ಮಾತಾಡಿಸುತ್ತಿದ್ದರಂತೆ. ಕಣ್ಸನ್ನೆ ಮಾಡಿದರೆ ಗೂಂಡಾಗಳ ಹಿಂದೆ ಪ್ರಹ್ಲಾದರು ಓಡಾಡುತ್ತಿದ್ದರಂತೆ. ಗೂಂಡಾಗಳು ಇವರ ಜೇಬಿಗೆ ಕೈ ಹಾಕುವುದೇನು ? ಹೆಗಲ ಮೇಲೆ ಕೈ ಹಾಕುವುದೇನು ? ಅವರ ವೈರಲೆಸ್ ಸೆಟ್ ತಗೊಂಡು ಆಟವಾಡುವುದೇನು ? ಇವನ್ನೆಲ್ಲ ಜನರು ಕಣ್ಣಾರೆ ಕಂಡಿದ್ದಾರೆ. ಇಂಥ ವೃತ್ತಿ ದ್ರೋಹ ಮಾಡುವುದಕ್ಕಿಂತಲೂ ಪಿ.ಎಸ್.ಐ ಪ್ರಹ್ಲಾದರು ಪೋಲೀಸ್ ವೃತ್ತಿಗೆ ರಾಜಿನಾಮೆ ಕೊಟ್ಟು ಬೇರಾವುದಾದರೂ ಉದ್ಯೋಗ ಹಿಡಿಯುವುದು ಲೇಸು.

ನಮ್ಮ ಕಾರ್ಯನಿರ್ವಾಹಕರಾದ ಶರಣ ಶಂಭುಲಿಂಗಪ್ಪ ನೇಸ್ವಿ, ಶರಣ. ರಾಚಣ್ಣ ಕಪ್ಪರದ, ಶರಣೆ ಚಂದ್ರಮ್ಮ, ಶರಣೆ ಕೊಂಡಜ್ಜಿ ಲಲಿತಮ್ಮ ಮುಂತಾದವರೆಲ್ಲ ದಿ.೨೦-೩-೨೦೦೦ರಂದು ಡಿ.ಐ.ಜಿ ಇನ್‌ಫಂಟ್, ಎಸ್.ಪಿ. ನಾರಾಯಣ ನಡುಮನಿ ಮುಂತಾದ ಎಲ್ಲರನ್ನೂ ಕಂಡಿದ್ದಾರೆ. ಅಷ್ಟರಲ್ಲಿ ಆಕಸ್ಮಿಕವಾಗಿ ಎದುರಾದ ಸಂಸದ ಶರಣ ಮಲ್ಲಿಕಾರ್ಜುನಪ್ಪನವರು ಅವರ ಬಂಧುವಾದ ಶರಣೆ ಕೊಂಡಜ್ಜಿ ಲಲಿತಮ್ಮನವರನ್ನು ಕಂಡು ಇಲ್ಲೇಕೆ ಬಂದಿದ್ದೀರಿ? ಎಂದಾಗ ಅವರು ವಿವರಗಳನ್ನು ತಿಳಿಸಿದ್ದಾರೆ. ಆಗ ಶ್ರೀ ಮಲ್ಲಿಕಾರ್ಜುನಪ್ಪನವರು ಎಸ್.ಪಿ.ಗೆ ಪರ್ಮಿಷನ್ ಕೊಡಿ ಎಂದು ಹೇಳಿದ್ದಾರೆ. ಎಸ್.ಪಿ.ಯವರು ಕೊಡಲೊಪ್ಪಿದ್ದಾರೆ. ಪ್ರವಚನವು ಪ್ರಾರ್ಥನೆಯೊಡನೆ ಶುರುವಾಗಿದೆ. ಪ್ರಾರ್ಥನೆ ಮುಗಿಯುವುದರೊಳಗೆ ತರಲೆ ಕೇಂದ್ರ, ಜಗಳದ ಬಳಗದವರು ಕೈಯಲ್ಲಿ ಲಾಠಿ, ಕಲ್ಲು ಹಿಡಿದುಕೊಂಡು ಬಂದು ನಿಂತಿದ್ದಾರೆ. ಪ್ರಾರ್ಥನೆಯಲ್ಲಿ ಲಿಂಗದೇವ ಬಳಸಿದರೆ ದೊಂಬಿ ಮಾಡಬೇಕು ಎಂದು ಅವರ ತಯಾರಿ. ಅಂದು, ದೆಹಲಿಯಿಂದ ಬಂದಿದ್ದ ಮಾತೆ ಮಂಗಳಾದೇವಿಯಿಂದ ಪ್ರಾರ್ಥನೆ. (ಏಸುಕ್ರಿಸ್ತರ ಜೀವನದ ಒಂದು ಘಟನೆ. ಯಹೂದಿಗಳು ಓರ್ವ ಮಹಿಳೆಯನ್ನು ಕರೆತಂದು ಏಸುವಿನ ಮುಂದೆ ನಿಲ್ಲಿಸಿ, ''ಇವಳು ಅನೀತಿವಂತಳು ಹಳೆ ಒಡಂಬಡಿಕೆ (Old Testament) ಪ್ರಕಾರ ಕಲ್ಲು ಬೀಸಬೇಕು. ಈಗ ನೀನು ಏನು ಹೇಳುವೆ ?'' ಎಂದಾಗ ಏಸುವು ''ಜೀವನದಲ್ಲಿ ಯಾರು ಏನೊಂದೂ ತಪ್ಪನ್ನು ಮಾಡಿಲ್ಲವೋ ಅವರು ಮೊದಲನೆಯ ಕಲ್ಲು ಎಸೆಯಲಿ'' ಎಂದು ನುಡಿದು ತಲೆ ತಗ್ಗಿಸಿ ಪ್ರಾರ್ಥನೆಯಲ್ಲಿ ತೊಡಗಿದರು. ಆಗ ಜನರು ಮೆಲ್ಲನೆ ಕರಗಿ ಹೋದರು. ಶ್ರೀ ಚನ್ನವೀರ ಕಣವಿಯವರು ಬರೆದ ಒಂದು ಗೀತೆ ನಮಗೆ ಪಿ.ಯು.ಸಿಯಲ್ಲಿತ್ತು, ಓದಿ ಪ್ರಭಾವಿತಳಾಗಿದ್ದೆ. ಯಹೂದಿಗಳಿಗಿಂತಲೂ ಕೆಟ್ಟವರು, ಕ್ರೂರಿಗಳು ಈ ದುರಾಗ್ರಹಿಗಳು ಎಂಬುದಕ್ಕೆ ದಾವಣಗೆರೆಯ ಘಟನೆ ಜ್ವಲಂತ ಸಾಕ್ಷಿ. ಇಲ್ಲಿ ಮಾಡುತ್ತಿದ್ದುದು ಪ್ರವಚನ-ಪ್ರಾರ್ಥನೆ. ಮಾಡುತ್ತಿದ್ದವರು ಮಹಿಳಾ ಜಗದ್ಗುರು ಮಾತೆ ಗಂಗಾದೇವಿ. ಪ್ರಾರ್ಥನೆ ಮಾಡಿಸುತ್ತಿದ್ದವರು ಸನ್ಯಾಸಿನಿ ಮಾತೆ ಮಂಗಳಾದೇವಿ. ಆದರೆ ಅಂಥವರ ಮೇಲೆ ದೊಂಬಿ ಮಾಡಲು ಬಂದವರು ವೀರಶೈವವಾದಿಗಳು. ಲಿಂಗದೇವ ಎಂದರೆ ದೆಹಲಿ ಜನರಿಗೆ ಅರ್ಥವಾಗದು ಎಂದು ಸೃಷ್ಟಿಕರ್ತ ಎಂದು ಮಂಗಳಾ ಪ್ರಾರ್ಥನೆ ಮಾಡಿಸುವ ಅಭ್ಯಾಸವಿದ್ದು, ಅದರಂತೆ ಇಲ್ಲಿಯೂ

ಮಾಡಿಸಿದರು. ದುರಾಗ್ರಹಿಗಳಿಗೆ ಗಲಾಟೆ ಮಾಡಲು ಅವಕಾಶವು ಸಿಗದೆ ಹೋಯಿತು. ಆಗ ವಿನಾಕಾರಣ ವೇದಿಕೆ ಹತ್ತಲು ದೊಂಬಿ ಮಾಡಲು ಯತ್ನಿಸಿದರು. ಸಾಧಕಿಯರು ಮತ್ತು ಪ್ರವಚನ ಕೇಳುತ್ತಿದ್ದ ಮಹಿಳೆಯರು ಪೂಜ್ಯ ಗಂಗಾ ಮಾತಾಜಿಯವರ ಸುತ್ತಲೂ ರಕ್ಷಣೆಗೆ ನಿಲ್ಲುತ್ತಿದ್ದಂತೆಯೇ ಅಂದನೂರು ಕೊಟ್ರಬಸಪ್ಪ, ಬಿ.ಎಂ. ಬಸವರಾಜ್, ಸಿ.ಎನ್.ಹಿರೇಮಠ, ವೀರೇಶ, ಹೆಚ್.ಎಂ.ಸ್ವಾಮಿ ಮುಂತಾದ ಗಣ್ಯರು ಬಳಸಿದ ಭಾಷೆ ಬೈಗುಳಗಳು ಅತ್ಯಂತ ಕೀಳಾಗಿದ್ದವಂತೆ ದೊಂಬಿ ಮಾಡಲು ಕರೆತಂದ ಕೆಲವರು ಈ ಪ್ರಸಂಗಕ್ಕೆ ಮೊದಲು ಅಚ್ಚುಕಟ್ಟಾಗಿ ಪ್ರಾರ್ಥನೆಗೆ ಕುಳಿತಿದ್ದರಂತೆ. ಮತ್ತೆ ಕೆಲವರಿಗೆ ಯಾರಿಗೆ ಧಿಕ್ಕಾರ ಹಾಕಬೇಕೆಂಬುದೂ ತಿಳಿಯದೆ ಜಗಳದ ಬಳಗದ ಓರ್ವ ಸನ್ಯಾಸಿನಿಯ ಹೆಸರು ಹೇಳಿ ಧಿಕ್ಕಾರ ಹಾಕಿದಾಗ, ''ಏಯ್ ಅವರಿಗೆ ಅಲ್ಲವೋ ಮಾತೆ ಮಹಾದೇವಿ, ಮಾತೆ ಗಂಗಾದೇವಿಯವರಿಗೆ ಧಿಕ್ಕಾರ ಹಾಕಿರಿ'' ಎಂದು ಅಂದನೂರು ಕೊಟ್ರಬಸಪ್ಪ ಹೇಳಿದರಂತೆ, ಸಾಮಾನ್ಯ ಜ್ಞಾನವೂ ಇಲ್ಲದ ಇಂಥಾ ಮುಗ್ಧ ವಿರೋಧಿಗಳಿಗೆ ಲಿಂಗದೇವದ ಪರಿಕಲ್ಪನೆಯಾಗಲೀ ಲಿಂಗದೇವ, ಲಿಂಗಾನಂದ ಪದಗಳ ವ್ಯತ್ಯಾಸವಾಗಲಿ ತಿಳಿಯಲು ಸಾಧ್ಯವೇ ? ಇಷ್ಟು ಮಾತ್ರವಲ್ಲ ಹಾಸ್ಟೆಲಿನ ವಿದ್ಯಾರ್ಥಿಗಳನ್ನು ಸಹ ಬಲವಂತವಾಗಿ ಕರೆತಂದಿದ್ದರೆಂದು ದಟ್ಟ ವದಂತಿ.

ಪಿ.ಎಸ್.ಐ ಪ್ರಹ್ಲಾದರ ಸಂರಕ್ಷಣೆಯಲ್ಲಿ ಅಂದನೂರು ಕೊಟ್ರಬಸಪ್ಪ ಮತ್ತು ಸಂಗಡಿಗರು ದೊಂಬಿ ಮಾಡಿ ಪ್ರವಚನವನ್ನು ನಿಲ್ಲಿಸಿದರು. ಇನ್ನೂ ಸ್ವಾರಸ್ಯಕರವಾದ ಸಂಗತಿ ಎಂದರೆ ಅಂದು ಈ ಎಲ್ಲ ಗಡಿಬಿಡಿ ಮಧ್ಯೆ ಪುಸ್ತಕ ಮಳಿಗೆ ತೆರೆಯಲು ನಮ್ಮ ಸಾಧಕರಿಗೆ ಆಗಿರಲಿಲ್ಲ. ಸಾಮಾನು ಎಲ್ಲ ಗಾಡಿಗಳ ಡಿಕ್ಕಿಯಲ್ಲಿ ಇದ್ದವಂತೆ. ಬಲವಂತವಾಗಿ ಡಿಕ್ಕಿ ತೆರೆಸಿ ಒಳಗಿದ್ದ ಸಾಮಾನು ಹೊರಗೆ ಹಾಕಿಸಿ ನೆಲದ ಮೇಲೆ ಡಿಕ್ಕಿಯಲ್ಲಿ ಇದ್ದವಂತೆ. ಬಸವಣ್ಣನವರ ಫೋಟೋ ಹರಿದು ಕಾಲಲ್ಲಿ ಚೆಲ್ಲಾಪಿಲ್ಲಿ ಮಾಡಿ ವಿಭೂತಿಯನ್ನು ಕಾಲಲ್ಲಿ ತುಳಿದು, ಬಸವಣ್ಣನವರ ಫೋಟೋ ಹರಿದು ಕಾಲಲ್ಲಿ ತುಳಿದು ಗಹಗಹಿಸಿ ಗೂಂಡಾಗಳು ನಗುತ್ತಿದ್ದರೆ ಪಿ.ಎಸ್.ಐ ಪ್ರಹ್ಲಾದರಿಗೆ ವಿಶೇಷ ಸಂತೋಷ. ಏಕೆಂದರೆ ಅಂದಿನ ಆ ಪ್ರಹ್ಲಾದ ಶಿವಭಕ್ತನಾದ ಹಿರಣ್ಯಕಷ್ಯಪುವನ್ನು ನರಸಿಂಹನಿಂದ ಕೊಲ್ಲಿಸಿದ್ದನಲ್ಲವೆ ? ಪಿ.ಎಸ್.ಐ ಪ್ರಹ್ಲಾದರಾಯರ ಸಾಹಸವೇನೇ ಇರಲಿ, ಬಸವ ಭಕ್ತರೆಂದು ಸೋಗು ಹಾಕಿರುವ ಅಂದನೂರು ಕೊಟ್ರಬಸಪ್ಪ ಸಿ.ಎನ್.ಹಿರೇಮಠ ಮುಂತಾದವರು, ಇವರ ಹಿಂದಿನ ಕೈಗಳಾದ ಚಿತ್ರದುರ್ಗದ ಬೃಹನ್ಮಠದ ಶ್ರೀ ಶಿವಮೂರ್ತಿ ಸ್ವಾಮಿಗಳು ಮತ್ತು ಆಡಳಿತಾಧಿಕಾರಿ ರಾಜನ್ ಅವರಿಗೆ ಪಾಪ-ಪುಣ್ಯಗಳ ಭೀತಿ ಎಷ್ಟು ಇದೆ ? ವ್ಯಕ್ತಿಗಳ ಮೇಲಿನ ಅಂದರೆ ನಮ್ಮ ಮೇಲಿನ ದ್ವೇಷಕ್ಕಾಗಿ ಧರ್ಮಗುರು ಬಸವಣ್ಣನವರಿಗೆ ಅವಮಾನ ಮಾಡಬಹುದೆ ? ಇದರಿಂದ ಮತ್ತೊಮ್ಮೆ ರೆವರೆಂಡ್ ಫಾದರ ಉತ್ತಂಗಿ ಚನ್ನಪ್ಪನವರ ಮಾತು, "ಪಂಚಾಚಾರ್ಯರು ಬಸವಣ್ಣನವರ ಬಹಿರಂಗ ವಿರೋಧಿಗಳು, ವಿರಕ್ತರು ಅಂತರಂಗ ವಿರೋಧಿಗಳು'' ಎಂಬುದು ಸರಿ ಎನ್ನಿಸದೆ ? ಎಂಥದೇ ಪ್ರಸಂಗದಲ್ಲೂ ತಮ್ಮ ಧರ್ಮಗುರು, ದೇವರು, ಧರ್ಮಶಾಸ್ತ್ರಕ್ಕೆ ಅವಮಾನವಾಗಬಾರದು ಎಂದು ಹೋರಾಡುವ ಸಿಖ್, ಕ್ರೈಸ್ತ, ಮುಸಲೀಮರೆಲ್ಲಿ ; ಬಸವಾದಿ ಪ್ರಮಥರ ಫೋಟೋಗಳಿಗೆ ಅವರ ಸಾಹಿತ್ಯಕ್ಕೆ ಗೂಂಡಾಗಳಿಂದ ಅವಮಾನ ಮಾಡಿಸುವ ವೀರಶೈವ ಸ್ವಾಮಿಗಳೆಲ್ಲಿ ? ಎಂಥಾ ವಿಪರ್ಯಾಸ ! ಅದೇನೆಂದರೆ ತರಲೆ

ಅತ್ಯಂತ ಹೃದಯ ಸ್ಪರ್ಶಿ ಪ್ರಸಂಗವೊಂದು ನನಗೆ ನಂತರ ಗೊತ್ತಾಯಿತು. ಅದೇನೆಂದರೆ ತರಲೆ ಕೇಂದ್ರದ ದುಷ್ಕರ್ಮಿಗಳು ಬಸವಾದಿ ಪ್ರಮಥರ ಫೋಟೋ ಹರಿದು, ತುಳಿದು, ಸಾಹಿತ್ಯವನ್ನು ಚೆಲ್ಲಾಪಿಲ್ಲಿ ಮಾಡುವುದನ್ನು ಕಂಡು ನೀಲಮ್ಮ ಎಂಬ ಓರ್ವ ಮಹಿಳೆ ಪಿ.ಎಸ್.ಐ ಪ್ರಹ್ಲಾದರ ಮೇಲಧಿಕಾರಿಗಳ ಕಾರ್ಯಾಲಯಕ್ಕೆ ಹೋಗಿ ನಡೆಯುತ್ತಿರುವ ಅನ್ಯಾಯ ಆಕ್ರಮಣಗಳನ್ನು ವಿವರಿಸಿ, ಅತ್ತು, ನ್ಯಾಯವನ್ನು ಕೊಡಿರಿ ; ಅಮಾಯಕ ಮಹಿಳೆಯರನ್ನು ರಕ್ಷಿಸಿರಿ. ಎಂದು ಓರ್ವ ಅಧಿಕಾರಿಯ

Digitalized by e-Sahithya Documentation Forum
Sponsored by Sarayu Foundation Trust

ಕಾಲು ಹಿಡಿದು ಬೇಡಿದಳಂತೆ ; ಪೋಲೀಸ್ ಸ್ಟೇಷನ್ ಮುಂದೆ ದುಃಖದಿಂದ ಪರದಾಡಿದಳಂತೆ. ಆದರೆ ಕೆಲವರು ಕಲ್ಲಿನ ಗೊಂಬೆಗಳಂತೆ ನಿಂತಿದ್ದರೆ ಮತ್ತೆ ಕೆಲವರು ನಿಸ್ಸಹಾಯಕತೆಯ ಮಾತನಾಡಿ, ಇದರ ಹಿಂದೆ ಮಠಾಧೀಶರ ಕೈವಾಡವಿದೆ ? ಎಂದೂ ನುಡಿದರಂತೆ. ಬಿಹಾರವು ಜಂಗಲ್ ರಾಜ್ಯ ಎಂದು ಅನ್ನಿಸಿಕೊಂಡಿದ್ದು ಕರ್ನಾಟಕಕ್ಕೂ ಆ ಬಿರುದು ಬರುವ ಕಾಲ ದೂರವೇನಿಲ್ಲ. ಸಭ್ಯರ, ಸುಸಂಸ್ಕೃತರ, ಶರಣ ಸಂಸ್ಕೃತಿಯ ಬೀಡು ಎಂಬ ಕೀರ್ತಿಗೆ ಪಾತ್ರವಾಗಿದ್ದ ಕರ್ನಾಟಕ ಕಂಬಾಲಪಲ್ಲಿ, ದಾವಣಗೆರೆ ಘಟನೆಗಳಿಂದ ತಾನೂ ಆ ಕುಕೀರ್ತಿಯ ಹತ್ತಿರಕ್ಕೆ ಸಾಗುವಂತೆ ತೋರುತ್ತಿದೆ.

ಪೋಲೀಸ್ ಇಲಾಖೆ ಗೂಂಡಾ ನಿರೋಧಕ ದಳವನ್ನು ರಚಿಸಿದೆ. ಆದರೆ ಅದು ಗೂಂಡಾ ಸಂರಕ್ಷಕ ದಳವೇ ಆಗುವಂತೆ ಕಾಣುತ್ತಿದೆ. ''ಮಠಾಧಿಪತಿಗಳ ಕೈವಾಡವಿದೆ ; ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳಲ್ಲಿ ನಾವೇನೂ ಮಾಡಲು ಆಗದು'' ಎಂದು ಸಹ ಪೋಲೀಸ್ ಅಧಿಕಾರಿಗಳಲ್ಲಿ ಕೆಲವರು ಹೇಳುವುದು ನೋಡಿದಾಗ ವಿಚಿತ್ರವೆನಿಸುವುದು. ಎಂತೆಂತಹ ರೌಡಿಗಳನ್ನು, ಭೂಗತ ಚಟುವಟಿಕೆಯುಳ್ಳವರನ್ನು ನಿಗ್ರಹಿಸುತ್ತೇವೆಂದು ಹೇಳಿಕೊಳ್ಳುವ ಪೋಲೀಸರು ಮಠಾಧೀಶರು ಗೂಂಡಾಗಿರಿ ಮಾಡಿಸುತ್ತಿದ್ದರೂ ನಿಸ್ಸಹಾಯಕತೆಯ ಮಾತನ್ನಾಡುವುದು ಸೂಕ್ತವೆ ? ಅಂಥ ಅಸಮರ್ಥರು ದುಷ್ಟ ನಿಗ್ರಹ ಶಿಷ್ಟಪರಿಪಾಲನೆ ಮಾಡಬೇಕಾದ ಇಲಾಖೆಯಲ್ಲಿ ಇರುವ ಬದಲು ರಾಜೀನಾಮೆ ನೀಡಿ ತಮ್ಮ ಸ್ವಭಾವಕ್ಕೆ ಅನುಗುಣವಾದ ಉದ್ಯೋಗಗಳನ್ನು ಕೈಗೊಳ್ಳಬೇಕು. ಇಲ್ಲವಾದಲ್ಲಿ ವೃತ್ತಿ ದ್ರೋಹ ಮಾತ್ರವಲ್ಲದೆ ಅಮಾಯಕರು, ಸಾತ್ವಿಕರು, ಸಜ್ಜನರಿಗೆ ಅನ್ಯಾಯವಾಗುತ್ತದೆ. ಚಿತ್ರದುರ್ಗ ಜಿಲ್ಲೆಯ ಒಂದು ಆಶ್ರಮದಲ್ಲಿ ಸಾಧಕರ ಮೇಲೆ ಇಂಥದೇ ದೌರ್ಜನ್ಯ ನಡೆದಾಗ ಆ ನಿಸ್ಸಹಾಯಕರ ನೆರವಿಗೆ ಆರ್.ಎಸ್.ಎಸ್ ನಿಂತಿತು. ಎಂಬ ಒಂದು ಸುದ್ದಿಯನ್ನೂ ನಾನೊಮ್ಮೆ ಈ ಹಿಂದೆ ಕೇಳಿದ್ದೆ.

ಮಾಜಿ ಮುಖ್ಯಮಂತ್ರಿ ಶ್ರೀ ಜೆ.ಹೆಚ್.ಪಟೇಲ್ ಚಿಂತನಶೀಲ ಸಮಾಜವಾದಿಗಳಿದ್ದರೂ ತಮ್ಮ ವೈಯಕ್ತಿಕ ದೌರ್ಬಲ್ಯದಿಂದ ತಮ್ಮ ಬುದ್ಧಿವಂತಿಕೆ, ರಾಜ ನೀತಿಜ್ಞತೆಯನ್ನು ಸರಿಯಾಗಿ ಬಳಸಿಕೊಳ್ಳಲಿಲ್ಲ. ಹೀಗಾಗಿ ಕರ್ನಾಟಕವು ಕಂಡ ದುರ್ಬಲ ಮುಖ್ಯಮಂತ್ರಿ ಎನ್ನಿಸಿಕೊಂಡುದು ಸತ್ಯ. ಆದರೆ ಅಂಥವರ ಕಾಲದಲ್ಲಿ ಕೆಲವೊಂದು ಜನರ ವಿರೋಧ ವ್ಯಕ್ತ ಮಾಡಿದರೂ ದಾವಣಗೆರೆಯಲ್ಲಿ ನಡೆದಷ್ಟು ದೌರ್ಜನ್ಯ ಎಲ್ಲಿಯೂ ನಡೆಯಲಿಲ್ಲ. ಅಂದರೆ ಅಂದಿಗಿಂತಲೂ ಈಗಿನ ಸರಕಾರದ ಆಳ್ವಿಕೆಯಲ್ಲೇ ಕಂಬಾಲಪಲ್ಲಿ, ದಾವಣಗೆರೆ ಘಟನೆಗಳು ನಡೆದುದು ಪ್ರಸ್ತುತ ಸರಕಾರದ ನಿಷ್ಕ್ರಿಯತೆ, ದೌರ್ಬಲ್ಯವನ್ನು ಸ್ಪಷ್ಟಪಡಿಸುತ್ತದೆ. ಚಿತ್ರದುರ್ಗದ ಬೃಹನ್ಮಠದವರಿಂದ ಪ್ರೇರಿತವಾದ ಗೂಂಡಾ ಜನರು ಸಾಕಷ್ಟು ಕಡೆ ಕಿರುಕುಳ ಕೊಟ್ಟರೂ, ಪೋಲೀಸರು ಕೆಲವೆಡೆ ಗೂಂಡಾಜನರನ್ನು ಬೆಂಬಲಿಸಿದರೂ ದಾವಣಗೆರೆಯಲ್ಲಿ ಪೋಲೀಸರು ಬಹಿರಂಗವಾಗಿಯೇ ಗೂಂಡಾಜನರಿಗೆ ರಕ್ಷಣೆ ಕೊಡುತ್ತಿರುವುದು ನಿಚ್ಚಳವಾಗಿ ಕಂಡಷ್ಟು ಇನ್ನೆಲ್ಲೂ ಕಾಣಲಿಲ್ಲ. ಇದನ್ನು ಜನರೂ ಗಮನಿಸಿದರು ಮತ್ತು ಡಾ|| ಪುರಂತರ ಅವರ ಕಳಕಳಿಯ ಪತ್ರವೂ ಸ್ಪಷ್ಟ ಪಡಿಸುತ್ತದೆ. ಇದು ತುಂಬಾ ನಾಚಿಕೆಗೇಡಿನ ವಿಷಯ. ಏಕೆಂದರೆ ಸಾಮಾನ್ಯ ಪೋಲೀಸರಿಗೂ ಚಲಾಯಿಸಲು ಕಾನೂನು ಅಧಿಕಾರ ನೀಡಿದೆ. ೧೯೯೭ರ ಶರಣ ಮೇಳದಲ್ಲಿ ಬಹಳ ಬಹಳ ಕೆಡುಕು ಮಾಡಬೇಕೆಂದು ಕೆಲವು ಮಠಾಧೀಶರು ಬಗೆಬಗೆಯ ತಂತ್ರಗಳನ್ನು ರೂಪಿಸಿದ್ದರು. ಇಂಟೆಲಿಜೆನ್ಸ್ ವಿಭಾಗಕ್ಕೆ ಖಂಡಿತ ಮಾಹಿತಿಯು ಲಭ್ಯವಿರುತ್ತದೆ. ಅದರ ಆಧಾರದ ಮೇಲೆ ಬಾಗಲಕೋಟೆಯಲ್ಲಿದ್ದ ಡಿವೈ.ಎಸ್.ಪಿ. ಶ್ರೀ ಬಸವರಾಜ ಮಾಲಗತ್ತಿ, ಸಿ.ಪಿ.ಐ ವಿಠ್ಠಲ್ ಐರಣಿ ಮತ್ತು ಪಿ.ಎಸ್.ಐ ವಠಾರೆ ಎಂಬುವವರು ಬಂದೋಬಸ್ತು ನಿರ್ವಹಿಸುತ್ತಿದ್ದರು. ೧೪೪ ಕಲಂ ಜಾರಿ ಮಾಡಿದರು. ನನಗೆ ಅದರ ಮಾಹಿತಿ ತಿಳಿದಿರಲಿಲ್ಲ. ೧೪೪ ಅಂದರೆ ಜನರು ಬರಬಾರದೇನೋ ಎಂದು

ತಪ್ಪು ತಿಳಿದಿದ್ದ ನಾನು ಹೀಗೇಕೆ ಮಾಡಿದಿರಿ ? ಎಂದು ನೊಂದುಕೊಂಡೆ. ಆಗ ಶ್ರೀ ಐರಣಿ ಹೇಳಿದರು, ''ಶರಣ ಮೇಳದ ಹಿತದೃಷ್ಟಿಯಿಂದ ಬಂದ ಜನರಿಗೆ ತೊಂದರೆಯಾಗದಂತೆ ರಕ್ಷಣೆ ನೀಡಬೇಕೆಂದು ಹೀಗೆ ಮಾಡಿದ್ದೇವೆ. ಶರಣ ಮೇಳ ಯಶಸ್ವಿಯಾದ ಮೇಲೆ ನೀವೇ ಹೇಳುವಿರಿ'' ಎಂದರು. ಆದರೂ ನನಗೆ ಸಮಾಧಾನ ಎನಿಸಲಿಲ್ಲ. ಆದರೆ ಎಂತೆಂತಹ ದುಷ್ಟತಂತ್ರಗಳನ್ನು ಹುಸಿ ಮಾಡಿ ಶರಣ ಮೇಳಕ್ಕೆ ಬಂದವರಿಗೆ ಕೂದಲೂ ಕೊಂಕಾಗದಂತೆ ಶ್ರೀ ಬಸವರಾಜ್ ಮಾಲಗತ್ತಿ ಶ್ರೀ ಐರಣಿ ಮತ್ತು ಶ್ರೀ ವಠಾರೆ ನಿರ್ವಹಿಸಿದಾಗ ಅವರ ಕರ್ತೃತ್ವ ಶಕ್ತಿ ನೋಡಿ ದಂಗಾದೆವು. ಪೋಲೀಸ್ ಇಲಾಖೆಗೆ ಕೀರ್ತಿ ತಂದವರಿವರು ಎನ್ನಿಸಿತು.

ಎರಡು ಲಾರಿಗಳಲ್ಲಿ ಬಾಡಿಗೆ ಗೂಂಡಾ ಜನರನ್ನು ಮಹಾಮನೆಗೆ ನುಗ್ಗಿಸಲು ಒಂದು ತಂತ್ರವನ್ನು ಮಠಾಧೀಶರು ರೂಪಿಸುತ್ತಿರುವುನ್ನು ಶ್ರೀ ಮಾಲಗತ್ತಿಯವರು ಇಂಟೆಲಿಜೆನ್ಸ ಮೂಲಕ ತಿಳಿದು ಬಂದೋಬಸ್ತು ಮಾಡಿ, ಲಾರಿಗಳಲ್ಲಿ ಗೂಂಡಾಜನರು ಬಂದಾಗ ಇಳಿಯಲಿಕ್ಕೆ ಸಹ ಬಿಡಲಿಲ್ಲ. ಅಷ್ಟು ತ್ವರಿತಗತಿಯಲ್ಲಿ ಕೆಲಸ ನಿರ್ವಹಿಸಿ ಭಲೇ ಎನ್ನಿಸಿಕೊಂಡರು. ೪-೫ ದಿವಸಗಳ ಕಾಲ ಮೂವರು ಅಧಿಕಾರಿಗಳೂ ಕೂಡಲ ಸಂಗಮದಲ್ಲೇ ಬೀಡುಬಿಟ್ಟು ಸುರಕ್ಷಿತವಾದ ವಾತಾವರಣ ಮೂಡಿಸಿದರು. ಪೋಲೀಸರು ಜನ ಸಾಮಾನ್ಯರ ಹಿತೈಷಿಗಳು ಎಂಬ ಭಾವನೆ ಮೂಡಿಸಿದರು. ದಾವಣಗೆರೆಯಲ್ಲಿ ಪೋಲೀಸರು ಜನಸಾಮಾನ್ಯರ, ಸಾತ್ವಿಕ ಜನರ ವಿರೋಧಿಗಳು ; ಗೂಂಡಾಗಳ ರಕ್ಷಕರು ಎಂಬ ಭಾವವನ್ನು ಅವರು ಮೂಡಿಸಿಕೊಂಡರು. ನಾನು ಒಂದು ಜೋಕ್ ಓದಿದ್ದೆ. ಅಂತರರಾಷ್ಟ್ರೀಯ ಸಮ್ಮೇಳನವಿತ್ತು. ಒಂದೇ ವಿಮಾನದಲ್ಲಿ ನಾಲ್ವರು ಅಧಿಕಾರಿಗಳು ಪ್ರಯಾಣಿಸುತ್ತಿದ್ದರು. ಅಮೇರಿಕಾದ ಪೋಲೀಸ್ ಅಧಿಕಾರಿ ಹೇಳಿದನಂತೆ ಯಾವುದೇ ದರೋಡೆ, ಕೊಲೆ, ಕಳ್ಳತನ ನಡೆದರೆ ಒಂದು ತಿಂಗಳಿನಲ್ಲಿ ಅಪರಾಧಿಗಳನ್ನು ನಾವು ಹಿಡಿಯುತ್ತೇವೆ. ಆಗ ಇಂಗ್ಲೆಂಡಿನವನು ಹೇಳಿದನಂತೆ ನಾವು ೧೫ ದಿವಸದಲ್ಲಿ ಹಿಡಿಯುತ್ತೇವೆ. ಸ್ಕಾಟಲೆಂಡ್ ಪೋಲೀಸ್ ಅಧಿಕಾರಿ ಹೇಳಿದನಂತೆ ನಾವು ೨೪ ಗಂಟೆಗಳಲ್ಲಿ ಹಿಡಿಯುತ್ತೇವೆ. ಭಾರತೀಯ ಅಧಿಕಾರಿ ಮೌನವಾಗಿ ಕುಳಿತಿದ್ದನಂತೆ, ನಿಮ್ಮಲ್ಲಿ ? ಎಂದು ಕುತೂಹಲದಿಂದ ಉಳಿದ ಮೂವರು ಪ್ರಶ್ನಿಸಿದರಂತೆ. ಆತ ಶಾಂತವಾಗಿ ಹೇಳಿದನಂತೆ, ''ಅಂತಹ ಕೆಲಸವನ್ನು ಯಾರು, ಎಲ್ಲಿ ಮಾಡುತ್ತಾರೆ ಎಂಬುದು ನಮಗೆ ಮೊದಲೇ ಗೊತ್ತಿರುತ್ತೆ'' ಈ ಜೋಕ್ ಕೇಳಿ ನಾವು ಮನವಾರೆ ನಕ್ಕಿದ್ದೆವು. ಆದರೆ ದಾವಣಗೆರೆಯ ಘಟನೆ ನೋಡಿದ ಮೇಲೆ ಇದು ನೂರಕ್ಕೆ ನೂರು ಸತ್ಯ ಎನ್ನಿಸಿತು. ''ಅವರು ಗಲಾಟೆ ಮಾಡುತ್ತಾರೆ'' ಎಂದು ಕಾಲಜ್ಞಾನವನ್ನು ಸ್ಪಷ್ಟವಾಗಿ ಅಧಿಕಾರಿಗಳು ನುಡಿಯುತ್ತಿದ್ದರೇ ವಿನಾ ಮಠಾಧೀಶರಿಂದ ಪ್ರೇರಿತರಾದ ಗೂಂಡಾ ಜನರನ್ನು ಹೇಗೆ ನಿಯಂತ್ರಿಸಬೇಕು ಎಂಬ ಯಾವ ಸದುದ್ದೇಶವನ್ನೂ ಹೊಂದಿರಲಿಲ್ಲ. ಇಂಥ ವೃತ್ತಿ ದ್ರೋಹ ಮಹಾಪಾಪ ! ಇದು ದೇಶದ್ರೋಹವೂ ಹೌದು.

ಸರಿ, ಶರಣ ಬಂಧುಗಳು ಪೋಲೀಸ್-ಗೂಂಡಾ ಸಾಂಗತ್ಯ-ಸ್ನೇಹ ನೋಡಿ ಪೂಜ್ಯ ಗಂಗಾ ಮಾತಾಜಿಯವರನ್ನು ಮನೆಗೆ ತೆರಳಲು ವಿನಂತಿಸಿಕೊಂಡರು, ಒತ್ತಾಯದಿಂದ ಓರ್ವರು ತಮ್ಮ ಮನೆಗೇ ಕರೆದೊಯ್ದರು. ರಾತ್ರಿ ೧೨ರ ಸುಮಾರಿಗೆ ಗೂಂಡಾ ಜನರು ಪಿ.ಎಸ್.ಐ ಪ್ರಹ್ಲಾದರ ನೇತೃತ್ವದಲ್ಲಿ ಡಾ|| ಪುರಂತರ್ ಅವರ ಆಸ್ಪತ್ರೆ ಬಳಿ ಬಂದರಂತೆ. ''ಇಲ್ಲಿ ಉಳಿದುಕೊಂಡಿರುವ ಗಂಗಾ ಮಾತಾಜಿಯವರನ್ನು, ಅವರ ಸಿಬ್ಬಂದಿಯನ್ನು ಹೊರಗೆ ಹಾಕಬೇಕು ; ಇಲ್ಲವಾದರೆ ಬೆಂಕಿ ಹಚ್ಚುತ್ತೇವೆ'' ಎಂದರಂತೆ. ಡಾ|| ಆರ್.ಡಿ.ಪುರಂತರ, ಬಸವಣ್ಣನ ಹೆಸರಿಟ್ಟುಕೊಂಡು ಕೇಂದ್ರ, ಬಳಗ ನಡೆಸುವ ಆ ಜನರ ಕ್ರೂರ ಮತ್ತು ಅಸಹ್ಯ ವರ್ತನೆ ಕಂಡು ಜಿಗುಪ್ಸೆಗೊಂಡರಂತೆ. ಡಾಕ್ಟರ್ ಎಂಥಾ ಉನ್ನತ ವ್ಯಕ್ತಿ ಪವಿತ್ರಾತ್ಮರು !

Digitalized by e-Sahithya Documentation Forum
Sponsored by Sarayu Foundation Trust

ಡಾ|| ಆರ್.ಡಿ.ಪುರಂತರು ಅವರು ಹೇಳಿದರಂತೆ, ''ನೀವು ಹೀಗೆ ಒತ್ತಾಯಿಸಬಾರದು. ಇಂಥ ಹೊತ್ತಿನಲ್ಲಿ ಹೊರಗೆ ಹಾಕಬೇಕೆ ? ಅವರು ಗುರುಗಳು, ಪೂಜ್ಯರು, ಜ್ಞಾನಿಗಳು, ಸಾತ್ವಿಕರು, ಎಲ್ಲಕ್ಕಿಂತ ಮಿಗಿಲಾಗಿ ಮಹಿಳೆಯರು'' ಎಂದು. ಆಗ ಆ ಗೂಂಡಾ ಜನರು ಇನ್ನೊಂದು ಬೇಡಿಕೆ ಮುಂದಿಟ್ಟರಂತೆ. ''ಕಡೆಗೆ ಇವರ ಸಾಹಿತ್ಯವನ್ನಾದರೂ ಹೊರಹಾಕಿರಿ'' ಅದಕ್ಕೂ ಡಾ|| ಪುರಂತರ ಒಪ್ಪಲಿಲ್ಲ'' ಅದೂ ಅನ್ಯಾಯ ; ಸಮಾಜದ ದೇಣಿಗೆ ಹಣದಿಂದ ಮುದ್ರಿಸಿದ ಸಾಹಿತ್ಯ'' ಎಂದರಂತೆ. ಆಗ ಗೂಂಡಾಗಳಿಂದ ನಿಯಂತ್ರಿಸಲ್ಪಡುತ್ತಿದ್ದ ಪಿ.ಎಸ್.ಐ ಪ್ರಹ್ಲಾದ ಹೇಳಿದರಂತೆ, ''ಡಾಕ್ಟರೇ, ನೀವು ಸಾಹಿತ್ಯವನ್ನು ಪ್ಯಾಕ್ ಮಾಡಿಸಿ ಅವರದೇ ಗಾಡಿಯಲ್ಲಿ ಕೊಡಿರಿ. ನಾವು ಸುರಕ್ಷಿತವಾಗಿ ೪೦ ಕಿ.ಮೀ ದೂರಕ್ಕೆ ಕಳಿಸುತ್ತೇವೆ. ಅವರು ತಮಗೆ ಬೇಕಾದಲ್ಲಿಗೆ ಒಯ್ಯಲಿ. ಇದರಿಂದ ಇವರಿಗೆ ಸಮಾಧಾನವಾಗುತ್ತದೆ. ಇಲ್ಲಿಂದ ಹೋಗುತ್ತಾರೆ.'' ಮಾನ್ಯ ಡಾಕ್ಟರರು ರಾತ್ರಿ ಒಂದು ಗಂಟೆಯಲ್ಲಿ ನನಗೆ ಬೆಂಗಳೂರಿಗೆ ಫೋನ್ ಮಾಡಿದರು. ''ನೀವು ಅವರ ಮಾತು ನಂಬುವಿರಾ ? ಗೂಂಡಾ ಜನರ ಆಜ್ಞಾನುವರ್ತಿಯಾಗಿ ನಡೆಯುವ ಪಿ.ಎಸ್.ಐ ಅಷ್ಟು ಮಾಡಬಲ್ಲರೆ ?'' ಎಂದೆ.

''ನೀವು ಒಪ್ಪಿಗೆ ಕೊಡಿರಿ. ನನ್ನಂತಹ ಗೌರವಾನ್ವಿತ ವ್ಯಕ್ತಿಗೆ ಕೊಟ್ಟ ಮಾತನ್ನು ಪೂರೈಸದಿರಲಾರರು.'' ಎಂದರು. ಒಪ್ಪಿಗೆ ಕೊಟ್ಟೆ. ಅಂದನೂರು ಕೊಟ್ರಬಸಪ್ಪ ಮುಂತಾದವರ ನೇತೃತ್ವದಲ್ಲಿ ಮಹಿಳೆಯರು ವಾಸಮಾಡುತ್ತಿದ್ದ ಕೋಣೆಗಳಿಗೆ ಆ ಜನರು ಪಿ.ಎಸ್.ಐ ಮೇಲುಸ್ತುವಾರಿಯಲ್ಲಿ ನುಗ್ಗಿದರಂತೆ, ನಮ್ಮ ಹೆಣ್ಣುಮಕ್ಕಳ ಕೈಲಿ ಸಾಹಿತ್ಯವನ್ನು ಪ್ಯಾಕ್ ಮಾಡಿಸಿ ನಮ್ಮ ಗಾಡಿಗೆ ಇಡಿಸಿದರಂತೆ. ಆ ಉದ್ವಿಗ್ನ ವಾತಾವರಣದಲ್ಲಿ ರಾತ್ರಿ ೨ ಗಂಟೆಯ ಸಮಯದಲ್ಲಿ ಆಸ್ಪತ್ರೆ ಕಾಂಪೌಂಡಿನಲ್ಲಿ ಸಾಹಿತ್ಯದ ಗಂಟುಗಳನ್ನು ತಂದು ಇಟ್ಟು, ಗಾಡಿಗೆ ಇಡುವ ದೃಶ್ಯ ಕಲ್ಯಾಣ ಕ್ರಾಂತಿಯಲ್ಲಿ ಸಾಹಿತ್ಯ ರಕ್ಷಿಸಲು ಶರಣರು ಸಿದ್ಧತೆ ಮಾಡುವ ಕ್ರಾಂತಿಯೋಗಿ ಬಸವಣ್ಣ ಸಿನಿಮಾದ ದೃಶ್ಯದಂತೆ ಕಂಡಿತಂತೆ. '' ಈ ಸಾಹಿತ್ಯ ನನ್ನ ಪ್ರಾಣದಂತೆ. ಇದರ ರಕ್ಷಣೆ ನನ್ನ ಪ್ರಾಣವನ್ನು ರಕ್ಷಿಸಿದಂತೆ '' ಎಂದು ಸಿನಿಮಾದಲ್ಲಿ ಧರ್ಮಪಿತ ಬಸವಣ್ಣನವರು ಹೇಳಿದ ಮಾತುಗಳು ಅಕ್ಷರಶಃ ಕೆಲವು ಪ್ರೌಢ ಸಾಧಕರಿಗೆ ನೆನಪಿಗೆ ಬಂದವಂತೆ.

ಊರಿನ ಹೊರಗೆ ೪೦ ಕಿ.ಮೀ.ದೂರ ರಕ್ಷಣೆಯಲ್ಲಿ ಒಯ್ಯುತ್ತೇವೆ ಎಂದ ಪಿ.ಎಸ್.ಐ ಗೂಂಡಾಗಳ ನಿರ್ದೇಶನದಂತೆ ಪೋಲೀಸ್ ಠಾಣೆಗೆ ಒಯ್ದಾಗ, ಅವರು ಬಾಕ್ಸ್‌ಗಳನ್ನು ಬಿಚ್ಚಿ ಸ್ಟೇಷನ್ ತುಂಬ ಹರಡಿ, ಬೇಕಾದಷ್ಟು ಪುಸ್ತಕ ಕೆಸೆಟ್ಟುಗಳನ್ನು ಕೈ ಚೀಲಗಳಲ್ಲಿ ತುಂಬಿಕೊಂಡರಂತೆ. ಅಂದನೂರು ಕೊಟ್ರಬಸಪ್ಪನ ಕೈ ಚೀಲ ಭಾರ ತಾಳದೆ ಹರಿದು ಸಾಮಾನು ಬಿದ್ದಾಗ, 'ಇವು ನಿಮ್ಮವಲ್ಲ, ಮುರುಘಾಮಠದಿಂದ ತಂದ ಕೆಸೆಟ್ಟು'' ಎಂದರಂತೆ. ಇಂಥ ಕೊಳಕು ಜನರನ್ನು ತಮ್ಮ ಅಭಿಮಾನಿಗಳನ್ನಾಗಿ ಪಡೆದ ಶ್ರೀ ಶಿವಮೂರ್ತಿ ಸ್ವಾಮಿಗಳ ಭಾಗ್ಯವೇ ಭಾಗ್ಯ !

ಈ ಪುಸ್ತಕಗಳನ್ನು ಸೀಸ್ ಮಾಡಿರಿ ಎಂದು ಗೂಂಡಾಜನರ ಆಜ್ಞೆ. ''ಹಾಗೆ ಮಾಡಲು ನಮಗೆ ಅಧಿಕಾರವಿಲ್ಲ'' ಎಂದು ಪಿ.ಎಸ್.ಐ ವಿವರಣೆ. ಇಬ[illegible] ಮಾಡು, ನಾನು ಅತ್ತಂತೆ [illegible] ಎಂಬ ಒಪ್ಪಂದ. ಪೋಲೀಸ್ ಅಧಿಕಾರಿ ಗೂಂಡಾಗಳನ್ನು ನಿಯಂತ್ರಿಸದೆ ಅವರು ಹೇಳಿದಂತೆ ಸಾಮಾನು ತುಂಬಿದ ಗಾಡಿಯನ್ನು ಸ್ಟೇಷನ್‌ಗೆ ಒಯ್ಯುವುದೆ ? ಹೆಚ್ಚಿನ ಪೋಲೀಸ್ ಸಿಬ್ಬಂದಿ ಕರೆಸಿಕೊಂಡು ದುಷ್ಕರ್ಮಿಗಳನ್ನು ನಿಯಂತ್ರಿಸಲು ಪ್ರವಚನವನ್ನು ಸಾಂಗವಾಗಿ ನೆರವೇರಿಸಲು ಸಾಧ್ಯವಿರಲಿಲ್ಲವೆ ? ಒಂದು ವೇಳೆ ಪಿ.ಎಸ್.ಐ ಗೆ ಮಠಾಧೀಶರು ಮತ್ತು ಅವರ ಗೂಂಡಾಗಳ ಭಯವಿದ್ದರೆ ಮೇಲಧಿಕಾರಿಗಳಿಗೆ ಹೇಳಿ ರಕ್ಷಣೆ ಪಡೆಯಲು ಸಾಧ್ಯವಿರಲಿಲ್ಲವೆ ?

ಬಸವ ವಚನ ದೀಪ್ತಿ ಮಾತ್ರವಲ್ಲ ತರಂಗಿಣಿ, ವಚನ ಸಂಗಮ, ಬಸವೇಶ್ವರ ಪೂಜಾವ್ರತ ಮುಂತಾದ ಅನೇಕ ಪುಸ್ತಕಗಳನ್ನು ತಗೊಂಡಿದ್ದಾರೆ. ಭಲೇ ಶೂರ ಪ್ರಹ್ಲಾದರಾಯ !! ರಾತ್ರಿ ೨ ಗಂಟೆಯಲ್ಲಿ ''ಬಸವ ವಚನ ದೀಪ್ತಿ'' ಪುಸ್ತಕ ಮಾರುತ್ತಿದ್ದನೆಂದು ಓರ್ವ ಮುಗ್ಧ ಡ್ರೈವರ್ ಶರಣ ಬಸಪ್ಪ ಎಂಬುವವನನ್ನು ನಿಲ್ಲಿಸಿ ಫೋಟೋ ತೆಗೆಸಿಕೊಂಡು ಪತ್ರಿಕೆಗಳಿಗೆ ಪಿ.ಎಸ್.ಐ ಮತ್ತು ಅಂದನೂರು ಕೊಟ್ರಬಸಪ್ಪ ಮುಂತಾದವರು ಹಾಕಿಸಿಕೊಂಡರು. ಬಾಕ್ಸ್‌ಗಳಲ್ಲಿ ಇನ್ನಿತರ ಪುಸ್ತಕಗಳೊಡನೆ ಎಲ್ಲೆಲ್ಲೋ ಇದ್ದ ಪ್ರತಿಗಳನ್ನು ಹುಡುಕಿ ಹುಡುಕಿ ತೆಗೆದು ಮಾರುತ್ತಿದ್ದನೆಂದು ಕೇಸ್ ಮಾಡಿ ನ್ಯಾಯಾಂಗ ಬಂಧನಕ್ಕೆ ಆತನನ್ನು ಒಪ್ಪಿಸಿದರಂತೆ. ಕೆಲವು ಪೋಲೀಸರ ಶೌರ್ಯಗಳ ಬಗ್ಗೆ ಹಾಸ್ಯ ಲೇಖನ ಓದಿ ನಕ್ಕಿದ್ದುಂಟು. ಯಾರೋ ಹಿಡಿದುತಂದುಕೊಟ್ಟ ಕಳ್ಳರನ್ನು ತಾವೇ ಹಿಡಿದೆವೆಂದು ಹೇಳಿಕೊಳ್ಳುವುದು ; ನಿಜವಾದ ಕಳ್ಳರು ಮತ್ತು ಅಪರಾಧಿಗಳನ್ನು ಹಿಡಿಯಲು ಆಗದೆ ಇದ್ದಾಗ ಪಾಪ ಯಾರೋ ಸಂಭಾವಿತರನ್ನು ಹಿಡಿದು, ಚಚ್ಚಿ, ಒತ್ತಾಯದ ಒಪ್ಪಿಗೆ ಹೇಳಿಕೆ ಬರೆಸಿಕೊಳ್ಳುವುದು ಇವೆಲ್ಲ ನಡೆದೇ ಇರುತ್ತವೆ. ಇದೂ ಅಷ್ಟೇ; ರಾತ್ರಿ ೨ ಗಂಟೆಯಲ್ಲಿ'' ನಿಮ್ಮ ಸಾಮಾನುಗಳನ್ನು ಪ್ಯಾಕ್ ಮಾಡಿಕೊಡಿ, ಸುರಕ್ಷಿತವಾಗಿ ಸಾಗಿಸುತ್ತೇವೆ.'' ಎಂದ ಪಿ.ಎಸ್.ಐ ಪೋಲೀಸ್ ಠಾಣೆಗೆ ಒಯ್ದು ಚೆಲ್ಲಾಪಿಲ್ಲಿ ಮಾಡಿ, ಅಂದನೂರು ಕೊಟ್ರಬಸಪ್ಪನಂಥ ಹಣ ಕೊಟ್ಟು ಸಾಹಿತ್ಯ ಕೊಳ್ಳಲು ಅಸಮರ್ಥರಾದವರು ಕದಿಯಲು ಅವಕಾಶ ಮಾಡಿಕೊಟ್ಟು, ಸಾಮಾನುಗಳನ್ನು ಹಾಳು ಮಾಡಿದ್ದು ದರೋಡೆಯಲ್ಲವೆ? ಮಾಡುವಷ್ಟು ಹಾನಿ ಮಾಡಿ, ಬೆಳಗಿನ ಜಾವ ೪ ಗಂಟೆಗೆ ನಿಮ್ಮ ಸಾಮಾನು ತಗೊಂಡು ಹೋಗಿರಿ ಎಂದು ಹೇಳಿ, ಇನ್ನೊಂದು ನಮ್ಮ ಗಾಡಿ ತರಿಸಿ, ಅದರಲ್ಲಿ ತುಂಬಿಸಿ ಪಿ.ಎಸ್.ಐ ಕಳಿಸಿದರಂತೆ. ಬಹಳ ಧೀರರು ! ಇವರಿಗೆ ಪರಮವೀರ ಚಕ್ರ ಕೊಡಿಸಲು ದಾವಣಗೆರೆ ಡಿ.ಐ.ಜಿ ಶ್ರೀ ಇನ್‌ಫಂಟ್ ಮತ್ತು ಎಸ್.ಪಿ.ನಾರಾಯಣ ನಡುಮನಿ ಅವರು ಶಿಫಾರಸ್ಸು ಮಾಡಬೇಕೆಂದು ನಮ್ಮ ನಮ್ರ ಸಲಹೆ. ಘನ ಕಾರ್ಯ ಮಾಡಿದ ಪಿ.ಎಸ್.ಐ ಪ್ರಹ್ಲಾದರಿಗೆ ಸತ್ಕಾರ ಮಾಡಲು ಶ್ರೀ ಶಿವಮೂರ್ತಿ ಸ್ವಾಮಿಗಳಲ್ಲಿ ಕೋರಿಕೆ. ಮೊದಲೇ ದಿನಾಂಕವನ್ನು ತಿಳಿಸಿದರೆ ನಾವೂ ಒಂದು ಶಾಲು ಕಳಿಸುತ್ತೇವೆ.

ನಮಗೆ ಈ ಜನರು ಮಾಡಿದ ದೊಂಬಿಯಿಂದ ೩೦-೪೦ ಸಾವಿರ ರೂಪಾಯಿಗಳ ಸಾಮಾನು ನಷ್ಟ, ಹಣವು ಅನ್ಯಾಯವಾಗಿ ಹಾಳಾಗಿರಬಹುದು. ಇದು ನಮ್ಮ ತಪ್ಪಿನಿಂದ ಆದುದಲ್ಲ. ಆದ್ದರಿಂದ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು ನಮ್ಮನ್ನು ರಕ್ಷಿಸುವರು. ಆದರೆ ಚಿತ್ರದುರ್ಗ ಬೃಹನ್ಮಠದ ಇತಿಹಾಸಕ್ಕಂತೂ ತೊಳೆಯಲಾರದ ಕಲಂಕವನ್ನು ಈ ದೌರ್ಜನ್ಯ, ಅದೂ ಹೆಣ್ಣುಮಕ್ಕಳ ಮೇಲೆ ಮಾಡಿದ ಹೇಡಿತನದ ಆಕ್ರಮಣ ಕಲಂಕ ಹಚ್ಚಿರುವುದುಂಟು. ಇದನ್ನು ತೊಳೆದುಕೊಳ್ಳಲು ಒಂದು ಲಕ್ಷ ಬಸವ ಮಂತ್ರ ಜಪ ಮಾಡಿದರೂ ಸಾಧ್ಯವಿಲ್ಲ. ಇಡೀ ಲೇಖನದ ತುಂಬ ಪಿ.ಎಸ್.ಐ ಪ್ರಹ್ಲಾದರ ಹೆಸರು ಸಾಕಷ್ಟು ಸಲ ಉಲ್ಲೇಖವಾಗಿದೆ. ಆದರೆ ಸಣ್ಣ ವಯಸ್ಸಿನ ಓರ್ವ ಸಾಮಾನ್ಯ ಅಧಿಕಾರಿ ತನ್ನ ನೌಕರಿ ಹೋದೀತು ಎಂಬ ಭಯವೂ ಇಲ್ಲದೆ ಗೂಂಡಾಗಳನ್ನು ಇಷ್ಟು ಧೈರ್ಯವಾಗಿ, ಸ್ಪಷ್ಟವಾಗಿ [illegible] ಸವಾರು ಜನರಿಗೆ ಇದು ಅಕ್ರಮ [illegible]ದನ್ನು ನಿರ್ಭಯವಾಗಿ ಮಾಡಿ, ಉತ್ತಮವಾದ [illegible] (ಏಕೆಂದರೆ ಓರ್ವ ಪೋಲೀಸ್ ಸಮವಸ್ತ್ರಧಾರಿ ಒಬ್ಬನೇ ಇದ್ದರೂ ಆತನ ಹಿಂದೆ ಇಡೀ ಇಲಾಖೆಯ ರಕ್ಷಣೆ ಇರುತ್ತದೆ.) ಬದಲಿಗೆ ಪ್ರವಚನ ನಿಲ್ಲಿಸಲೆಂದೇ ಸರ್ವ ಸಾಹಸ ಮಾಡಿದ್ದು, ಪಿ.ಎಸ್.ಐ ಒಬ್ಬರದೇ ಕೈ ಕೆಲಸವಿದಲ್ಲ ; ಇದರ ಹಿಂದೆ ಇನ್ನೂ ಬಲಿಷ್ಠವಾದ ಅಧಿಕಾರಿಗಳ ಕೈಯಿ, ಮಠಾಧೀಶರ ಕೈವಾಡ ಇರುವುದನ್ನು ಎಂಥಾ ಮಂದಮತಿಗಳೂ ಊಹಿಸಬಹುದು. ಅದು ತನಿಖೆಯಿಂದ ಮಾತ್ರ ಹೊರಬರಲು

Digitalized by e-Sahithya Documentation Forum
Sponsored by Sarayu Foundation Trust

ಸಾಧ್ಯ.

ನಮ್ಮ ದೇಶದ ನಿಷ್ಕ್ರಿಯ ವ್ಯವಸ್ಥೆಯಲ್ಲಿ ಸಾತ್ವಿಕರು, ಸಜ್ಜನರು, ಸತ್ಯವಾದಿಗಳೂ ಆದ ಜನರಿಗೆ ನ್ಯಾಯದೊರೆಯುವ ಯಾವ ಭರವಸೆಯು ಇಲ್ಲವಾದರೂ ಇಷ್ಟು ವಿವರವಾಗಿ ಈ ಲೇಖನವನ್ನು ನಾನು ಬರೆದಿರುವ ಉದ್ದೇಶ ಹೀಗಿದೆ.

೧. ಬೃಹನ್ಮಠದವರು ಹಣವಂತರು, ಗೂಂಡಾ ಶಕ್ತಿಗಳನ್ನು ಮಾತ್ರವಲ್ಲದೆ ಪತ್ರಿಕೆಗಳನ್ನು ಸಹ ಕೊಳ್ಳಬಲ್ಲ ಶಕ್ತಿವಾನರು. ಗುಲಬರ್ಗಾದ ದಿ.೧-೩-೨೦೦೦ ಘಟನೆಯ ವರದಿಯಂತೆ, ಅಲ್ಲಿ ನಡೆದುದೇ ಒಂದು, ಪತ್ರಿಕೆಗಳಲ್ಲಿ ಪ್ರಚಾರವಾದುದೇ ಮತ್ತೊಂದು. ಕುಕೃತ್ಯಗಳನ್ನು ಮಾಡಿಸುವುದಷ್ಟೇ ಅಲ್ಲ ಅಷ್ಟೇ ಹೆಮ್ಮೆಯಿಂದ, ಚೆನ್ನಾಗಿ ಪ್ರಚಾರ ಪಡೆದುಕೊಳ್ಳಬಲ್ಲ ಜಾಣ್ಮೆ, ಆರ್ಥಿಕ ಸಾಮರ್ಥ್ಯ ಇರುವವರು.

ನಮ್ಮಲ್ಲಿ ಬರವಣಿಗೆ ಬಿಟ್ಟರೆ ಉಳಿದ ಅಂಶಗಳು ಇಲ್ಲ. ಹೀಗಾಗಿ ವಾಸ್ತವಿಕವಾಗಿ ನಡೆದುದು ಏನೆಂದು ಕೆಲವರಿಗಾದರೂ ಕನಿಷ್ಟ ಪಕ್ಷ ಕಲ್ಯಾಣಕಿರಣದ ಓದುಗರಿಗಾದರೂ ತಿಳಿಯಲೆಂದು ಈ ಲೇಖನ.

೨. ನಡೆದ ಸಂಗತಿಗಳು ದಾಖಲಾದರೆ ಹಿಂದಿನ ಕಲ್ಯಾಣ ಕ್ರಾಂತಿಯನ್ನು ಇಂದಿನ ಕವಿ-ಸಾಹಿತಿಗಳು ಬಣ್ಣಿಸುವಂತೆ, ಇಂದಿನ ಕ್ರಾಂತಿಯೂ ದಾಖಲಾದರೆ ಮುಂದಿನ ಬರಹಗಾರರಿಗೆ ಬರೆಯಲು ಒಳ್ಳೆಯ ಸರಕು ಸಿಗುತ್ತದೆ. ಮಹಾಚೈತ್ರದಲ್ಲಿ ಶ್ರೀ ಹೆಚ್.ಎಸ್. ಶಿವಪ್ರಕಾಶರು ಜಂಗಮರು ೧,೨,೩ ಹೇಗೆ ಶರಣರ ಮೇಲೆ ದೌರ್ಜನ್ಯವೆಸಗಿದರು ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಉಳಿದ ವಿಷಯಗಳಲ್ಲಿ ಅವರು ಶರಣರಿಗೆ ಅಪಚಾರ ಮಾಡಿದ್ದರೂ ಜಂಗಮರ ದೌರ್ಜನ್ಯವನ್ನು ಪ್ರಾಮಾಣಿಕವಾಗಿ ಚಿತ್ರಿಸಿದ್ದಾರೆ. ದಾವಣಗೆರೆಯ ದೌರ್ಜನ್ಯವು ಮಹಾಚೈತ್ರದ ಜಂಗಮರ ದೌರ್ಜನ್ಯದ ನಕಲಿನಂತಿದೆ. ಬಹುಶಃ ಅದನ್ನು ಓದಿಯೇ ಸಿ.ಎನ್. ಹಿರೇಮಠ ಮತ್ತು ಹೆಚ್.ಎಂ.ಸ್ವಾಮಿಯವರು ಈ ದೌರ್ಜನ್ಯದ ಕಾರ್ಯಕ್ರಮ ರೂಪಿಸಿರಬಹುದು.

ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯವು ಸೃಷ್ಟಿಕರ್ತನನ್ನು ''ಲಿಂಗದೇವ'' ಎಂದೇ ಕರೆದಿದೆ. ಇದು ದೇವನಿಗೆ ಅಪ್ಪ ಬಸವಣ್ಣನವರಿಟ್ಟ ಪ್ರೀತಿಯ, ತಾತ್ತ್ವಿಕ ಹೆಸರು. ಅಂಥ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರ ಮಹಿಮೆಯನ್ನು ಪ್ರಚಾರ ಮಾಡುವುದೇ ನಮ್ಮ ಜೀವಿತದ ಧ್ಯೇಯ. ಯಾವುದೇ ಕುತಂತ್ರ, ದೌರ್ಜನ್ಯಗಳು ಸತ್ಯದ ಬಾಯಿಯನ್ನು ಮುಚ್ಚಲಾರವು ಎಂಬುದು ಈ ತರಲೇ ಕೇಂದ್ರ, ಜಗಳದ ಬಳಗದವರಿಗೆ ನೆನಪಿರಲಿ. ★

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

★ ಬಸವ ವಚನಾಮೃತ ★

ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸಿಕೊಂಡಂತೆ,
ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ,
ಹುಲಿಯ ಮೀಸೆಯ ಹಿಡಿದುಕೊಂಡು ಒಲಿದುಯ್ಯಾಲೆಯಾಡುವಂತೆ,
ಲಿಂಗದೇವನ ಶರಣರೊಡನೆ ಮರೆದು ಸರಸವಾಡಿದಡೆ
ಸುಣ್ಣದ ಕಲ್ಲು ಮಡಿಲಲ್ಲಿ ಕಟ್ಟಕೊಂಡು ಮಡುವ ಬಿದ್ದಂತೆ! -ಬ.ವ.ದೀ.೬೬೦

ಬಸವ ಧರ್ಮದ ಮಹಾಜಗದ್ಗುರು ಪೂಜ್ಯ ಶ್ರೀ ಮಾತೆ ಮಹಾದೇವಿಯವರಿಗೆ ನಮನ

ಜೈ ಮಾತೆ ಜಗದ್ಗುರುವೆ
ಮಾತೆ ಮಹಾದೇವಿ ಜೈ ಜೈ ॥ ಪ ॥
ಹಾಡುವೆವು ಇಂದು ಸಂತೋಷದಿಂದ
ಶರಣರ ಬಳಗಕ್ಕೆ ಪರಮಾನಂದ
ಅಪ್ಪಾಜಿಯವರ ಸದಿಚ್ಛೆಯಂತೆ
ಬಸವ ಗುರು ಪೀಠಕ್ಕೆ ಏರಿದ ಜ್ಯೋತಿ ॥ ೧ ॥
ಶರಣೆ ಗಂಗಮ್ಮ ಬಸಪ್ಪರ ಒಡಲಲ್ಲಿ
ಜನಿಸಿದಿರಿ ನೀವು ಚಿತ್ರದುರ್ಗದಲಿ
ರತ್ನಮ್ಮನೆಂಬ ಜನ್ಮ ನಾಮವ ಪಡೆದು
ಬೆಳೆದಿರಿ ಬಸವನ ಮುದ್ದುಮಗಳಾಗಿ ॥ ೨ ॥
ಗುರುಲಿಂಗಾನಂದರ ಶಿಷ್ಯತ್ವ ಪಡೆದು
ಅಕ್ಕಮಹಾದೇವಿಯ ಕಾರುಣ್ಯ ಧರಿಸಿ
ಪ್ರಥಮ ಸ್ತ್ರೀ ಗುರುವಾಗಿ ಪೀಠವನೇರಿ
ಬಸವ ಸಂದೇಶವ ಬೀರಿದ ದೀಪ್ತಿ ॥ ೩ ॥
ಶರಣ ಮೇಳದ ಸೊಬಗ ಶರಣರಿಗೆ ತೋರಿ
ಬರುವಂತಹ ಭಕ್ತರಿಗೆ ವಚನಾಮೃತ ನೀಡಿ
ಲಿಂಗದೇವನ ಮಹಿಮೆ ಜಗಕ್ಕೆಲ್ಲ ಬೀರಿ
ಬಸವಾದಿ ಪ್ರಮಥರ ಸಂದೇಶ ಸಾರಿ ॥ ೪ ॥
ಮುಖದಲ್ಲಿ ಗೆಲುವು ಮಾತಲ್ಲಿ ಒಲವು
ಬೆಳಗುವ ಚಿತ್ಕಳೆ ಮಾತಾಜಿ ನೀವು
ಗುರು ಲಿಂಗಾನಂದರು ತೊಟ್ಟಂತಹ ಪೈಜೆಯ
ಬಸವ ಸಂಕಲ್ಪವ ಪೂರೈಸಿದ ತ್ಯಾಗಿ ॥ ೫ ॥
ಬಸವ ಮಹಾಮನೆಯ ಕಟ್ಟಿದಿರಿ ತಾವು
ಬಸವ ಭಕ್ತರಿಗೆಲ್ಲ ದೊರಕಿತು ಠಾವು
ನಾವೆಲ್ಲ ಕೂಡಿ, ಜಯಘೋಷ ಮಾಡಿ
ನಲಿವೆವು ನಿಮ್ಮನ್ನು ಹಾಡಿಕೊಂಡಾಡಿ ॥ ೬ ॥

ಶರಣೆ. ಅನ್ನಪೂರ್ಣಾ ಮನ್ನಾಪುರ
ಧಾರವಾಡ

Digitalized by e-Sahithya Documentation Forum
Sponsored by Sarayu Foundation Trust

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥



ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ
ಕೊಟ್ಟದ್ದು ಕೆಟ್ಟಿತ್ತೆನಬೇಡ । ಅದು ಮುಂದೆ
ಕಟ್ಟಿಹುದು ಬುತ್ತಿ ಸರ್ವಜ್ಞ ॥

ಧನ ದಾಸೋಹಿಗಳ ಗಮನಕ್ಕೆ

ಶರಣ ಬಂಧುಗಳೇ,

ತಮ್ಮೆಲ್ಲರಿಗೆ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಮಂತ್ರಪುರುಷ ಬಸವಣ್ಣನವರ ಸ್ಮರಣೆಯಲ್ಲಿ ಶುಭ ಹಾರೈಕೆಗಳು.

ತೊಟ್ಟು ಬಿಡದನ್ನಕ್ಕ ಮತ್ತಾ ಬುಡದಾಸೆ ಬೇಕು
ಮರ್ತ್ಯದ ಹಂಗುಳ್ಳನ್ನಕ್ಕ ಸತ್ಯ ಶರಣರ ಸಂಗ
ನಿತ್ಯ ಜಂಗಮ ಸೇವೆ ಕೃತ್ಯವಿರಬೇಕು
ಅಮರೇಶ್ವರ ಲಿಂಗವನರಿವುದಕ್ಕೆ -ಆಯ್ದಕ್ಕಿ ಮಾರಯ್ಯ

ಎಲ್ಲಿಯವರೆಗೆ ಒಂದು ಕಾಯಿ ಗಿಡದ ಬುಡಕ್ಕೆ ಅಂಟಿಕೊಂಡಿರುವುದೋ ಅಲ್ಲಿಯವರೆಗೆ ಅದು ಗಿಡದ ಹಿತಚಿಂತನೆ ಮಾಡಲೇಬೇಕು. ಅದೇ ರೀತಿ ವ್ಯಕ್ತಿ ಎಂಬ ಕಾಯಿಯು ಮರ್ತ್ಯ ಎಂಬ ಗಿಡದ ಬುಡಕ್ಕೆ ಧರ್ಮ ಎಂಬ ತೊಟ್ಟಿನ ಸಹಾಯದಿಂದ ಎಲ್ಲಿಯವರೆಗೆ ಅಂಟಿಕೊಂಡಿರುವನೋ ಅಲ್ಲಿಯವರೆಗೆ ಆತ ಮರ್ತ್ಯಲೋಕದ ಹಿತಚಿಂತನೆ ಮಾಡಲೇಬೇಕು. ಮಾಡುವುದಕ್ಕೆ ಸಾಧನವೆಂದರೆ ಸತ್ಯ ಶರಣರ ಸಂಗ ಮತ್ತು ನಿತ್ಯ (ನಿರಂತರ) ಜಂಗಮಸೇವೆ, ಶರಣರ ಸಂಗದಲ್ಲಿ ಒಡನಾಡುವುದರಿಂದ ಉತ್ತಮ ಆದರ್ಶಗಳು, ಒಳ್ಳೆಯ ಮೌಲ್ಯಗಳು ಅಳವಡುತ್ತವೆ. ನಿರಂತರವಾದ ದಾಸೋಹದಿಂದ ಸಮಾಜಕ್ಕೆ ಸೇವೆಯು ಸಲ್ಲುತ್ತದೆ. ದಾಸೋಹವು ತನು, ಮನ, ಧನ ತ್ರಿವಿಧ ಸಾಧನಗಳ ಮೂಲಕ ನಡೆಯುತ್ತದೆ. ತನುವಿನಿಂದ ಸ್ವತಃ ಧರ್ಮ ಪ್ರಚಾರ ಮಾಡುವುದು, ಕಾರ್ಯಕ್ರಮಗಳು ನಡೆದಾಗ ಸ್ವತಃ ಸೇವೆ ಮಾಡುವುದು ತನು ದಾಸೋಹ. ವೇಳೆ ಸಿಕ್ಕಾಗಲೆಲ್ಲ ಒಳ್ಳೆಯ ವಿಚಾರಗಳನ್ನು ಹೇಳುತ್ತಿರುವುದು, ಧರ್ಮ ಪ್ರಚಾರವಾಗಲೆಂದು ಇನ್ನಿತರರನ್ನೂ ಪ್ರೋತ್ಸಾಹಿಸುವುದು ಮನ ದಾಸೋಹ. ತಾನು ಗಳಿಸಿದ, ಉಳಿಸಿದ ಹಣದ ಒಂದು ಪಾಲನ್ನು ಕಡ್ಡಾಯವಾಗಿ ಧರ್ಮ ಪ್ರಚಾರಕ್ಕೆ, ಸಮಾಜ ಸೇವೆಗೆ ಬಳಸುವುದು ಧನ ದಾಸೋಹ.

ಧರ್ಮ ಪ್ರಚಾರಕ್ಕೆ ಸಾಧನವಾಗಲೆಂದು ಈಗ ನಾವು ಕಟ್ಟಿರುವ ಸಂಸ್ಥೆಗಳು ಕೆಲವು ಇವೆ.

೧. ಬೆಂಗಳೂರಿನ ರಾಜಾಜಿ ನಗರದಲ್ಲಿರುವ ಬಸವ ಮಂಟಪ
೨. ಬೆಂಗಳೂರು-ಮೈಸೂರು ರಸ್ತೆಯಲ್ಲಿರುವ ಬಸವ ಗಂಗೋತ್ರಿ
೩. ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ
೪. ಕೂಡಲ ಸಂಗಮದ ಶರಣ ಲೋಕದಲ್ಲಿರುವ ಮಹಾಮನೆ ಮಹಾಮಠ.

ಈ ಎಲ್ಲವೂ ಪ್ರತ್ಯೇಕ ಟ್ರಸ್ಟ್‌ಗಳಾಗಿದ್ದು, ವಿವಿಧ ಯೋಜನೆಗಳನ್ನು ಕಾರ್ಯ ರೂಪಕ್ಕೆ ತಂದಿವೆ, ತರುತ್ತಿವೆ. ಈ ಎಲ್ಲ ಸಂಸ್ಥೆಗಳ ಆಶ್ರಯದಲ್ಲಿ ಹಲವಾರು ಯೋಜನೆಗಳನ್ನು ರೂಪಿಸಿದ್ದು, ಅವುಗಳಲ್ಲಿ ಕೆಲವೊಂದನ್ನು ಈಗ ಕಾರ್ಯರೂಪಕ್ಕೆ ತರಲಾಗುತ್ತಿದೆ.

ಬಸವ ಧರ್ಮ ಪೀಠ : ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿರುವ ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮ ಪೀಠ ಟ್ರಸ್ಟ್ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು

ಬಂದ ಯಾತ್ರಾರ್ಥಿಗಳಿಗೆ ಉಳಿಯಲು ದಾನಿಗಳ ನೆರವಿನಿಂದ ಅಕ್ಕನಾಗಲಾಂಬಿಕಾ ಶರಣಧಾಮ ಎಂಬ ೫೦ ಕೋಣೆಗಳ ವಸತಿ ಗೃಹವನ್ನು ನಿರ್ಮಿಸಿದೆ. ಪುನಃ ೮೦ ಕೋಣೆಗಳ ಸರ್ವಜ್ಞ ಶರಣಧಾಮ ಎಂಬ ಇನ್ನೊಂದು ವಸತಿ ಗೃಹವನ್ನು ಈಗ ನಿರ್ಮಿಸುತ್ತಲಿದೆ. ಡಬ್ಬಲ್ ಕೋಣೆಗೆ ದಾನಿಗಳಿಂದ ೭೧,೦೦೦ ರೂ.ಗಳನ್ನು, ಸಿಂಗಲ್ ಕೋಣೆಗೆ ೫೧,೦೦೦ ರೂ.ಗಳನ್ನು ದೇಣಿಗೆಯಾಗಿ ಪಡೆಯಲಾಗುವುದು. ಉಳಿದಂತೆ ಕಟ್ಟಡ ನಿಧಿಗೆ ದಾನಿಗಳು ಎಷ್ಟು ಬೇಕಾದರೂ ಸಹಾಯವನ್ನು ಮಾಡಬಹುದು. ಪ್ರತಿ ವರ್ಷದ ಜನವರಿ ೧೧ ರಿಂದ ೧೫ರವರೆಗೆ ನಡೆಯುವ ಶರಣ ಮೇಳದ ದಾಸೋಹ ನಿಧಿಗೆ ೫೦೦೦ರೂ ಮತ್ತು ಮೇಲ್ಪಟ್ಟು ಎಷ್ಟನ್ನಾದರೂ ಕೊಡಬಹುದು. ಆ ಹಣವನ್ನು ಪುದುವಟ್ಟಾಗಿ ಇಟ್ಟು ಬಡ್ಡಿಯನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ನಿತ್ಯ ದಾಸೋಹಕ್ಕಾಗಿ ೧೧೧೧-೦೦ ರೂ.ಗಳನ್ನು, ನಿತ್ಯ ಪೂಜೆಗಾಗಿ ೫೦೧ ರೂ.ಗಳನ್ನು ಸ್ವೀಕರಿಸಲಾಗುತ್ತಿದೆ. ದಾಸೋಹಿಗಳಿಗೆ ಆ ದಿನಾಂಕದಂದು ಬರಲು ಸೂಚನಾ ಪತ್ರ ಕಳಿಸಲಾಗುವುದು. ಅವರಿಗೆ ಬರಲಾಗದಿದ್ದರೆ ಆ ದಿನಾಂಕದ ನಂತರ ಪ್ರಸಾದವನ್ನು ಅಂಚೆಯಲ್ಲಿ ಕಳಿಸಲಾಗುವುದು.

ಯಾತ್ರಿ ಧಾಮಗಳ ಯೋಜನೆ

ಶರಣ ಮೇಳದ ಸಮಯದಲ್ಲಿ ಬಂದಾಗ ವಾಸ್ತವ್ಯ ಮಾಡಲು ತಮಗೆ ಅನುಕೂಲವಾಗಲೆಂದು ದಾನಿಗಳು ಕೋಣೆಗಳನ್ನು ಕಟ್ಟಲು ದೇಣಿಗೆ ನೀಡಿದ್ದಾರೆ. ಈಗ ಹೆಚ್ಚುತ್ತಿರುವ ಪ್ರವಾಸಿಗರ ಮತ್ತು ವಿದ್ಯಾರ್ಥಿ ಪ್ರವಾಸಿಗರ ಅಗತ್ಯಕ್ಕೆ ಅನುಗುಣವಾಗಿ ಸಾಮೂಹಿಕವಾಗಿ ಪ್ರವಾಸಿಗಳು ಇರುವಂತಹ ಯಾತ್ರಿ ಧಾಮಗಳನ್ನು ಕಟ್ಟಿಸುವುದು ಅಗತ್ಯವಾಗಿದೆ. ಒಂದು ಬಸ್ಸಿನಲ್ಲಿ ಬರುವ ಸಾಮಾನ್ಯ ವರ್ಗದ ಪ್ರವಾಸಿಗಳು ಒಂದು ಕಡೆ ಉಳಿಯಲು ಮತ್ತು ತಮ್ಮ ತಂಡಕ್ಕೆ ತಾವೇ ಅಡಿಗೆ ಮಾಡಿಕೊಳ್ಳಲು ಅನುಕೂಲವಾಗುವಂತೆ ಒಂದು ಚಿಕ್ಕ ಅಡಿಗೆ ಭಾಗ ಸಹಿತವಾಗಿ ನಿರ್ಮಾಣ ಮಾಡಬೇಕಾಗಿದೆ. ಈ ಯೋಜನೆಯನ್ನು ಈಗ ಬೇಗನೆ ಕೈಗೊಳ್ಳಬೇಕಾಗಿದ್ದು, ಒಂದು ಲಕ್ಷ ರೂಪಾಯಿಗಳ ದೇಣಿಗೆ ಕೊಟ್ಟರೆ ಆ ದಾನಿಗಳ ಹೆಸರಿನಲ್ಲಿ ಅಥವಾ ಅವರು ಸೂಚಿಸಿದವರ ಸ್ಮರಣಾರ್ಥ ನಾಮಫಲಕವನ್ನು ಆ ಕಟ್ಟಡದ ಮುಂಭಾಗದಲ್ಲಿ ಹಾಕಲಾಗುವುದು. ಇಂಥ ಸಾಮೂಹಿಕ ಯಾತ್ರಿ ಧಾಮದ ನಿರ್ಮಾಣಕ್ಕೆಂದು ೫೦೦೦ (ಐದು ಸಾವಿರ) ರೂ. ಮತ್ತು ಮೇಲೆ ಕೊಟ್ಟರೆ ಹಾಗೆ ಕೊಟ್ಟವರ ಹೆಸರುಗಳನ್ನು ಸೇರಿಸಿ ಯಾತ್ರಿ ಧಾಮದ ಬಾಗಿಲಲ್ಲಿ ಹಾಕಲಾಗುವುದು. ಶರಣ ಮೇಳದ ಸಮಯದಲ್ಲಿ ದಾನಿಗಳಿಗೆ ಅಥವಾ ಅವರು ಸೂಚಿಸುವ ಜನರಿಗೆ ಇಂಥ ಕಟ್ಟಡಗಳನ್ನು ಕಾಯ್ದಿರಿಸಲಾಗುವುದು.

ಬಸವ ಮಂಟಪ ನಿರ್ಮಾಣ

ಕ್ರೈಸ್ತರಿಗೆ ಚರ್ಚ್, ಮುಸ್ಲೀಮರಿಗೆ ಮಸೀದಿ, ಸಿಖ್ಖರಿಗೆ ಗುರುದ್ವಾರಗಳು ಹೇಗಿರುತ್ತವೋ ಹಾಗೆ ಸಾಮೂಹಿಕ ಧರ್ಮಾಚರಣೆಗೆ ಧರ್ಮಮಂದಿರ ಅಗತ್ಯವೆಂದು ಧರ್ಮಪಿತ ಬಸವಣ್ಣನವರು ಅನುಭವ ಮಂಟಪವನ್ನು ರಚಿಸಿದರು. ಶರಣ ಧರ್ಮವು ಗುಡಿ ಸಂಸ್ಕೃತಿಗಿಂತಲೂ 'ಮಂಟಪ' ಎಂಬ ಶ್ರೇಷ್ಠ ಧರ್ಮಮಂದಿರದ ಪರಿಕಲ್ಪನೆ ನೀಡಿದೆ. ಅದೇ ಆದರ್ಶವಿಡಿದು ಬಸವ ಮಂಟಪಗಳನ್ನು ರಚಿಸಲಾಗುತ್ತಿದ್ದು ಕೂಡಲ ಸಂಗಮದ ಮಹಾಮನೆಯಲ್ಲೂ ಬಸವ ಮಂಟಪವನ್ನು ನಿರ್ಮಿಸಲಾಗುತ್ತಿದೆ. ಈಗಾಗಲೇ ದಿನಾಂಕ ೧೨-೧-೨೦೦೦ವಂದು ಆರೂವರೆ ಅಡಿ ಎತ್ತರದ ಅಭಯ ಹಸ್ತದ ನಿಂತ ನಿಲುವಿನ ಗುರು ಬಸವಣ್ಣನವರ ಅಮೃತಶಿಲಾ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಲಾಗಿದ್ದು, ಅದರ ಮುಂಭಾಗದಲ್ಲಿ ಬಸವ ಮಂಟಪವನ್ನು ನಿರ್ಮಿಸಲಾಗುತ್ತಿದೆ. ಇದರ ವೆಚ್ಚ ೧೦ ಲಕ್ಷ ರೂ.ಗಳಾಗಲಿದೆ. ಆದ್ದರಿಂದ ದಾನಿಗಳು ಉದಾರವಾಗಿ ಬಸವ ಮಂಟಪ ನಿರ್ಮಾಣಕ್ಕೆ ದೇಣಿಗೆ

Digitalized by e-Sahithya Documentation Forum
Sponsored by Sarayu Foundation Trust

ನೀಡಬೇಕೆಂದು ಕೋರುತ್ತೇವೆ. ತಮ್ಮ ತಮ್ಮ ಶಕ್ತ್ಯಾನುಸಾರವೂ ಕಟ್ಟಡ ನಿಧಿಗೆ ದೇಣಿಗೆ ನೀಡಲು ದಾನಿಗಳಿಗೆ ಅವಕಾಶವುಂಟು. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಸಂಸ್ಥೆಗೆ ೮೦ G ಇನ್‌ಕಮ್‌ಟ್ಯಾಕ್ಸ್ ರಿಯಾಯಿತಿ ಸಹ ಲಭ್ಯವಿದೆ.

ಬೆಂಗಳೂರು ಬಸವ ಮಂಟಪ / ಮಾತಾ ನೀಲಾಂಬಿಕಾ ಮಹಿಳೆಯರ ಹಾಸ್ಟೆಲ್

ಬೆಂಗಳೂರಿನ ರಾಜಾಜಿನಗರದ ೨ನೆಯ ವಿಭಾಗ ೨೦ನೆಯ ಮುಖ್ಯ ರಸ್ತೆಯಲ್ಲಿರುವ ಬಸವ ಮಂಟಪದ ಮಹಡಿಯ ಮೇಲೆ ಕಟ್ಟಿಸಿ ವಿವಿಧ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಹೆಣ್ಣು ಮಕ್ಕಳಿಗೆ ಉಚಿತ ಹಾಸ್ಟೆಲ್ ಸೌಲಭ್ಯ ಒದಗಿಸುವ ಯೋಜನೆಯನ್ನು ಹಾಕಲಾಗಿದೆ. ಗ್ರಾಮಾಂತರ ಪ್ರದೇಶಗಳಿಂದ ಬರುವ, ಆರ್ಥಿಕವಾಗಿ ದುರ್ಬಲರಾಗಿರುವ ಕುಟುಂಬಗಳ ಹೆಣ್ಣು ಮಕ್ಕಳಿಗೆ ಊಟ ವಸತಿಗಳನ್ನು ಉಚಿತವಾಗಿ ಕೊಡಲು ಏರ್ಪಾಡು ಮಾಡುವ ದಿಶೆಯಲ್ಲಿ ೧೬ ಅಡಿ X ೨೩ ಅಡಿ ಅಳತೆಯ ಆರ್.ಸಿ.ಸಿ ಕೊಠಡಿಗಳನ್ನು ನಿರ್ಮಿಸುವ ಯೋಜನೆ ರೂಪಿಸಲಾಗಿದೆ. ಇಂಥ ಒಂದೊಂದು ವಿಭಾಗಕ್ಕೆ ಎರಡೂವರೆ ಲಕ್ಷಕ್ಕೂ ಮಿಕ್ಕಿ ಖರ್ಚು ಬರುವುದು ಎಂದು ಅಂದಾಜಿಸಲಾಗಿದೆ. ಉದಾರ ದಾನಿಗಳು ಒಬ್ಬರೇ ಆ ವೆಚ್ಚವನ್ನು ಭರಿಸಬಹುದು. ಅಥವಾ ಒಂದೂವರೆ ಲಕ್ಷ ರೂ. ಕೊಟ್ಟರೂ ಅವರ ಹೆಸರನ್ನು ಅಥವಾ ಅವರು ಸೂಚಿಸುವ ಹೆಸರನ್ನು ಆ ವಿಭಾಗದ ದಾನಿಗಳೆಂದು ನಾಮಫಲಕವನ್ನು ಹಾಕಲಾಗುವುದು. ಈ ಯೋಜನೆಗೂ ಸಹ ೫೦೦೦ ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ನಾಮಫಲಕದಲ್ಲಿ ಹಾಕಲಾಗುವುದು. ಹೆಣ್ಣು ಮಕ್ಕಳಿಗೆ ಶಿಕ್ಷಣವು ಸ್ವಾವಲಂಬನೆ ಸಾಧಿಸುವಲ್ಲಿ ಅತ್ಯಂತ ಅವಶ್ಯವಿದ್ದು ಈ ಯೋಜನೆಗೆ ನೆರವು ನೀಡುವುದು ಬಹಳ ಉಪಕಾರದ ಕೆಲಸವೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ. ಅತ್ಯಗತ್ಯವಿರುವ ಈ ಯೋಜನೆಗಳು ಪೂರೈಸಿದ ನಂತರ ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಸ್ಮಾರಕ ನಿರ್ಮಾಣ, ದೆಹಲಿಯ ಸ್ಮಾರಕ ನಿರ್ಮಾಣದ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಬಸವ ಮಂಟಪ ನಿರ್ಮಾಣ

ಧಾರವಾಡ ನಗರದ ಉಳವಿ ರಸ್ತೆಯಲ್ಲಿರುವ ಜಗನ್ಮಾತಾ ಅಕ್ಕಮಹಾದೇವಿ ಮಠದ ಆವರಣದಲ್ಲಿ ಬಸವಾಲಯ, ಅಕ್ಕಮಹಾದೇವಿ ಶರಣಾಲಯ, ಚನ್ನಬಸವಣ್ಣನವರ ಶರಣಾಲಯ ಸೇರಿ, ಬೃಹತ್ ಪ್ರಾರ್ಥನಾ ಮಂದಿರವನ್ನು ಕಟ್ಟುವ ಯೋಜನೆ ಹಾಕಲಾಗಿದ್ದು ಕಟ್ಟಡವು ಪ್ಲಿಂಥ ಮಟ್ಟಕ್ಕೆ ಬಂದಿದೆ. ಮೊದಲನೆಯ ಅಂತಸ್ತಿನಲ್ಲಿ ಕೋಣೆಗಳನ್ನು ನಿರ್ಮಿಸಿ, ಇದಕ್ಕೆ ಹೊಂದಿಕೊಂಡಂತೆ ಅಡಿಗೆ ಮನೆ, ಪ್ರಸಾದ ನಿಲಯಗಳನ್ನೂ ಕಟ್ಟಿ ಮದುವೆಗೆ ಒದಗಿಸುವ ಯೋಜನೆಯನ್ನು ಧಾರವಾಡದ ಶರಣ ಬಂಧುಗಳು ಯೋಜಿಸಿದ್ದಾರೆ. ಈ ಬಗ್ಗೆ ವಿವರವಾದ ಪರಿಚಯ ಪತ್ರವನ್ನು ಮುದ್ರಿಸಲಾಗಿದೆ.

ಅಮೃತಶಿಲಾ ಬಸವ ಮೂರ್ತಿಯ ಸ್ಥಾಪನೆ

ಹಲವಾರು ಬಸವ ಮಂಟಪಗಳಲ್ಲಿ ಅಮೃತಶಿಲೆಯಿಂದ ಮಾಡಿದ ಅಭಯ ಹಸ್ತದ ಬಸವಣ್ಣನವರ ದಿವ್ಯ ಮೂರ್ತಿಗಳನ್ನು ಸ್ಥಾಪಿಸಲಾಗಿದ್ದು ಅತ್ಯಂತ ಸುಂದರವೂ, ಚಿತ್ತಾಕರ್ಷಕವೂ, ಧ್ಯಾನಕ್ಕೆ ಸಹಾಯಕವೂ ಆಗಿವೆ. ಅಭಯ ಹಸ್ತದ ಕುಳಿತ ಭಂಗಿಯ ಆಳೆತ್ತರದ ಮೂರ್ತಿಗೆ ಸಾಗಾಣಿಕೆಯ ವೆಚ್ಚವೂ ಸೇರಿ ಸುಮಾರು ಐವತ್ತು ಸಾವಿರ ರೂಪಾಯಿಗಳಾಗುತ್ತಿದ್ದು ಬೆಂಗಳೂರಿನ ಬಸವ ಮಂಟಪಕ್ಕೆ ಒಂದು, ಧಾರವಾಡದ ಅಕ್ಕಮಹಾದೇವಿ ಮಠಕ್ಕೆ ಒಂದು ಬೇಕಾಗಿವೆ. ಧಾರವಾಡದ ಅಕ್ಕಮಹಾದೇವಿ ಮಠದಲ್ಲಿ ಬಸವಾಲಯ ಮಾತ್ರವಲ್ಲದೆ, ಅಕ್ಕಮಹಾದೇವಿ ಶರಣಾಲಯ ಮತ್ತು ಚನ್ನಬಸವಣ್ಣನವರ ಶರಣಾಲಯವನ್ನು ಕಟ್ಟಿಸುತ್ತಿದ್ದು ಇಲ್ಲಿಗೂ ಜಗನ್ಮಾತಾ ಅಕ್ಕಮಹಾದೇವಿಯ ಅಮೃತಶಿಲಾ ಮೂರ್ತಿ

ಮತ್ತು ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಮೂರ್ತಿಗಳು ಬೇಕಾಗಿವೆ. ಸಾಗಾಣಿಕೆ ವೆಚ್ಚ ಸೇರಿ ಇವುಗಳಿಗೆ ಒಂದೊಂದಕ್ಕೆ ೪೦೦೦೦ (ನಲವತ್ತು ಸಾವಿರ) ರೂ.ಗಳ ಖರ್ಚು ಬರುತ್ತಿದೆ. ಇದಕ್ಕೆ ನೆರವು ನೀಡುವ ದಾನಿಗಳು ಸ್ವಯಂ ಪ್ರೇರಣೆಯಿಂದ ಮುಂದೆ ಬರಬಹುದು.

ಸಾಹಿತ್ಯ ಪ್ರಕಟಣೆಗೆ ಧನ ಸಹಾಯ

ಈ ಎಲ್ಲ ಯೋಜನೆಗಳ ಜೊತೆಗೆ ಸಾಹಿತ್ಯ ಪ್ರಕಟಣೆಯು ನಮ್ಮ ಸಂಸ್ಥೆಯ ಮಹತ್ತರವಾದ ಕಾರ್ಯ, ವಿವಿಧ ಗಾತ್ರದ ಗ್ರಂಥಗಳ ಪ್ರಕಟಣೆಗೆ ದಾನಿಗಳು ನೆರವು ನೀಡಲು ಸದಾ ಅವಕಾಶವಿರುತ್ತದೆ. ಆಸಕ್ತರು ವಿವರಗಳಿಗಾಗಿ ನೇರವಾಗಿ ಸಂಪರ್ಕಿಸಬಹುದು.

ಸಂಸ್ಥೆಯ ಮತ್ತು ಕಲ್ಯಾಣ ಕಿರಣ ಚಂದಾದಾರರಾಗಲು ಬಯಸುವವರಿಗೆ ಸೂಚನೆ

ಮೇಲೆ ಕಾಣಿಸಿದ ಸಂಸ್ಥೆಗಳು ಹಮ್ಮಿಕೊಳ್ಳುವ ವಿವಿಧ ಕಾರ್ಯಕ್ರಮ, ಸಮ್ಮೇಳನ, ಯೋಜನೆ ಮುಂತಾದವುಗಳ ಮಾಹಿತಿಯನ್ನು ಪಡೆಯ ಬಯಸುವವರು ೧೦೦೦ ರೂ. ಕೊಟ್ಟು ಸಂಸ್ಥೆಯ ಆಜೀವ ಚಂದಾದಾರರಾದರೆ ವಿವರವಾದ ಮಾಹಿತಿಯನ್ನು ಕಳಿಸಲಾಗುವುದು. ಸಂಸ್ಥೆಯು ನಡೆಸುವ ಕಲ್ಯಾಣ ಕಿರಣ ಮಾಸಪತ್ರಿಕೆಯ ಆಜೀವ ಸದಸ್ಯತ್ವವು ೫೦೦ ರೂ.ಗಳಿದ್ದು ಉಪಯುಕ್ತ ಮಾಸಪತ್ರಿಕೆಯಾದ ಕಾರಣ ತಪ್ಪದೆ ಆಜೀವ ಸದಸ್ಯರಾಗಬೇಕೆಂದು ಕೋರುತ್ತೇವೆ. ಇವರುಗಳು ಬೆಂಗಳೂರಿನಲ್ಲಿರುವ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಹೆಸರಿಗೆ ಆಜೀವ ಸದಸ್ಯತ್ವ/ಕಲ್ಯಾಣ ಕಿರಣ ಚಂದಾ ನೀಡಬೇಕು.

ಹೀಗೆ ವಿವಿಧ ಯೋಜನೆಗಳನ್ನು ಸಿದ್ಧಪಡಿಸಲಾಗಿದ್ದು ಆಸಕ್ತ ದಾನಿಗಳು ತಮ್ಮ ಶಕ್ತ್ಯಾನುಸಾರ, ಭಕ್ತ್ಯಾನುಸಾರ ಉದಾರವಾದ ಕಾಣಿಕೆ ನೀಡಲು ಮುಂದಾಗಬೇಕೆಂದು ಕೋರುತ್ತೇವೆ.

ನಿತ್ಯ ನಿರಂತರ ದಾಸೋಹ

"ಮರ್ತ್ಯದ ಹಂಗುಳ್ಳನ್ನಕ್ಕ ಸತ್ಯ ಶರಣರ ಸಂಗ, ನಿತ್ಯ ಜಂಗಮ ಸೇವೆ ಕೃತ್ಯವಿರಬೇಕು." ಎನ್ನುವುದು ಶರಣವಾಣಿ. ಆದಿ ಶರಣರ ಕಾಲದಲ್ಲಿ ನಿತ್ಯ ಜಂಗಮಸೇವೆ ಪ್ರಚಲಿತವಿದ್ದಿತು. ಇಂದು ಅದು ಸಾಧ್ಯವೂ ಇಲ್ಲ, ಸಾಧುವೂ ಅಲ್ಲ. ಆದ್ದರಿಂದ ಆದಾಯದ ಒಂದು ಪಾಲನ್ನು ಧರ್ಮ, ಸಮಷ್ಟಿ ಸಮಾಜದ ಸೇವೆಗಾಗಿ ಮೀಸಲಿಟ್ಟು ಸದಾ ಸತ್ಕಾರ್ಯಗಳಿಗೆ ಧನ ದಾಸೋಹ ಮಾಡುವ ಪರಿಪಾಠ ಬೆಳೆಸಿಕೊಳ್ಳಬೇಕು. ಭಾವಿಯ ನೀರು ತೆಗೆಯುತ್ತ ಹೋದಂತೆ ಒಸರುವಂತೆ ಸತ್ಕಾರ್ಯಕ್ಕೆ ಸಲ್ಲಿಸಿದಷ್ಟೂ ಲಿಂಗದೇವನ ಕೃಪೆ ಹರಿದು ಬಂದು ಸಂಪತ್ತು ವೃದ್ಧಿಯಾಗುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು.

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ, ಪೀಠಾಧ್ಯಕ್ಷರು

ಬಸವ ಧರ್ಮ ಪೀಠ (ರಿ.)

ಕೂಡಲ ಸಂಗಮ-೫೮೭೧೧೫
ತಾ-ಹುನಗುಂದ, ಜಿ-ಬಾಗಲಕೋಟೆ
ದೂರವಾಣಿ ೦೮೩೫೧-೫೮೦೩೮/೫೮೦೦೭

ವಿಶ್ವಕಲ್ಯಾಣ ಮಿಷನ್ (ರಿ.)
ಬಸವ ಮಂಟಪದ, ೨೦೩೫, ೨೦ನೇ ಮೇನ್
೨ನೇ ವಿಭಾಗ, ರಾಜಾಜಿನಗರ, ಬೆಂಗಳೂರು-೧೦
ದೂರವಾಣಿ :೩೩೨೫೩೩೫ /೩೩೨೭೮೦

ಜಗನ್ಮಾತಾ ಅಕ್ಕಮಹಾದೇವಿ ಮಠ (ರಿ.)
ಉಳವಿ ರಸ್ತೆ, ರೈಲ್ವೇ ಗೇಟ್ ಹತ್ತಿರ
ಧಾರವಾಡ-೫೮೦ ೦೦೩, ಜಿಲ್ಲೆ-ಧಾರವಾಡ
ದೂರವಾಣಿ : ೦೮೩೬-೭೭೩೦೦೫

Digitalized by e-Sahithya Documentation Forum
Sponsored by Sarayu Foundation Trust

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

೮೬೬೬೬

೨೦೧೧ನೆಯ ಇಸವಿಯಲ್ಲಿ ನಡೆಯುವ ಜನಗಣತಿಯಲ್ಲಿ "ಲಿಂಗಾಯತ" ಎಂದು ಬರೆಸಲು ಕಳಕಳಿಯ ಕರೆ

ಲಿಂಗಾಯತವು ವಿಶ್ವಗುರು ಬಸವಣ್ಣ (ಕ್ರಿ.ಶ.೧೧೩೪-೧೧೯೬) ನವರಿಂದ ಸ್ಥಾಪಿತವಾದ ಸ್ವತಂತ್ರ, ಸ್ವಾವಲಂಬಿ, ಪ್ರಗತಿಪರ ಧರ್ಮ, ಭಾರತದ ದೇಶದ ಜನಸಂಖ್ಯೆಯ ದೃಷ್ಟಿಯಿಂದ ಜೈನ, ಬೌದ್ಧ ಸಿಖ್ ಧರ್ಮಗಳ ಅನುಯಾಯಿಗಳಂತೆ ಲಿಂಗಯತರು ಧಾರ್ಮಿಕ ಅಲ್ಪಸಂಖ್ಯಾತರ ಸೌಲಭ್ಯಗಳನ್ನು ಪಡೆಯಲು ಅರ್ಹರು. ಭಾರತೀಯ ಪರಂಪರೆಯಲ್ಲಿ ಜನಿಸಿಯೂ ಬೌದ್ಧ, ಜೈನ, ಸಿಖ್ ಧರ್ಮಗಳು ಸ್ವತಂತ್ರ ಧರ್ಮಗಳು ಎಂದು ಮಾನ್ಯತೆ ಪಡೆದಿದ್ದರೆ, ಇವುಗಳ ಅನುಯಾಯಿಗಳು ಧಾರ್ಮಿಕ ಅಲ್ಪಸಂಖ್ಯಾತರು ಎಂದು ಮಾನ್ಯತೆ ಪಡೆದಿದ್ದಾರೆ. ಅದೇ ರೀತಿ ಲಿಂಗಾಯತ ಧರ್ಮವು ಮಾನ್ಯತೆ ಪಡೆಯಲು ಅರ್ಹವಾಗಿದೆ. ಏಕೆಂದರೆ ಒಂದು ಸ್ವತಂತ್ರ ಧರ್ಮಕ್ಕೆ ಇರಬೇಕಾದ ಎಲ್ಲ ಲಕ್ಷಣಗಳನ್ನು ಇದು ಹೊಂದಿದೆ.

೧.	ಧರ್ಮ ಸ್ಥಾಪಕರು	- ವಿಶ್ವಗುರು ಬಸವಣ್ಣನವರು
೨.	ಧರ್ಮ ಸಂಹಿತೆ	- ಸಮಾನತೆ ಸಾರುವ ವಚನ ಸಾಹಿತ್ಯ
೩.	ಧರ್ಮದ ದೇವರ ಹೆಸರು	- ಲಿಂಗದೇವ
೪.	ಧರ್ಮ ಲಾಂಛನ	- ನಿರಾಕಾರ ಲಿಂಗದೇವನ ಕುರುಹಾದ ಇಷ್ಟಲಿಂಗ
೫.	ಧರ್ಮ ಕ್ಷೇತ್ರ	- ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮ
೬.	ಧಾರ್ಮಿಕ ವಾರ್ಷಿಕ ಸಮಾವೇಶ	- ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ
೭.	ಧಾರ್ಮಿಕ ವ್ರತ	- ಶರಣ ವ್ರತ
೮.	ಧರ್ಮ ಧ್ವಜ	- ಷಟ್ಕೋನ ಸಹಿತ ಬಸವ ಧ್ವಜ
೯.	ಧರ್ಮ ಸಂಸ್ಕಾರ	- ಇಷ್ಟಲಿಂಗ ದೀಕ್ಷೆ
೧೦.	ಧರ್ಮ ಮಂದಿರ	- ಬಸವ ಮಂಟಪ
೧೧.	ಧಾರ್ಮಿಕ ಕೂಟ (ಶರಣ ಸಂಗಮ)	- ವಾರದ ಪ್ರಾರ್ಥನೆ
೧೨.	ಧಾರ್ಮಿಕ ಮಾಸ	- ಶ್ರಾವಣ
೧೩.	ಧರ್ಮ ಭಾಷೆ	- ಕನ್ನಡ
೧೪.	ಧರ್ಮ ಪರಂಪರೆ	- ಶರಣ ಪರಂಪರೆ
೧೫.	ಧಾರ್ಮಿಕ ಸೋದರತ್ವ	- ಜಾತಿ ವರ್ಣಾತೀತ ಸಮಾನತೆ
೧೬.	ಧರ್ಮದ ಧ್ಯೇಯ	- ಜಾತಿ ವರ್ಣ ವರ್ಗರಹಿತ ಧರ್ಮಸಹಿತ ಕಲ್ಯಾಣ ರಾಜ್ಯ (ಶರಣ ಸಮಾಜ) ನಿರ್ಮಾಣ

ಆದ್ದರಿಂದ ಜನಗಣತಿಯ ೮ನೆಯ ಕಾಲಂ ಧರ್ಮ (Religion) ದಲ್ಲಿ ಲಿಂಗಾಯತ (Lingayat-L) ಎಂದು ಬರೆಸಿರಿ. ಗಣತಿಕಾರರು ಸರಿಯಾಗಿ ಬರೆದಿರುವರೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ. ಗಣತಿಕಾರರು ನೀವು ತಿಳಿಸಿದರೂ ಅದರಂತೆ ಬರೆದುಕೊಳ್ಳದಿದ್ದರೆ ತಕ್ಷಣವೇ ಪ್ರತಿಭಟಿಸಿ, ನಾಗರಿಕ ಅಧಿಕಾರಗಳಾದ ತಹಸೀಲ್ದಾರ್, ಅಸಿಸ್ಟೆಂಟ್ ಕಮೀಷನರ್, ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿರಿ. ಇನ್ನೇನಾದರೂ ವಿವರಗಳು ಬೇಕಾಗಿದ್ದಲ್ಲಿ ಹಿಂದಿನ ಪುಟದಲ್ಲಿ ಕೊಟ್ಟಿರುವ ವಿಳಾಸಕ್ಕೆ ಸಂಪರ್ಕಿಸಿರಿ.

ವಿಶೇಷ ಎಚ್ಚರಿಕೆ : ವೀರಶೈವ ಪದವು ಲಿಂಗಾಯತದ ಸಮಾನಾರ್ಥ ಕೊಡುವ ಪದ ಎಂದು ಭಾವಿಸಿ ಅದನ್ನು ಬಳಸಿ ಲಿಂಗಾಯತ ಧರ್ಮಕ್ಕೆ ಸಿಗುವ ಮಾನ್ಯತೆಯನ್ನು ತಪ್ಪಿಸುವ ಪ್ರಮಾದ ಮಾಡಬೇಡಿರಿ.

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ ೪ (ವಿಧಿ ೮)

೧.	ಪ್ರಕಟಣೆಯ ಸ್ಥಳ	- ಬೆಂಗಳೂರು
೨.	ಪ್ರಕಟಣೆಯ ನಿಯತಕಾಲಿಕತೆ	- ಮಾಸಿಕ
೩.	ಮುದ್ರಕರ ಹೆಸರು	- ಸೋದರಿ ಕಸ್ತೂರಿ
	ಭಾರತದ ಪ್ರಜೆಯೆ ?	- ಹೌದು
	ವಿಳಾಸ	- ಪ್ರಭುದೇವ ಮುದ್ರಣಾಲಯ ಬಸವ ಗಂಗೋತ್ರಿ, ಕುಂಬಳಗೋಡು
೪.	ಪ್ರಕಾಶಕರ ಹೆಸರು	- ಬಿ. ಶಂಭುಲಿಂಗಯ್ಯ
	ಭಾರತದ ಪ್ರಜೆಯೇ	- ಹೌದು
	ವಿಳಾಸ	- ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ ಬೆಂಗಳೂರು-೫೬೦೦೧೦
೫.	ಸಂಪಾದಕರ ಹೆಸರು	- ಬಿ.ಶಂಭುಲಿಂಗಯ್ಯ
	ಭಾರತದ ಪ್ರಜೆಯೆ ?	- ಹೌದು
	ವಿಳಾಸ	- ಬಸವ ಮಂಟಪ ರಾಜಾಜಿನಗರ, ಬೆಂಗಳೂರು-೫೬೦೦೧೦
೬.	ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಸ ಶೇ. ೧ ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	- ವಿಶ್ವಕಲ್ಯಾಣ ಮಿಷನ್ (ರಿಜಿಸ್ಟರ್ಡ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್) ಬಸವ ಮಂಟಪ, ರಾಜಾಜಿನಗರ ಬೆಂಗಳೂರು-೫೬೦ ೦೧೦

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು, ನಾನು ಬಿ.ಶಂಭುಲಿಂಗಯ್ಯ ಘೋಷಿಸುತ್ತೇನೆ.

ದಿನಾಂಕ ೧-೩-೨೦೦೦

ಪ್ರಕಾಶಕ
ಬಿ.ಶಂಭುಲಿಂಗಯ್ಯ
ಕಲ್ಯಾಣ ಕಿರಣ, ಬೆಂಗಳೂರು-೧೦

Digitalized by e-Sahithya Documentation Forum
Sponsored by Sarayu Foundation Trust

ಕಲ್ಯಾಣ ಕಿರಣ CPMG/KA/BGW-50 ಏಪ್ರಿಲ್ 2000
R.No. 19988/70



Digitalized by e-Sahithya Documentation Forum
Sponsored by Sarayu Foundation Trust